ಪರಾಮರ್ಶನ ಗ್ರಂಥ
ಅಕ್ಷರ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

1956

258 Rare b
8Im2.6
KAI

...ಾಮರಾವ್

ಪುರಾಮಶೀಗಾನಿ

K.D. 157

SRI D.K.V. HIGH SCHOOL
LIBRARY
No..........
P. O. UJIRE, S. K.

Donated by Sri R.N. Bhide

ಏಕಲವ್ಯ

I D.K.V. HIGH SCHOOL
LIBRARY
No. 6416
P. O. UJIRE, S. Kanara.

ಮೂಲ
ಕೈಲಾಸಂ
ಅವರ ಇಂಗ್ಲಿಷಿನ "ಪರ್ಪಸ್"

ಅನುವಾದ
ಬಿ. ಎಸ್. ರಾಮರಾವ್

ಪರಿಷ್ಕರಣ
"ಶ್ರೀರಂಗ"

ಪ್ರಕಾಶನ
ಬಿ. ಎಸ್. ರಾಮರಾವ್, ೨೯೮/ಬಿ, ೩೫ನೆಯ ಕ್ರಾಸ್
ನಾಲ್ಕನೆಯ ಬ್ಲಾಕ್, ಜಯನಗರ, ಬೆಂಗಳೂರು-೧೧

ಇಂಗ್ಲಿಷ್ ಪರ್ಪಸ್ ಕೃತಿಯ

® 091188

ಕಾಪಿರೈಟ್
ಕೈಲಾಸಂ ಅವರದು

81n2.6
KAI Re

ಮೊದಲನೇ ಮುದ್ರಣ: ೧೯೫೪

ಎರಡನೇ ಮುದ್ರಣ: ೧೯೬೯

ಬೆಲೆ: ಎರಡು ರೂಪಾಯಿ

ಮುದ್ರಣ:
'ರಾಸ-ಪ್ರಿಂಟ್', ಜಯನಗರ, ಬೆಂಗಳೂರು-೧೧

ಉಡುಪಿಯ ಶ್ರೀ ಬಿ. ಪಿ. ಬಾಯಿರಿ ಅವರ ಕಲ್ಪನೆ

HIGH SCHOOL



ಕೈಲಾಸಂ

No. VP-24/967

VICE-PRESIDENT
INDIA

NEW DELHI

June 1, 1960

Dear Shri Rama Rao,

I note that Kailasam's 76th Birthday is on the 29th of July. I knew him when I happened to be at Mysore and I felt that he was a man of intense feeling and powerful expression. All his works manifest these qualities.

His plays were of live interest as he took up concrete problems of our country in transition and dramatised them with great force. Even when he used classical themes his purpose was contemporary.

I hope his writings will be read widely.

Yours sincerely,

(S. Radhakrishnan)

Shri B.S. Rama Rao,
c/o Praja Vani,
16, Mahatma Gandhi Road,
Bangalore-1

DEDICATED

in

All Humility

to

My Youthful Brothers

of

My Motherland

in

Happy Memory

of

My Youthful Years

* * *

IF YOUTH BUT KNEW!

IF AGE BUT COULD!

—KAILASAM

-: ಪಾತ್ರ ವಿವರ :-

ಭೀಷ್ಮ	—	ಕುರುಕುಲ ಪಿತಾಮಹ
ಅರ್ಜುನ ನಕುಲ ಸಹದೇವ	—	ಭೀಷ್ಮನ ಮೊಮ್ಮಕ್ಕಳು
ದ್ರೋಣಾಚಾರ್ಯ	—	ಗುರು
ಏಕಲವ್ಯ	—	ನಿಷಾದ ಬಾಲಕ

ಕಾಲ

ಮಹಾಭಾರತದ ಆದಿಪರ್ವ

"ಹಿಂದೆ, ಎಲ್ಲಿಯೋ. ಯಾವಾಗಲೋ,
ಅರಸಾಗಿಯೋ ಆಳಾಗಿಯೋ,
ಪುರೋಹಿತನಾಗಿಯೋ, ರಾಜನಾಗಿಯೋ,
ನಾ ಕಂಡ ಈ ದೃಶ್ಯಗಳ, ನಾ ಕೇಳಿದೀ ಮಾತುಗಳ
ನೀವೂ ಕಾಣುವಿರಿ ನೀವೂ ಕೇಳುವಿರಿ."

–ಕೈಲಾಸಂ

ಏ ಕ ಲ ವ್ಯ

ಅಂಕ ೧

[ಹಸ್ತಿನಾವತಿಯ ವ್ಯಾಯಾಮ ಶಾಲೆಗಳ ಬಯಲು. ಹಿಂಬಯಲಲ್ಲಿ ಬೆಳೆದ ಯುವಕರು ಕತ್ತಿ, ಗದೆ ಅಭ್ಯಾಸಗಳಲ್ಲಿ ತೊಡಗಿದ್ದಾರೆ; ನಡು ಬಯಲಲ್ಲಿ ಅರ್ಜುನ ಮರದ ಕೊಂಬೆಗೆ ತೂಗು ಹಾಕಿರುವ ಲಕ್ಷ್ಯಕ್ಕೆ ಗುರಿಯಿಟ್ಟು, ಬಿಲ್ಲಿನಿಂದ ಬಾಣವೆಸೆವ ಅಭ್ಯಾಸದಲ್ಲಿ; ಸಹದೇವ ನಕುಲರು ದ್ರೋಣಾಚಾರ್ಯರೊಡನೆ ಮುಂಬಯಲಲ್ಲಿ - ನಕುಲನ ಕೈಲಿ ಕುದುರೆಯ ಚಾವಟಿ, ಸಹದೇವನ ಕೈಲಿ ತನಗಿಂತ ಎತ್ತರದ ಬಿಲ್ಲು]

ಸಹದೇವ—(ಕೈಲಾಗದೆ ಮುಖ ಗಂಟಿಕ್ಕಿ) ಗುರುವರ್ಯ, ಈ ಬಿಲ್ಲನ್ನು ನಾ ಉಪಯೋಗಿಸಲಾರೆ! ಇದು ನನಗೆ ತೀರ ದೊಡ್ಡದು. ಅದನ್ನೆತ್ತಲೂ ನನ್ನಿಂದಾಗದಲ್ಲ!

ದ್ರೋಣ—(ಆಶ್ಚರ್ಯವನ್ನು ನಟಿಸುತ್ತ) ನಿನಗೆ ಈ ಬಿಲ್ಲು ದೊಡ್ಡದೇ? ಎಲಾ ಮಗು, ನೀನು ಕ್ಷತ್ರಿಯನೆಂಬುದನ್ನೇ ಮರೆತಂತಿದೆ. ಏಕೆ? ಕ್ಷತ್ರಿಯನೆನಿಸಿದವನಿಗೆ ಪ್ರಪಂಚದಲ್ಲಿ ಯಾವ ಬಿಲ್ಲೂ ತೀರ ದೊಡ್ಡದಲ್ಲ — ಎತ್ತಲೂ ಮಾತ್ರವಲ್ಲ, ಬಗ್ಗಿಸಿ, ಹೆದೆಯೇರಿಸಿ ಶರಸಂಧಾನ ಮಾಡಿ, ಎಳೆದು ಬಾಣವೆಸೆಯಲು ಯಾವುದೂ ದೊಡ್ಡದಲ್ಲ.

ಸಹದೇವ—(ಹೆಚ್ಚು ನೊಂದವನಂತೆ) ನಾನು ಕ್ಷತ್ರಿಯನೆಂದು ನನಗೆ ಗೊತ್ತಿದೆ ಗುರುವೇ! (ಪುನಃ ಯತ್ನಿಸಿ ಬಿಲ್ಲು ಜಗ್ಗುತ್ತ) ಆದರೆ **ನನಗೆ** ಇದು ನಿಜವಾಗಿ ಬಲು ದೊಡ್ಡದು; ಮತ್ತೆ ನಾನದನ್ನು ಎತ್ತಲೂ ಲಾರೆ!

ದ್ರೋಣ—ಓ! ಅದನ್ನು ಎತ್ತಲೂ, ಹಿಡಿಯಲೂ, ನೀನು ತಕ್ಕಷ್ಟು ದೊಡ್ಡವನಾಗಿಲ್ಲ ಎಂಬೆಯಾ ?

ಸಹದೇವ—(ಭ್ರಾಂತನಾಗಿ) ಹೇಗೆಂದರೇನು? ಮತ್ತದೇ ಅಲ್ಲವೇ?

ದ್ರೋಣ—ಅದೇನೇ? ಎಂದಿಗೂ ಅಲ್ಲ; ನೋಡು, ಚಿಕ್ಕವನಾದ ನಿನಗೆ ಆ ಬಿಲ್ಲು ದೊಡ್ಡದಲ್ಲ. ದೊಡ್ಡದಾದ ಆ ಬಿಲ್ಲಿಗೆ ನೀನಿನ್ನೂ ಚಿಕ್ಕವನು, ಅಷ್ಟೆ.

ಸಹದೇವ—ಮತ್ತೆ ತಿರಿಗಿ ಅದನ್ನೇ ಹೇಳಿದಿರಲ್ಲ ?

ದ್ರೋಣ—ಸರ್ವಥಾ ಅಲ್ಲ. ಬಿಲ್ಲು ತುಂಬ ದೊಡ್ಡದಾದರೆ ಅದನ್ನು ಯಾರೂ ನಿನಗಾಗಿ ಚಿಕ್ಕದು ಮಾಡಲಾರರು. ಆದರೆ ನೀನು ಚಿಕ್ಕವನಾದರೆ, ಅದನ್ನು ಎತ್ತಲೂ ಹೆದೆಯೇರಿಸಲೂ ಬಲವಿಲ್ಲದವನಾದರೆ, ದೊಡ್ಡವನಾಗಬಲ್ಲೆ, ಬಲವುಳ್ಳವನಾಗಲೂ ಬಲ್ಲೆ ಅದನ್ನು ಉಪಯೋಗಿಸಲು, ಅಲ್ಲವೆ ?

ಸಹದೇವ—(ಮಾತೆಳೆಯುತ್ತ) ಆಗಬಹುದೇನೋ...!

ದ್ರೋಣ—ಆಗಬಹುದೇನೂ?...ಆಗಬಲ್ಲೆ...ನಿನ್ನ ಅಣ್ಣ ಭೀಮನನ್ನು ನೋಡು. ಹೋದ ವಾರ ನಿನ್ನಂತೆಯೇ ಅವನೂ ತನ್ನ ಗದೆ ದೊಡ್ಡದು–ಎಂದು ಅದನ್ನೇ ದೂರುತ್ತಿದ್ದ. ಈಗಾದರೋ ಅದನ್ನೆತ್ತಲೂ ಆಗ ಅವನೇ ಬಲಿಷ್ಠನಾಗಿರಲಿಲ್ಲವೆಂದು ತೋರುತ್ತಿದೆ. ಏಕೆಂದರೆ ಅಗೋ, ನೋಡು, ಅದೇ ಗದೆಯನ್ನೇ ಅವನೀಗ ಹೂವಿನಂತೆ ಎತ್ತಿ ತಿರಿಗಿಸುತ್ತಿದ್ದಾನೆ. ಇಷ್ಟಾಗಲು, ಭೀಮ, ಕಳೆದ ಈ ಹನ್ನೊಂದು ದಿನ ಎಲ್ಲಿದ್ದ ಗೊತ್ತೆ ?

ಸಹದೇವ—ಗೊತ್ತು! ವ್ಯಾಯಾಮ ಶಾಲೆಯಲ್ಲಿ...

ದ್ರೋಣ—ಹ್ಹಾ! ಇನ್ನು ಹನ್ನೊಂದು ದಿನ ನೀನೂ ಅಲ್ಲಿಯೆ! ತಿಳಿಯಿತೆ? (ನಕುಲನ ಕಡೆ ಒಂದು ಕ್ಷಣ ನೋಡಿ ಬೇರೆ ಕಡೆ ಮುಖ ತಿರುಗಿಸಿ) ...ನಕುಲ! ನೀನೂ ಅಷ್ಟೆ...

ನಕುಲ—(ಬೆಚ್ಚಿ) ನಾನೇ ಗುರುವರ್ಯ...ಅದೇಕೆ ?

ದ್ರೋಣ—(ಮುಂಚಿನ ಹಾಗೇ ನೋಡುತ್ತಾ) ಇಂದು ಮುಂಜಾನೆ ನೀನು ಕುದುರೆ ಏರಿ ಹೋಗುತ್ತಿದ್ದಾಗ ಬಹುಶಃ ನಿನ್ನನ್ನು ನಾನು ಗಮನಿಸ ಲಿಲ್ಲವೆಂದುಕೊಂಡೆಯೇನೋ! ಗಮನಿಸಿದೆ...ಕುದುರೆಯ ಕತ್ತಿನ ಮೇಲಿನ ಕೂದಲು...ನಕುಲ...(ನಕುಲ ನಾಲಗೆ ಕಚ್ಚುವನು ಅಪರಾಧಿಯಂತೆ) ಕುದುರೆ ಹತ್ತಿರುವವನು ಹಿಡಿದುಕೊಳ್ಳಲಲ್ಲ...ಅಂದರೆ ಆ ಆರೋಹಿ ಹೆದರಿದ್ದರೆ... (ನಕುಲನನ್ನು ನೇರ ನೋಡುತ್ತ) ಆ ಮಾತು ಬೇರೆ ಅನ್ನು...

ನಕುಲ—(ನಾಚುತ್ತ ಬಿಂಕದಿಂದ) ಹೆದರಿದ್ದೆನೆ?...ಇಲ್ಲ ಗುರುವರ್ಯ. ನಾನು ಹೆದರಲಿಲ್ಲ! ಭಯವಲ್ಲ...ನನ್ನನ್ನು ಹಾಗೆ ಮಾಡಿಸಿದ್ದು...ಉಹು...

ದ್ರೋಣ—ಹಾಗಾದರೆ ಏನೋ...ನಿನ್ನನ್ನು...ಹಾಗೆ...ಮಾಡಿಸಿದ್ದು...?

ನಕುಲ—ನಾನು ಹಾಗೆ ಕೇಸರವನ್ನು ಹಿಡಿದದ್ದು...ಆ ತುಂಬ ಎತ್ತರ ವಾದ ಕುದುರೆಯಿಂದ ಜಾರಿ ಬೀಳದಿರಲು...ಅಷ್ಟೆ...ಆ ಕುದುರೆ ತುಂಬ ದೊಡ್ಡದು ಗುರುವರ್ಯ...ನನಗೆ!

ದ್ರೋಣ—(ಕೋಪ, ಜಿಗುಪ್ಸೆ ನಟಿಸಿ) ಹುಂ..."ಕುದುರೆ ತುಂಬ ದೊಡ್ಡದಂತೆ"...ಮತ್ತೆ ನೀನೊಬ್ಬ ಕ್ಷತ್ರಿಯ! ಇದೇ ತಾನೇ ನಿನ್ನ ಚಿಕ್ಕ ತಮ್ಮನಿಗೆ ಏನು ಹೇಳುತ್ತಿದ್ದೆನೆಂದು ತಿಳಿದರೆ...ಗೊತ್ತಾದೀತು ನಿನಗೂ...

ನಕುಲ—(ಮಧ್ಯೆ ಬಾಯಿ ಹಾಕಿ) ನೀವಂದುದು ನನಗೆ ಗೊತ್ತು ಗುರುವರ್ಯ...

ದ್ರೋಣ—ಏನು ಗೊತ್ತು...?

ನಕುಲ—ನೀವನ್ನುವುದಿದೇ ಗುರುವರ್ಯ...ನಾನು ಕ್ಷತ್ರಿಯನೆಂಬುದು ಮರೆಯಬಾರದು...ಮತ್ತೆ ಪ್ರಪಂಚದಲ್ಲಿ ಯಾವ ಬಿಲ್ಲೂ...ಅಂದರೆ ಯಾವ ಕುದುರೆಯೂ...ಕ್ಷತ್ರಿಯನಾದವನು ಎತ್ತಲಾರದಷ್ಟು ಅಲ್ಲ...ಹತ್ತಲಾರದಷ್ಟು... ಅಂದರೆ...ಕೇಸರವನ್ನು ಹಿಡಿಯದೆ ಏರಲಾರದಷ್ಟು ದೊಡ್ಡದಲ್ಲ...ಆ ಕುದುರೆ ಯಲ್ಲ ದೊಡ್ಡದು...ಏಕೆಂದರೆ ಯಾರೂ ಆ ಕುದುರೆಯನ್ನು ನನಗಾಗಿ ಚಿಕ್ಕದು

ಉಪಯೋಗ ಮಾತ್ರ...ಉದ್ದೇಶ್ಯವನ್ನು ಯಾರು ಬಲ್ಲರು...? ನಾವು ಸ್ವಲ್ಪ ಊಹಿಸಬಹುದಷ್ಟೆ...

ದ್ರೋಣ—ಉಪಯೋಗ...ಉದ್ದೇಶ್ಯ...ಊಹೆ...ನನಗರ್ಥವಾಗುತ್ತಿಲ್ಲ!

ಭೀಷ್ಮ—ಆಗುತ್ತಿಲ್ಲವೇ ನಿಮಗೆ...? (ಕೈಬೀಸಿ ಬಯಲಿನ ಕಡೆ) ಹಾಗಾದರೆ ಇತ್ತ ನೋಡಿ ಆಚಾರ್ಯ! ಇನ್ನು ಕೆಲವೇ ವರ್ಷ ನಿಮ್ಮ ಕೈ ಕೆಳಗೆ ಕಲಿಕೆ....ಅಷ್ಟರಲ್ಲಿ ಆ ಸುಯೋಧನ ಭೀಮಸೇನರ ಮೃದು ಭುಜ ಬಾಹುಗಳು ಬರಬರುತ್ತ ಬೃಹದಾಕಾರದ ಮಾಂಸದಂಡಗಳಾಗಿ ಸಾವಿರಾರು ತಲೆಗಳನ್ನು ಜಜ್ಜಿ ನುಚ್ಚುನುರಿ ಮಾಡಲು ಹಾತೊರೆಯುತ್ತಿರುತ್ತವೆ.... ಇನ್ನು ಕೆಲವೇ ವರ್ಷಗಳು ನಿಮ್ಮ ಕೈಲಿ ಕಲಿಕೆ ಆಚಾರ್ಯ....ಬಳ್ಳಿಗಳಂತೆ ಕೋಮಲವಾದ ಆ ಅರ್ಜುನನ ತೋಳುಗಳು ಬರಬರುತ್ತ ಸಾವಿರಾರು ದೇಹಗಳನ್ನು ಸೀಳಿ ಹೊರಬಂದ ರಕ್ತದ ಪ್ರವಾಹದಲ್ಲಿ ತಮ್ಮ ರಕ್ತದಾಹವನ್ನು ತೀರಿಸಿಕೊಳ್ಳಲಿರುವ ಬೆಂಕಿ ಕಾರುವ ಬಾಣಗಳನ್ನು ಬಿಡುವ ಆತುರದಿಂದಿರುವುವು. ಇಂತು ನಿಮ್ಮ ಚಚ್ಚರದ ಕಲಿಕೆಯಲ್ಲಿ ಇಲ್ಲಿರುವ ಒಬ್ಬೊಬ್ಬ ಹಸುಳೆಯೂ ಕಾಲಾನುಕಾಲದಲ್ಲಿ ಸರ್ವನಾಶಗೊಳಿಸುವ ಮಹಾ ಶಕ್ತಿಯ ಮೂರ್ತಿಸ್ವರೂಪರಾಗುವರು. ಇದೇ...ಇಷ್ಟೇ...ನಿಮ್ಮ ಕಲಿಕೆಯ ಉಪಯೋಗ ...ಆದರದರ ಉದ್ದೇಶ್ಯ...ಕೊನೆಯ ಲಕ್ಷ್ಯ...ಏನೋ...ಎಂತೋ? ನಮಗಿಲ್ಲ ಅದರರಿವು....ಊಹೆ ಮಾತ್ರ ಸಾಧ್ಯ....ಇನ್ನು ಆದರಲ್ಲೋ....ಸರಿಯಾಗಿ ಊಹಿಸಲು ಭಯ ಬೇರೆ!

ದ್ರೋಣ—ಸರಿಯಾಗಿ ಊಹಿಸಲು ಭಯವೇ....? ಹಾಗಾದರೆ ನಿಮ್ಮ ಊಹೆ ಏನೆನ್ನುತ್ತದೆ...ಭವಿಷ್ಯ ಕುರಿತು?

ಭೀಷ್ಮ—ಆಚಾರ್ಯ.....ಏನೆನ್ನುತ್ತದೆಯೋ? ....ನಿರ್ಮೂಲನವೆನ್ನುತ್ತದೆ...! ಇಡೀ ಕುರುವಂಶದ ನಿರ್ಮೂಲನ....ಅದೂ ಅವರ ಕೈಯಿಂದಲೇ! ನಿಮಗಚ್ಚರಿಯೇ...ಆಚಾರ್ಯ! ಹಾಗಾದರೆ ಕೇಳಿ..."ಜ್ಞಾತಿಶ್ಚೇತ್ ಅನಲೇನ ಕಿಂ"? ಜ್ಞಾತಿಗಳಿರುವಾಗ ಇನ್ನು ಬೆಂಕಿಯೇಕೆಂಬ ನುಡಿ, ಪ್ರಪಂಚದ ಒಂದೊಂದು ವಂಶದ ಹಣೆಬರಹವನ್ನೂ ಹೇಳುತ್ತದೆ.....ಅಂತೆಯೇ ನನ್ನ ವಂಶದ್ದೂ ಕೂಡ....

ಈ ನಿರ್ಭಾಗ್ಯ ಮಕ್ಕಳು ತೊಟ್ಟಿಲಿನಿಂದಲೇ ದಾಯಾದಿವೈರದ ಶಾಪ ತಟ್ಟಿದವರು. ಅವರ ಬಂಧು ಬಾಂಧವರು, ತಂದೆತಾತಂದಿರು, ಈ ಸರ್ವ ನಾಶದ ಕಲಹದಲ್ಲಿ, ಈ ಪಕ್ಷ ಇಲ್ಲವೇ ಆ ಪಕ್ಷ ವಹಿಸುವವರು. ನಿತ್ಯ ನಡೆಯುವ ಆ ಸಭೆಯೋ, ಈ ರಕ್ತ ಸಂಬಂಧಿಗಳನ್ನು ಒಟ್ಟುಗೂಡಿಸುವ ಬದಲು ಭೇದಿಸಿ ಬೇರ್ಪಡಿಸುತ್ತಿದೆ...ಪರಸ್ಪರ ಅಸೂಯೆಗಳ ಕೆಂಡವಾರಿಸುವ ಬದಲು ಊರಿ ಉರಿಯೆಬ್ಬಿಸುತ್ತಿದೆ. ಇದೆಲ್ಲಕ್ಕಿಂತ ಮಿಗಿಲು...ನೀವವರಿಗೀಯು ತ್ತಿರುವ ಕ್ಷಾತ್ರ ಶಿಕ್ಷಣ ಅವರು ಕಾಲ್ಕೆರೆಯುತ್ತ ನಿಂತಿರುವ ಸರ್ವನಾಶಸಮರಕ್ಕೆ ಸಿದ್ಧಗೊಳಿಸಿ ಬಲ ತುಂಬುತ್ತಿದೆ—ಅವರ ವೈರಭಾವಗಳನ್ನು ಮನಸ್ವೇಚ್ಛೆಯಾಗಿ ಹರಿಯಬಿಡಲು ಇಂಬುಗೊಡುತ್ತಿದೆ. ಹೀಗೆಲ್ಲ ಇರುವಾಗ...ನನ್ನ ಊಹೆ ಮತ್ತೇನನ್ನು ತಾನೆ ಹೇಳೀತು?...ಈ ಕುರುವಂಶದ ಸಂಪೂರ್ಣ ನಾಶವನ್ನಲ್ಲದೆ? ಅದೂ ಅವರ ಗೋತ್ರೋದ್ಧಾರಕರಿಂದಲೇ! ಬೆಳಗೂ ಬೈಗೂ ನನಗದೇ ಚಿಂತೆ...ಕುರುವಂಶದ ಕೊನೆ ಇಂತು ಭಯಂಕರವಾಗುವುದೆಂಬ ಭೀತಿ!

ನನ್ನ ವಂಶದ ಸಂರಕ್ಷಣೆ, ನನ್ನ ಜೀವನದ ಒಂದೇ ಕರ್ತವ್ಯ...ನನ್ನ ವಂಶದ ಅಭಿವೃದ್ಧಿ, ನನ್ನ ದೀರ್ಘ ಜೀವನದ ಒಂದೇ ಕಾರಣ. ಅಂತೆ ನಾನೆಸಗುತ್ತಿರುವ ಈ ಯತ್ನಗಳಲ್ಲಿ, ಈ ನನ್ನ ವಂಶದೆದುರೇ ಕಾದಿರುವ ಆ ಸರ್ವನಾಶದಲ್ಲಿ, ನನ್ನ ಪಾತ್ರ ತಿಳಿದೂ ತಿಳಿದೂ ಎಷ್ಟರಮಟ್ಟಿಗೆ ಎಂಬುದರ ಅರಿವುಂಟಾಗಲಿ ನನಗೆ, ಎಂಬುದೊಂದೇ ನನ್ನ ಮೊರೆ ಆ ದೇವದೇವನಲ್ಲಿ. (ತಲೆ ತಗ್ಗಿಸಿ ಕುಸಿದಂತೆ ತನ್ನೆರಡೂ ಕೈಗಳಲ್ಲಿ ನೊಂದ ಮುಖ ಮುಚ್ಚುವರು)

ದ್ರೋಣ—(ಸಂತೈಸುತ್ತ) ಆದರೆ – ಗಾಂಗೇಯ – ಇವೆಲ್ಲ ಬರಿಯ ಊಹೆ ತಾನೇ...? ಈ ಸರ್ವನಾಶ, ಈ ಮಹದಾಪತ್ತು–ನೀವು ಹೇಳುತ್ತಿರು ವುದು–ನಿಶ್ಚಯತೆ ಇಲ್ಲದ್ದು–ಅಲ್ಲವೆ ?

ಭೀಷ್ಮ—(ಕಹಿಮಾತೆನ್ನುತ್ತ) ಇಲ್ಲ ಆಚಾರ್ಯ–ಅದು ನಿಶ್ಚಿತವಲ್ಲ–ಆ ಅನಿಶ್ಚಿತತೆಗಾಗಿಯೆ ಅಲ್ಲವೆ ನಾವು ಹೀಗೆ ನಿರ್ಬಲರಾಗಿ, ನಿರಾಶರಾಗಿ ನಿಲ್ಲುವುದು ? ನಿಶ್ಚಿತತೆಯ ನಡುಹಗಲಿನಲ್ಲಿ ಎಂಥ ವಿಪತ್ತಿನೆದುರೂ ಸೆಟೆದು ನಿಲ್ಲಬಹುದು. ನಿಶ್ಚಲತೆಯಿಂದ ಕಂಡ ವಿಪತ್ತು, ತಿಳಿದ ಗಂಡಾಂತರ,

ಅರಿತುಕೊಂಡ ಆಪತ್ತು, ಭಯದಾಯಕವಲ್ಲ. ವಿಪತ್ತು ಮತ್ತು ಮೃತ್ಯುಗಳ ಘರ್ಷಣೆಯಿಂದುದ್ಭವಿಸಿದ ಬೆಂಕಿಯಲ್ಲಿ, ಭಯವೆಂಬುದು ಸುಟ್ಟುಹೋಗುವುದು. ಇನ್ನು ವಿಪತ್ತು ಕಾಣದ, ತಿಳಿಯದ, ಘೋರ ಅಂಧಕಾರವಿದ್ದಾಗ ನಾವು ಕುರುಡು ನಂಬುಗೆಯಿಂದ, ತೀವ್ರ ನಿರಾಶೆಯಿಂದ, ಧೈರ್ಯವಾಗಿ ಸೆಣಸಲು ಮುಂದರಿಯಬಹುದು. ಆದರೆ ತಿಳಿದೂ ತಿಳಿಯದ ಮೊಬ್ಬಿನಲ್ಲಿ ಕಾದಾಡುವುದೆಂದರೆ ಮೈರಕ್ತ ತಣ್ಣಗಾಗುತ್ತದೆ, ಚಳಿ ಹಿಡಿಯುತ್ತದೆ...... ಮೈ ಜೋಮು ಹಿಡಿಯುತ್ತದೆ, ಹೋರಾಡುವ ಸಂಕಲ್ಪವೇ ಸೋತು ಬೀಳುತ್ತದೆ...ಆ ಮಸಕಿನಲ್ಲಿ ಆ ಅಪಾಯವು ಸ್ಪಷ್ಟರೂಪ ತೋರುವುದೂ ಇಲ್ಲ, ಪೂರ್ತಿ ಕಣ್ಮರೆಯಾಗುವುದೂ ಇಲ್ಲ...ಹೋಗಲಿ–ನಮ್ಮ ಭಯವೇ ಬೇಡಿ ಚಿತ್ರಿಸಿಕೊಂಡ ಯಾವುದೇ ರೂಪ ತಾಳುವುದೂ ಇಲ್ಲ...ಅದೇ...ಆಚಾರ್ಯ, ನಾ ಕಲ್ಪಿಸಿದ ಮೊಬ್ಬು, ಮಸಕು ಅನಿಶ್ಚಯ ಜ್ಞಾನದ ಮಸಕು. ಇದರ ಮುಸುಕಿನಲ್ಲೇ ಈ ಕಲಿಕೆಯ ಉದ್ದೇಶ್ಯ ಮುಚ್ಚಿಹೋಗಿರುವುದು. ಈ ಕಲಿಕೆಯ ಉಪಯೋಗ ಮಾತ್ರ ನಮಗೆ ಗೊತ್ತು (ಮಾತು ಕೊನೆ ಮುಟ್ಟಿಸುವಂತೆ) ಆಚಾರ್ಯ—ಈ ನಾಟಕದ ಉದ್ದೇಶ್ಯ ನಮಗೆ ತಿಳಿಯದು. ಅದರಲ್ಲಿನ ಒಂದೊಂದು ಸಾಲೂ ನಮಗೆ ಗೊತ್ತಿದೆ. ಒಂದೊಂದು ದೃಶ್ಯವನ್ನು ತೋರಿಸಿ ಅಭಿನಯಿಸುತ್ತಿದ್ದೇವಷ್ಟೆ. ಯಾವುದೋ ಪ್ರಯಾಣದ ಹೆದ್ದಾರಿ ಗಳಲ್ಲಿ ಇಡುತ್ತಿರುವ ಒಂದೊಂದು ಹೆಜ್ಜೆ ನಮಗೆ ತಿಳಿದಿದೆ ಆಚಾರ್ಯ... ಆದರೆ ಹೆಜ್ಜೆಯ ಮುಂದೆ ಹೆಜ್ಜೆಯನ್ನಿಟ್ಟು ಸಾಗಿದ ಪಯಣದ ಗುರಿ ಮಾತ್ರ ನಮಗೆ ತಿಳಿಯದಾಗಿದೆ; ಕೊನೆಯ ಹೆಜ್ಜೆ ಎಲ್ಲಿಗೆ ಎಂಬುದು ಅರಿಯ ದಾಗಿದೆ.

ದ್ರೋಣ—ಆದರೂ ಗಾಂಗೇಯ...ಏನಾಗುವ ಮೊದಲು...ಎಂತಾದ ರಾಗುವ ಮುನ್ನ...ಇದೆಲ್ಲದರ ಉದ್ದಿಶ್ಯ (ಮೇಲೆ ನೋಡುತ್ತ) ಆ ದೇವದೇವ ನಿಗೇ ಗೊತ್ತೆಂದು ನಾನಲ್ಲ ನಿಮಗೆ ಜ್ಞಾಪಿಸಬೇಕಾದುದು...ನಮ್ಮ ಪಾಲಿನ ಕೆಲಸವೆಂದರೆ ದುಡಿಯುವುದಷ್ಟೇ ತಾನೆ...ಉಳಿದುದೆಲ್ಲವನ್ನೂ ಅವನಿಗೆ ಬಿಟ್ಟು...?

ಭೀಷ್ಮ—(ಗಂಭೀರಧ್ವನಿಯಿಂದ) ನಾನದನ್ನು ಮರೆತಿಲ್ಲ ಆಚಾರ್ಯ!

ನನ್ನ ಜೀವನದ ದುಡಿತದಿಂದ ನನ್ನ ಉದ್ದೇಶ್ಯ ಸಫಲ ಇಲ್ಲವೆ ವಿಫಲ, ಆ ಫಲವಾದರೂ ಸಿಹಿ ಇಲ್ಲವೆ ಕಹಿಯಾಗುವುದು, ಆ ದೇವದೇವನ ಉದ್ದೇಶ್ಯಕ್ಕೆ ಹೊಂದುವುದು, ಎಂದು ನಾನು ತಿಳಿದಿದ್ದೆ. ಕರ್ಮಫಲಕ್ಕಾಗಿದ್ದ ಕಾತರ, ಈಶನ ಉದ್ದೇಶ್ಯಕ್ಕಾಗಿದ್ದ ಭೀತಿ – ಇವೆರಡನ್ನೂ ಹತ್ತಿಕ್ಕಿ ಸರ್ವಸ್ವಿಯಾಗಿ ದುಡಿತದಲ್ಲಿಯೇ ತೊಡಗುವುದು ಕಠಿಣ, ಆಚಾರ್ಯ! ನನಗೆ ಅದು ತೀರ ಕಠಿಣ. ಇನ್ನು ದುಡಿಮೆಯೇ ?...ಅದು ನನಗೆ ಹೊಸತಲ್ಲ, ಹೊರಗಿನದಲ್ಲ. ಅತ್ಯಂತ ಕಠೋರ ಪರಿಶ್ರಮವನ್ನೂ ಮೈಯುಂಡವ ನಾನು. ನನ್ನ ಜೀವನಕತೆ ನಿಮಗೆ ತಿಳಿಯದು ಆಚಾರ್ಯ...ನೀವಿನ್ನೂ ಚಿಕ್ಕವರು... ಆದರೆ ಅದರ ವಿಷಯ ನೀವು ಕೇಳಿರಬಹುದು. ದುಡಿತ! ಹುಂ... ಚಿಕ್ಕಂದಿನಿಂದ ನನ್ನ ಜೀವನವೆಲ್ಲ ದುಡಿತ, ದುಡಿತ...ದುಡಿತ! ನನ್ನಮಟ್ಟಿಗೆ ನಿಷ್ಪ್ರಯೋಜಕವಾದ ದುಡಿತ, ನನಗೆಂದೂ ಸಂತಸವನ್ನು ತಾರದ ದುಡಿತ... ಇನ್ನು ಈ ದುಡಿಮೆಯೆಲ್ಲ ನನ್ನ ವಂಶಕ್ಕಾದರೂ ಪ್ರಯೋಜನವಾದೀತೆಂಬ ಭ್ರಾಂತಿ—ಇದುವರೆಗಿದ್ದಿತು; ಈಗ ಆ ಭ್ರಾಂತಿಯೂ ಬಯಲಾಯಿತು... ನನ್ನ ಕರ್ತವ್ಯದ ತೀವ್ರತೆ, ಗಭೀರತೆ, ಕಷ್ಟ, ನನ್ನ ಕೈಯನ್ನು ಹಿಂದಕ್ಕೆಳೆಯಲಿಲ್ಲ; ಮನಸ್ಸಿನ ಅಸಂತುಷ್ಟಿ......ನನ್ನ ಉತ್ಸಾಹವನ್ನು ಕುಂದಿಸಿಲ್ಲ; ಬಾಂಧವ ಸಂಹಾರವು ಕಟ್ಟಿಟ್ಟುದು, ಅದನ್ನು ಇನ್ನು ಈ ಕುರುಕುಲಕ್ಕೆ ತಪ್ಪಿಸಲು ನಾನು ಅಸಹಾಯ, ಎಂಬ ಅರಿವು ಕೂಡ ಪ್ರಯತ್ನ—ಪರಿಶ್ರಮದಿಂದ ನನ್ನನ್ನು ತಡೆದಿಲ್ಲ. ಆದರೋ ಆಚಾರ್ಯ... ಕುರುವಂಶವನ್ನೊಂದು ಶಾಶ್ವತ ಪೀಠ ಕಟ್ಟಿ ನೆಲೆಗೊಳಿಸಬೇಕೆಂದೇ ಈ ನಿಸ್ಸಾರ ಜೀವನವನ್ನೆಳೆದು ಸಾಗಿಸಿಕೊಂಡು ಬಂದು, ಈಗ, ಈ ಹಂತದಲ್ಲಿ, ಅದೇ ಪೀಠವನ್ನು, ಅದೇ ಕಟ್ಟಡವನ್ನು ಬಲಗೊಳಿಸುವುದಕ್ಕೆಂದು ಹೊಸ ಹೊಸದಾಗಿ ನಾನಿಡುತ್ತಿರುವ ಒಂದೊಂದು ಕಲ್ಲೂ ಈ ಮೊದಲೇ ಇಟ್ಟಿರುವ ಹಲವಾರು ಕಲ್ಲುಗಳನ್ನು ಕಳಚಿ ಕೆಳಗೆ ಬೀಳಿಸುತ್ತಿದೆಯೆಂಬುದರಿತೂ...ಈ ಕಟ್ಟಡದ ಕೆಲಸ ಮುಂದುವರಿದಂತೆ, ಇದರ ಕೊನೆಯೆಂದರೆ ನನ್ನ ವಂಶ ಕುಸಿಯುವುದೆಂದೇ ಅರಿತೂ ಹಿಂದೆಗೆಯದೆ ದುಡಿಮೆಯನ್ನು ಮುಂದುವರಿಸುವುದು ಬಹು ಕಠಿಣ ಆಚಾರ್ಯ—ಬಹು ಕಠಿಣ. ತನ್ನ ಜೀವನದ ದುಡಿಮೆಯೇ ಕಾರಣವಾಗಿ ಅದೇ ದುಡಿಮೆಯ ಫಲ ಆ ಜೀವನದಲ್ಲಿ ಕಹಿಯಾಗಿ ಪರಿಣಮಿಸುತ್ತದೆಯೆಂಬು

ದನ್ನು ಕಂಡೂ ಕಂಡೂ ಮತ್ತೆ ದುಡಿಯುತ್ತಿರುವುದಂತೂ ತುಂಬ ಕಠಿಣ, ಆಚಾರ್ಯ, ತುಂಬ ಕಠಿಣ...

ಆದರೆ ನನಗೇನೋ ಹೇಳುತ್ತಿದೆ......ಇಲ್ಲಿ......ಇದೆಲ್ಲ ಕಠಿಣವೇ ಸರಿ... ಇದರ ಕೊನೆಯ ಫಲಕ್ಕೆ ನಾನು ಕುರುಡಾಗಲೇ ಬೇಕು...ದುಡಿಯಬೇಕು. ಕೊನೆಯವರೆಗೂ ದುಡಿಯಬೇಕು...ಎಂದು...ನಾನು ಮರೆಯದಿದ್ದುದನ್ನು ನೀವು ನೆನಪಿಗೆ ತಂದುದೊಳಿತೇ ಆಯಿತು. ಅದೆಂದರೆ ಎಲ್ಲಕ್ಕಿಂತ ಮೊದಲು... ಇವೆಲ್ಲದರ ಉದ್ದೇಶ್ಯ ಆತನಿಗೆ ಗೊತ್ತು, ನಮಗಲ್ಲ ಎಂದು.

ಇದೀಗ...ನಾನು ನಿಜವಾಗಿ ಮರೆತದ್ದನ್ನು ನೆನಪಿಗೆ ತಂದುಕೊಳ್ಳುತ್ತೇನೆ... ನನ್ನ ದುಡಿಮೆಯ ಫಲ ಕಹಿಯೋ–ಸಿಹಿಯೋ...ಅದೆಲ್ಲ ಆತನಿಗೆ ಸೇರಿದುದೇ... ಎಲ್ಲ ಕರ್ಮದ ಉದ್ದೇಶ್ಯ ಬಲ್ಲವನಾತ. ಕರ್ಮ ಫಲವೆಲ್ಲ ಆತನದು... ನನ್ನದಲ್ಲ...ಇದುವರೆಗೆ ನನ್ನದೆನಿಸಿಕೊಳ್ಳುವುದು, ಕೊನೆಯವರೆಗೆ–ನನ್ನದಾಗಿಯೇ ನಿಲ್ಲುವುದು ಕೇವಲ ನನ್ನ ಕರ್ಮ ಮಾತ್ರ...ನನ್ನ ದುಡಿಮೆ ಮಾತ್ರ... ಇನ್ನಾವುದೂ ಅಲ್ಲ...

ಈಗ ನನ್ನ ಕಣ್ಣು ತೆರೆಯಿತು ಆಚಾರ್ಯ...! ನನ್ನ ಕರ್ಮದ ಸಿಹಿಫಲ ನನ್ನದೆಂದೇ ಮೊದಲು ನಾ ತಿಳಿದಿದ್ದು, ನನ್ನ ಕರ್ಮದ ಫಲಕ್ಕೆ ನಾನೇ ಪಾತ್ರನೆಂದು ಭ್ರಮಿಸಿದ್ದೇ ನನ್ನಲ್ಲಿ ಈ ಸಂತೋಷ–ದುಃಖ, ಆಸೆ–ನಿರಾಸೆ, ಭಯ–ಗರ್ವ ಈ ಭಾವನೆಗಳನ್ನು ಹುಟ್ಟಿಸಿದುದು...ಈಗಾ ಭಾವನೆಗಳೆಲ್ಲ ಮಾಯವಾದವು, ತಮ್ಮಷ್ಟಕ್ಕೆ ತಾವೇ......ಈಗ ಕಂಡು ಕೊಂಡೆ, ಉತ್ತು ಬಿತ್ತುವುದು ಮಾತ್ರವೇ ನನ್ನ ಕಾರ್ಯ, ಕುಯಿಲೆಲ್ಲ ಆತನೊಬ್ಬನದೇ...ಎಂದು. ಹೆಚ್ಚೇನಿಲ್ಲ...ಈ ದ್ವಂದ್ವ ಭಾವನೆಗಳೆಲ್ಲ ಈಗ ಮರೆಯಾದವು. ಹು! ಇದರ ಅಂತ್ಯ ಹೇಗಾದರಾ ಗಲಿ: ಆಚಾರ್ಯ...ಬೇಗ ಕೊನೆ ಆಗಿ ಹೋಗಲಿ......ಈ ಕರ್ತವ್ಯದಲ್ಲಿ ನಿಮ್ಮ ಪಾತ್ರವನ್ನಂತೂ ಬೇಗ ಮುಗಿಸಿಬಿಡಿ...ನನಗೆ ಸಾಕಾಗಿ ಹೋಗಿದೆ... ವಿಶ್ರಾಂತಿ...ದೀರ್ಘ...ಕೊನೆಯ ವಿಶ್ರಾಂತಿ ನನಗೆ ಬೇಕಾಗಿದೆ...ಈಗ ತಿಳಿಯಿತೆ ನಿಮಗೆ?...ನಿಮ್ಮ ಶಿಷ್ಯರ ಕಲಿಕೆ ನಿಧಾನವಾಗುತ್ತಿದೆಯೆಂಬುದಕ್ಕೆ ನನಗೇಕೆ ರೇಗಿತೆಂದು! (ಅತ್ತಿತ್ತ ಕಣ್ಣಾಡಿಸಿ, ಅರ್ಜುನನ ಕಡೆ ದೃಷ್ಟಿ

ಇಟ್ಟು ವ್ಯಗ್ರವಾಗಿ) ಆ ಮಗು ಅರ್ಜುನನನ್ನು ನೋಡಿ...ತನ್ನ ದೇಹವೆಲ್ಲಾ ಮರದಂತೆ ಜಡವಾಗಿಸಿ ನಿಂತಿದ್ದಾನಲ್ಲಾ...ಒಂದೆರಡು ಬಾಣವೆಸೆಯುವುದರಲ್ಲೇ ಆಯಾಸಗೊಳ್ಳುತ್ತಾನಲ್ಲ...ಅವನು...... (ತಡೆದು, ತಪ್ಪೊಪ್ಪಿಕೊಂಡವನಂತೆ ಕಿರುನಗೆಯಿಂದ) ಕ್ಷಮಿಸಿ...ಆಚಾರ್ಯ......ನನ್ನ ಮೊಮ್ಮಗ ಸುಯೋಧನ ನೆನ್ನುತ್ತಾನೆ, ಅರ್ಜುನ ನಿಮ್ಮ ಮೆಚ್ಚಿನ ಶಿಷ್ಯನೆಂದು! ಅವನ ಸಾಧನೆ ಅಲ್ಲಗಳೆ ದುದಕ್ಕೆ...ಕ್ಷಮಿಸಬೇಕು.

ದ್ರೋಣ—(ಮುಗುಳು ನಗುತ್ತ ಆದರೂ ಅಲ್ಪ ನೊಂದವನಂತೆ) ನನ್ನ ಮೆಚ್ಚಿನ ಶಿಷ್ಯನೇ ? ನನಗೆ ಹಾಗೆ ಯಾರೊಬ್ಬರ ಮೆಚ್ಚಿಲ್ಲವಲ್ಲ ? ಇತರ ಶಿಷ್ಯ ರಿಗಾಭಾವನೆ ಬರುವಂತೆ ನಾನು ವರ್ತಿಸಿಯೂ ಇಲ್ಲವಲ್ಲ? ಗಾಂಗೇಯ... ನಿಮಗೆ ಗೊತ್ತಲ್ಲವೆ...ನನ್ನ ಸ್ವಭಾವ...ಗುಣ...?

ಭೀಷ್ಮ—ನನಗೆ ಗೊತ್ತು ಆಚಾರ್ಯ...ನನಗೆ ಗೊತ್ತು...ಆದರೆ ನಿಮ್ಮ ಕೆಲಸದಲ್ಲಿ ಎಷ್ಟು ಕಷ್ಟವಿದೆಯೆಂಬುದನ್ನು ತೋರಲು ನಿಮಗದನ್ನು ಹೇಳಿದೆ ನಷ್ಟೇ. (ನಗುವ; ಜೊತೆಗೆ ದ್ರೋಣನೂ)

ದ್ರೋಣ—ನಿಜ...ಗಾಂಗೇಯ...ಒಳ್ಳೆಯದನ್ನೇ ಎಸಗಿದಿರಿ.

ಭೀಷ್ಮ—ನನಗೀಗಲೂ ಆಶ್ಚರ್ಯ, ಆಚಾರ್ಯ...ಏನಾಯಿತೋ ಬೆಳಿಗ್ಗೆ ನನಗೆ...ಏರುಪೇರು ?...ಕೋಪ ತಳೆದೆನಲ್ಲ ?

ದ್ರೋಣ—(ವಿಸ್ಮಯ ನಟಿಸಿ ಕಿರುನಗುತ್ತ) ಕೋಪ ತಳೆದಿರಾ ? ಹಾಗದನ್ನು ತಳೆಯಲು ಕೋಪ ನಿಮ್ಮಲ್ಲಿ ಇದ್ದುದೇ ನನಗೆ ತಿಳಿಯದು!

ಭೀಷ್ಮ—ನನಗೂ ತಿಳಿದಿರಲಿಲ್ಲ ಆಚಾರ್ಯ, ನನ್ನಲ್ಲಿ ಕೋಪವಿದೆಯೆಂದು. ಆದರೆ ಥಟ್ಟನೆ ಕೋಪವನ್ನು ಹುಟ್ಟಿಸಿ ಬೆಳೆಸಿ ತಳೆದು ಮರುಕ್ಷಣದಲ್ಲೇ ಅದನ್ನು ಹೊರಗೂ ಹಾಕಿಬಿಟ್ಟೆನೆಂದು ತೋರುತ್ತಿದೆ (ಇಬ್ಬರೂ ನಗುವರು ಗಟ್ಟಿಯಾಗಿ) ಆ...ಸಭೆಯಿರಬೇಕು...ನನ್ನನ್ನು ತಳಮಳಿಸಿದ್ದು.

ದ್ರೋಣ—ಏನಾಯಿತು ಸಭೆಯಲ್ಲಿ ಈ ಬೆಳಿಗ್ಗೆ ?

ಭೀಷ್ಮ—ಆಗುವುದೇನು ಪ್ರತಿದಿನ ಬೆಳಿಗ್ಗೆ ? ಮಾತು, ಮಾತು, ಮಾತು. ತಡೆಯಿಲ್ಲದ, ಬಿಡುವು ಕೊಡದ ಬುದ್ಧಿಯಿಲ್ಲದ ಮಾತು...ಅದೂ ಒಂದೇ ಮುಖದಿಂದ...ಇಡೀ ಬೆಳಿಗ್ಗೆ...ಆಚಾರ್ಯ! ಮಾತನಾಡುವವ ಕುರುಡು, ಕುರುಡುತನವನ್ನು ಮರೆಮಾಚಿಸಲು ಒಂದೇ ಸಮನೆ ಮಾತಾಡುವ ಚಟ; ಕೇಳುವವರು ಕಿವಿಗಳನ್ನಲ್ಲದೆ ಬಾಯಿಯನ್ನೂ ಮುಚ್ಚಿಕೊಳ್ಳಬೇಕೆಂದು ಮೇಲೆ ಅವನ ಹಟ. ಆಗುವುದೇನು ? ನನ್ನಂಥ ಮುತ್ತಮುದುಕನಿಗೂ ಬರದಂಥ ಹೊಸ ಕೋಪವೊಂದನ್ನು ಹುಟ್ಟಿಸಿ ಅದನ್ನು ನನ್ನದಾಗಿ ಮಾಡಿಕೊಳ್ಳುವ ಮೊದಲೇ ಕಳೆದುಕೊಳ್ಳುವಂತೆ ಮಾಡಿದ್ದಕ್ಕೆ ಇದೊಂದು ನೆಪವಷ್ಟೆ (.ಇಬ್ಬರೂ ನಗುವರು)

ದ್ರೋಣ—ಹೌದು, ಗಾಂಗೇಯ, ಸಭೆಯು ಈ ಗತಿಗಿಳಿದಿದೆ ಇಂದು.

ಭೀಷ್ಮ—(ನಿಟ್ಟುಸಿರಿಂದ ನೊಂದಂತೆ) ಹೌದು ಆಚಾರ್ಯ...ಹೌದು. ಅದೇ...ಇಂದಿನ ಸಭೆ...ಹುಂ! ಹೋಗಿಬರಲೇ ಆಚಾರ್ಯ ?... (ನಮಸ್ಕರಿಸುತ್ತ) ನಮಿಸುವೆ...ಅಪ್ಪಣೆ ಕೊಟ್ಟರೆ ನಿಮ್ಮ ಶಿಷ್ಯರೊಡನೆ...ನಮ್ಮ ಪುಟ್ಟ ಮಕ್ಕಳೊಡನೆ...ಸ್ವಲ್ಪ ಹೊತ್ತು ಕಳೆಯಲೇ ?

ದ್ರೋಣ—(ಗೌರವದಿಂದ ತಲೆತಗ್ಗಿಸಿ) ಅಗತ್ಯವಾಗಿ...ಗಾಂಗೇಯ... ಕೇಳಬೇಕೆ ಅದಕ್ಕೆ...? ನಿಮಗಿಲ್ಲಿ ಸದಾ ಆದರದ ಸ್ವಾಗತ ಕಾದಿದೆಯೆಂದು ನಿಮಗೆ ತಿಳಿಯದೆ ? ಹೋಗಿ ಬನ್ನಿ...ಗಾಂಗೇಯ ! ಹೋಗಿ ಬನ್ನಿ...

(ಭೀಷ್ಮ ನಡುಬಯಲಿಗೆ ತೆರಳಿ ಅರ್ಜುನನೊಡನೆ ಕಲೆತಾಗ)

ಅರ್ಜುನ—(ಅವನ ಕಡೆಗೆ ಬಂದು ಸಾಷ್ಟಾಂಗ ಪ್ರಣಾಮ ಮಾಡುತ್ತ) ಪ್ರಣಾಮ ತಾತಾಜೀಯವರಿಗೆ.

ಭೀಷ್ಮ—(ಬಗ್ಗಿ ಅವನನ್ನೆತ್ತಿ ಆಲಂಗಿಸಿ, ಭುಜ ಹಿಡಿದು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತ ಉತ್ಸಾಹ ಉತ್ತೇಜಕ ಧ್ವನಿಯಿಂದ ನೇವರಿಸಿ) ಆಯುಷ್ಮಂತನಾಗು ಬೆಳೆವ ಬಿಲ್ಗಾರ. ಧನುರ್ವಿದ್ಯಾಭ್ಯಾಸದಲ್ಲಿ ನಿನ್ನ ದೇಹವನ್ನು ದಂಡಿಸಿ ಕೀವಿಯನ್ನು ಉತ್ತಮಪಡಿಸಿಕೊಂಡಲ್ಲದೆ ಉತ್ತಮ ಬಿಲ್ಗಾರನೆಂದಿಗೂ ಆಗಲಾರೆ. ಎಷ್ಟುಹೊತ್ತಿನಿಂದ ಈ ಅಭ್ಯಾಸದಲ್ಲಿ ತೊಡಗಿರುವೆ ? ಬೆಳಗಿನಿಂದ ?

ಅರ್ಜುನ—ಇದೀಗ ಕೆಲವೇ ಗಳಿಗೆಗಳಿಂದ ಸಾಧನೆ ಆರಂಭಿಸಿದೆ.

ಭೀಷ್ಮ—ಏನು ? ಕೆಲವೇ ಗಳಿಗೆಗಳ ಸಾಧನ...? ಅಷ್ಟರಲ್ಲೇ ಏದು ತ್ತಿದ್ದೀಯೆ ! ಹೀಗಾದರಾಗದು ಪಾರ್ಥ !

ಅರ್ಜುನ—ಪ್ರಾಯಶಃ, ತಾತಾಜಿ,...ಹೆಚ್ಚು ಕಾಲ ಆಯಾಸಗೊಳ್ಳದೆ ಅಭ್ಯಾಸ ಮಾಡಲು ನನಗಿನ್ನೂ ಅಷ್ಟು ಬಲವಿಲ್ಲವೇನೋ ! ಆದರೆ ದಿನ ಕಳೆಯುತ್ತ ದಿನದಿನಕ್ಕೆ ನಾನಿನ್ನೂ ಗಟ್ಟಿಗನಾಗುವೆನೆಂಬ ಭರವಸೆ ಇದೆ.

ಭೀಷ್ಮ—ಆಗದು, ಖಂಡಿತ ಆಗದು ! ಬರೀ ನಿನ್ನ ತೋಳ್ಬಲದ ಮೇಲೆ ನಿನ್ನ ಅಭ್ಯಾಸದ ಭಾರ ಬಿಟ್ಟಿರುವವರೆಗಂತೂ ಆಗದು. ನೀನು ಬೇಗ ಆಯಾಸ ಗೊಳ್ಳುವುದು ಇದಕಾಗಿ.

ಅರ್ಜುನ—ತಾತಾಜೀ ... ಧನುರಭ್ಯಾಸದಲ್ಲಿ ತೋಳ್ಗಳೇ ಪ್ರಧಾನ, ಅಲ್ಲವೆ ?

ಭೀಷ್ಮ—ಹೌದು ಮಗೂ...ತೋಳುಗಳೇ ಮಾಡುವುದು ಆ ಕೆಲಸವೆಲ್ಲ. ಆದರೆ ಬೇರೆ ಸಹಾಯವಿಲ್ಲದೇ ಅಲ್ಲ. ನಿನ್ನ ತೋಳುಗಳು ನಿನ್ನ ಅಭ್ಯಾಸದಿಂದ ಆಯಾಸಗೊಳ್ಳದಿರಬೇಕಾದರೆ ನಿನ್ನ ಶರೀರಭಾರದ ಯೋಗ್ಯ ಉಪಯೋಗವನ್ನು ಮಾಡಿಕೊಂಡು ಅದರ ಬೆಂಬಲವನ್ನೂ ಅವಕ್ಕೆ ನೀಡಬೇಕು.

ಅರ್ಜುನ—(ತನ್ನಷ್ಟಕ್ಕೆ) ಶರೀರ ಭಾಗದ ಯೋಗ್ಯ ಉಪಯೋಗ ? ಅದನ್ನು ಮಾಡಿಕೊಳ್ಳುವುದು ಹೇಗೋ ? (ಥಟ್ಟನೆ ಏನೋ ಹೊಳೆದಂತಾಗಿ ಕಣ್ಣರಳಿಸಿ) ಆಹಾ ! ಹೌದು, ಗುರುಗಳೂ ಹಾಗೇ ಏನೋ ಹೇಳುತ್ತಿದ್ದುದ್ದು ನೆನಪಾದಂತಿದೆ. ಆದರದನ್ನು ನಾನು ಅಷ್ಟು ಗಮನಿಸಿರಲಿಲ್ಲ.

ಭೀಷ್ಮ—(ಔಡುಗಚ್ಚಿ) ನಿನ್ನ ಗುರು ಹೇಳಿದುದನ್ನು ಗಮನಿಸಲಿಲ್ಲ ? ಬಹುಶಃ ನೀನು ಕೊಡಬೇಕಾದಷ್ಟು ಪೂರ್ಣಗಮನ ಕೊಟ್ಟು ನೀನು ಕೇಳ ಲಿಲ್ಲವೇನೊ...ಕಿವಿಗೊಟ್ಟು ? ಅವರನ್ನು ಪುನಃ ಕೇಳಿ ತಿಳಿದುಕೊಳ್ಳಲು ಮರೆಯಬೇಡ...ಏಕೆಂದರೆ ಅವರು ನನಗಿಂತ ತುಂಬ ಚೆನ್ನಾಗಿ ಆ ಕುರಿತು ವಿವರಿಸಬಲ್ಲರು...ಆದರೂ ಇಷ್ಟು ಹೇಳುವೆ ಸದ್ಯಕ್ಕೆ...ನಿನ್ನ ಶರೀರ ಭಾರ ಉಪಯೋಗಿಸುವುದೆಂದರೆ......ಅಭ್ಯಾಸ ಮಾಡುವಾಗ ನೆಟ್ಟನೆ ಸೆಟೆದು

ಕೊಂಡು ಜಡವಾಗಿ ನಿಲ್ಲುವುದಲ್ಲ...ನೀನೀಗ ಮಾಡುತ್ತಿರುವಂತೆ. ತೂಗಾಡ ಬೇಕು ಮಗು (ಅರ್ಜುನನ ಭುಜಹಿಡಿದು ತೂಗಾಡಿಸುತ್ತ) ಹಿಂದಕ್ಕೆ ಮುಂದಕ್ಕೆ ತೂಗಾಡಬೇಕು, ಸರಳವಾಗಿ. ಪರಿಪೂರ್ಣ ಬಿಲ್ಗಾರನ ಶರೀರ... ಬಾಣವೆಸೆಯುತ್ತಿರುವಾಗ...ನಾಣಿನ ಎಳೆತ, ಬಾಣದ ಎಸೆತ, ಒಂದೊಂದು ಸಲಕ್ಕೂ ಸಮರಸವಾಗಿ ಉಯ್ಯಾಲೆಯಂತೆ ತೂಗುತ್ತಿರುತ್ತದೆ. ಹೇಗೆಂಬೆಯಾ ...ಅಕೋ, ಅಲ್ಲಿ ನೋಡು...ಆ ಕೊಳದಲ್ಲಿನ ತಾವರೆ... ನೀರಿನ ಮೇಲೆ ಬಿಸುಸುಯ್ಯುವ ಗಾಳಿಗೆ ಓಗೊಡುತ್ತಿರುವಂತೆ...ತಿಳಿಯಿತೆ? ನೆನಪಿಟ್ಟು ಕೊಳ್ಳುವೆ ಇದನ್ನು...ಅಲ್ಲಾ...?

ಅರ್ಜುನ—ಖಂಡಿತ, ತಾತಾಜಿ...ನಾನದನ್ನು ನೆನಪಿನಲ್ಲಿಡಲೇಬೇಕು... ಏಕೆಂದರೆ ಸರ್ವಕಾಲಕ್ಕೂ ಖ್ಯಾತಿವೆತ್ತ ಅಪ್ರತಿಮ ಬಿಲ್ಗಾರನಾಗಿರಬೇಕೆಂಬುದು ನನ್ನ ಬಯಕೆ.

ಭೀಷ್ಮ—("ನನ್ನ" ಎಂದುದು ಕೇಳಿ ಬೆಚ್ಚಿ, ನೊಂದಮೊಗವಾಗಿ, ಗಡಸಾಗಿ) "**ನಿನ್ನ ಬಯಕೆ**"? ಮಗೂ ಪಾರ್ಥ! ಇಂಥ ಸ್ವಾರ್ಥದ ಬಯಕೆ ಗಳನ್ನೆಲ್ಲ ದೂರವಿಡು. ಸ್ವಾರ್ಥಕ್ಕಾಗಿ ದುಡಿಯುವವನು ತನ್ನಲ್ಲಿ ಅಡಗಿರುವ ಅನಂತಶಕ್ತಿಗಳಲ್ಲಿ ತನ್ನ ಸ್ವಾರ್ಥದ ತೃಪ್ತಿಗೆ ಸಾಕಷ್ಟನ್ನು ಮಾತ್ರ ಹೊರತಂದು ಬಳಸುವನು. ಅವನಲ್ಲಿರುವ ಅಮಿತಶಕ್ತಿ, ಮಿತವಾಗುತ್ತದೆ, ಸಂಕುಚಿತ ವಾಗುತ್ತದೆ. ಉಳಿದುದೆಲ್ಲ ಹಾಗೇ ಒಳಗೆ ನಿಂತು ವ್ಯರ್ಥವಾಗುತ್ತದೆ. ಮಾನವರಲ್ಲಿ ಹೀಗೆ ಅಡಗಿರುವ ಶಕ್ತಿಗಳ ಸಾಮರ್ಥ್ಯ ಮತ್ತೆ ಅದರಿಂದಾಗುವ ಲೋಕಕಲ್ಯಾಣ ಅಪಾರ, ಅಪರಿಮಿತ. ಇನ್ನು ಸ್ವಾರ್ಥದ ಲವಲೇಶವೂ ಇಲ್ಲದೆ, ಏನಾದರೊಂದನ್ನು ಸಾಧಿಸಬೇಕೆಂಬ ಬಯಕೆಯ ದಾಹವಿದ್ದಲ್ಲಿ...ಒಳಗೆ ಸುಪ್ತ ವಾಗಿರುವ ಸರ್ವಶಕ್ತಿಗಳೂ ವಿಕಾಸವಾಗಿ ಹೊರಬಂದು ಜಗತ್ತಿನ ಪೂರ್ಣಹಿತ ವನ್ನು ಸಾಧಿಸಿಯೇ ಆ ದಾಹವಡಗಿಸುತ್ತವೆ. ಸ್ವಾರ್ಥಿಯು ತನಗೆ ಮಾತ್ರ ತೃಪ್ತಿಪಡಿಸುವ ಅಶಾಶ್ವತವಾದ ಅಲ್ಪವಾದ ಕ್ಷಣಿಕ ಫಲಕ್ಕಾಗಿ ದುಡಿಯುವ ಹೊತ್ತಿನಲ್ಲಿ, ಸಕಲ ಜಗತ್ತಿಗೇ ನ್ಯಾಯವಾಗಿ ಸಲ್ಲಬೇಕಾದ ಶಾಶ್ವತವಾದ ಮಹತ್‌ಫಲವನ್ನು ವಂಚಿಸುವವನಾಗುತ್ತಾನೆ. ಹೀಗೆ ಮಾಡುವುದು ಅಧರ್ಮ, ಪಾರ್ಥ...ಅಲ್ಲವೇ? ಇವೆಲ್ಲ ನಿನಗರಿವಾಯಿತೇ ಈಗ?

ಅರ್ಜುನ—ತಿಳಿಯಿತು ತಾತಾಜಿ...ಸ್ಪಷ್ಟವಾಗಿ...ನಾನು ಧನುರ್ವಿದ್ಯೆಯಲ್ಲಿ ಪರಿಪೂರ್ಣತೆ ಪಡೆಯಬೇಕೆಂದು ಬಯಸಿದ್ದೇನೆ...ಎಂದು ಹೇಳಿದ್ದರೆ, ಸರಿಯಾಗುತ್ತಿತ್ತೇನೊ...

ಭೀಷ್ಮ—(ಪ್ರಸನ್ನನಾಗಿ) ಇಲ್ಲ ಪಾರ್ಥ...ಆಗಲೂ ನಿನ್ನದು ತಪ್ಪೇ... ಪರಿಪೂರ್ಣನಾಗುವುದಕ್ಕೂ ಪರಿಪೂರ್ಣತೆ ಪಡೆಯುವುದಕ್ಕೂ ವ್ಯತ್ಯಾಸವಿದೆ. ಯಾರೊಬ್ಬನೂ ಪರಿಪೂರ್ಣತೆಯನ್ನು ಪಡೆಯಲಾರ, ಆದರೆ ಪರಿಪೂರ್ಣನಾಗ ಬಲ್ಲ...ಈ ಪರಿಪೂರ್ಣತೆಯೆಂಬುದು ನಿನ್ನಿಂದ ಭಿನ್ನವಾಗಿ ಹೊರಗೆಲ್ಲಿಯಾದರೂ ಇದ್ದಿದ್ದರೆ, ನೀನದರ ಹಿಂದೋಡಿ, ಬೆಂಬತ್ತಿ, ಹಿಡಿದು, ಪಡೆಯಬಹುದು...ಆದರೆ ಪಾರ್ಥ, ಪರಿಪೂರ್ಣತೆಯೆಂಬುದು ನಿನ್ನಲ್ಲಿಯೇ ಇದೆ; ನನ್ನಲ್ಲಿದೆ; ಸಮಸ್ತ ಜೀವಿಗಳಲ್ಲೊಂದೊಂದರಲ್ಲೂ ಇದೆ...ಅಡಗಿದೆ...ಜ್ಞಾನ:...ಸಮ್ಯಕ್‌ಜ್ಞಾನ... ಅದನ್ನು ಅರಿಯುವ ಸಾಧನ...ಪರಿಪೂರ್ಣ ಸ್ವರೂಪವೆನ್ನಿಸುವ ಸಾಧನ...ಇಂಥ ಪರಿಪೂರ್ಣತೆಯನ್ನು ತಕ್ಕ ಶಿಕ್ಷಣದಿಂದ ಹೊರಗೆಳೆದು ನಿನ್ನಿಂದ, ಲೋಕ ಕಲ್ಯಾಣಕ್ಕಾಗಿಯೇ ನೀನು ಪರಿಪೂರ್ಣನಾಗುವಂತೆ ಮಾಡಬಲ್ಲಂಥ ವ್ಯಕ್ತಿ ಈ ವಿಶ್ವದಲ್ಲೆಲ್ಲ ಒಬ್ಬನೇ...ಆತ ನಿನ್ನ ಗುರು. (ದ್ರೋಣರ ಕಡೆ ಕೈತೋರಿ) ಅವನಲ್ಲಿ ಪ್ರೀತಿ ಇಡು, ಅವನಾಜ್ಞೆ ಪರಿಪಾಲಿಸು, ಅವನು ಹೇಳಿದುದನ್ನೆಲ್ಲ ಎಚ್ಚರವಿಟ್ಟು ಆಲಿಸು, ಅವನು ತೋರಿದ ದಾರಿಯಲ್ಲಿ ಹೆಜ್ಜೆ ಇಡು. ಏಕೆಂದರೆ ಪಾರ್ಥ, ಈ ವಿಶಿಷ್ಟ ಜ್ಞಾನ ಸಾಗರವು ಅಗಾಧ, ಅಪಾರ. ಗುರುವಿನ ಸಹಾಯವಿಲ್ಲದೆ ಒಬ್ಬನೆ ಇದನ್ನು ಪೂರ್ಣ ದಾಟಲಸಾಧ್ಯ. ಸುತ್ತಿ ಬರಲೂ ಅಸಾಧ್ಯ. ಆದಕಾರಣ ಇದನ್ನು ಮಾತ್ರ ಮರೆಯಬೇಡ. ಗುರುವಿನಲ್ಲಿ ಪೂರ್ಣ ಪ್ರೇಮವಿಡುವುದೊಂದೇ ಪರಿಪೂರ್ಣತೆಯ ಮಾರ್ಗ. ತಿಳಿಯಿತೆ ಪಾರ್ಥ?

ಅರ್ಜುನ—ತಿಳಿಯಿತು...ತಾತಾಜಿ.

ಭೀಷ್ಮ—(ಅವನ ತಲೆ ನೇವರಿಸಿ) ಆದೀಗ ಸರಿಮಗು...ಮತ್ತೆ ಈ ಮಧ್ಯೆ ನೀನೇನು ಕಲಿತರೂ...ಬೇಗ ಕಲಿ...ಇಲ್ಲಿಯೂ ಕೂಡ ಗುರುವಿನಲ್ಲಿಡುವ ಪ್ರೀತಿಯಿಂದ ಶಿಷ್ಯನು ಕಲಿಯುವ ವಿದ್ಯೆ ಅಗಾಧವಾಗುವುದು, ವಿಶಾಲವಾಗುವುದು, ಅಷ್ಟೇ ಅಲ್ಲ; ಬೇಗ ವಶವೂ ಆಗುವುದು. ಅದರಿಂದಾಗಿ ನಿನ್ನ

ಗುರುವಿನಲ್ಲಿ ನೀನಿಡುವ ಪ್ರೇಮವೆಷ್ಟಿರಬೇಕೆಂದರೆ ಅವರಲ್ಲಿಯೇ ನೀನು ಲೀನವಾಗಬೇಕು. ಇದೇ ಗುರು ಶುಶ್ರೂಷೆಯ ರಹಸ್ಯ. ಹಾಗೆ ಮಾಡುವೆಯಾ ?

ಅರ್ಜುನ—ಖಂಡಿತ...ತಾತಾಜಿ...ಹಾಗೆಯೇ ಮಾಡುವೆ.

ಭೀಷ್ಮ—ಅದೀಗ ಸರಿ...ಮಗು...ನಿನ್ನ ಅಭ್ಯಾಸ ನಡೆಯಲಿ...ಇತರ ಮಕ್ಕಳೆಲ್ಲ ಏನೇನು ಸಾಧಿಸಿದ್ದಾರೋ ನೋಡುತ್ತೇನೆ.

ಅರ್ಜುನ—(ಪ್ರಣಾಮ ಮಾಡುತ್ತ) ನಮಿಸುವೆ ತಾತಾಜಿ!

ಭೀಷ್ಮ—ನಿನಗೆ ಮಂಗಳವಾಗಲಿ ಮಗು ! ಹೋಗಿಬರುವೆ...... (ಬಾಲನನ್ನೆತ್ತಿ, ಹಣೆಗೆ ಮುತ್ತಿಟ್ಟು ದೀರ್ಘದುಸಿರೆಳೆದು ಸುಯ್ದು, ಅವನನ್ನು ಬಿಟ್ಟು, ಹಿಂಬಯಲಿನ ಕಡೆ ಗಂಭೀರವಾಗಿ ನಡೆದು, ಅಲ್ಲಿ ಅರಸುಕುವರರ ಗುಂಪಿನ ಮಧ್ಯೆ ಮರೆಯಾಗುವನು)

ಅರ್ಜುನ—(ಧ್ವನಿಯೇರಿಸಿ–ನಿಂತಲ್ಲಿಂದ) ಗುರುವರ್ಯಾ ?

ದ್ರೋಣ—ಏನದು ಪಾರ್ಥ ?

ಅರ್ಜುನ—(ಗೋಳು ಕರೆಯುತ್ತ) ಏನೋ ತೊಡಕು......ಗುರು ವರ್ಯ ನನಗೆ.

ದ್ರೋಣ—(ಅಲ್ಪ ಕೋಪದಿಂದ) ನಿನಗೆ ಯಾವಾಗಲೂ ತೊಡಕೇ... ಎಂಥದದು ಈ ಬಾರಿ ?

ಅರ್ಜುನ—ಅದೆ ಎಂದಿನದೆ ತೊಂದರೆ, ಗುರುವರ್ಯ ! ಅಭ್ಯಾಸ ಪಾರಂಭಿಸಿದ ಕೆಲವೇ ಗಳಿಗೆಗಳಲ್ಲಿ ನನ್ನ ತೋಳುಗಳಿಗಾಯಾಸ. ತಾತಾಜಿ ಭೀಷ್ಮರೇನೋ ಹೇಳಿದರು...ತೋಳುಗಳ ಬೆಂಬಲವಾಗಿ ದೇಹದ ಭಾರ ಕೊಡು...ಎಂದು.

ದ್ರೋಣ—(ಅರ್ಜುನನನ್ನು ಥಟ್ಟನೆ ಸಮೀಪಿಸಿ, ಕಠಿಣವಾಗಿ) ತಾತಾಜಿ ಭೀಷ್ಮರಂದಂತೆ ? ಅಲ್ಲವೋ ನೆನಪು ಮರೆವ ಮಗು ! ನಿನ್ನ ಕಿವಿಗಳಲ್ಲಿ ಇದನ್ನೇ ಈ ಹಲವಾರು ದಿನಗಳೂ ಡಂಗುರಹೊಯ್ಯುತ್ತಿದ್ದೇನಲ್ಲ...ದಿನಗಟ್ಟಲೆ ಇದನ್ನೆಲ್ಲ ನಿನಗೆ ವಿವರಿಸಿ ತಿಳಿಸಲು ಹೆಣಗುತ್ತಿದ್ದೇನಲ್ಲ...ನಿನ್ನ ಲಕ್ಷ್ಯವಿದ್ದರೆ ತಾನೆ?

ಧನುರ್ವಿದ್ಯೆಯ ಆರಂಭದ ದಿನ ನಿಲ್ಲುವವನಂತೆ ಪ್ರತಿನಿತ್ಯ ಲಕ್ಷ್ಯದ ಎದುರು ಶರಸಂಧಾನ ಹೂಡಿ ನಿಲ್ಲುವೆಯಲ್ಲ? (ನಿಟ್ಟುಸಿರು)

ಅರ್ಜುನ—(ದೈನ್ಯದಿಂದ) ಕ್ಷಮಿಸಿ ಗುರುವರ್ಯ......ಅದೇಕೋ ಏನೋ...ನೀವು ಕರುಣೆ ಇಟ್ಟು ನನಗೆ ಹೇಳಿಕೊಟ್ಟ ಪಾಠಗಳೆಲ್ಲ...ಅದೆಲ್ಲಿ, ಹೇಗೆ, ಮಾಯವಾಗುತ್ತವೆಯೋ ನನಗೆ ನಿಜವಾಗಿ ಅರ್ಥವಾಗುತ್ತಿಲ್ಲ.

ದ್ರೋಣ—**ನಿನಗ**ರ್ಥವಾಗುತ್ತಿಲ್ಲ ... ಪಾರ್ಥ ... **ನನಗಾ**ಗುತ್ತಿದೆ ... ನಿಜವಾಗಿ ನಿನ್ನ ತೊಂದರೆ ಯಾವುದು, ನನಗೆ ಗೊತ್ತು...ನಿನ್ನ ಗುರಿಯಿದೆ ನೋಡು...ಅದೀಗ ತಪ್ಪು...ಶುದ್ಧಾಂಗ ತಪ್ಪು.

ಅರ್ಜುನ—ನನ್ನ ಗುರಿ ತಪ್ಪೆ? ಗುರುವರ್ಯ! ಆದರೆ ನನ್ನ ಗುರಿಗೆ ಸರಿಯಾಗಿ ನನ್ನ ಬಾಣದ ಲಕ್ಷ್ಯವಿರುತ್ತದಲ್ಲ? ಯಾವಾಗಲೂ, ನೇರವಾಗಿ?

ದ್ರೋಣ—ಓ, ನಾನು ಆ ನಿನ್ನ ಬಾಣದ ಗುರಿಯನ್ನಲ್ಲ ಹೇಳಿದ್ದು. ನಿನ್ನ ಬಯಕೆಯ ಗುರಿ...ನಿನ್ನ ಮುಖ್ಯ ಬಯಕೆ...ನೀನು ಧನುರ್ವಿದ್ಯೆ ಕಲಿಯುತ್ತಿರುವ ಮುಖ್ಯ ಉದ್ದೇಶ್ಯ...ಶಿಕ್ಷಣದ ಧ್ಯೇಯ, ಅದರ ಬಗ್ಗೆ ಹೇಳುತ್ತಿದ್ದೇನೆ; **ಅದು** ಸದೋಷವಾಗಿದೆ.

ಅರ್ಜುನ—ಧನುರ್ವಿದ್ಯೆ ಕಲಿಯುವುದರಲ್ಲಿ ನನ್ನ ಉದ್ದೇಶ್ಯವೆ?... ಅದೂ...?

ದ್ರೋಣ—ನಿನ್ನ ಉದ್ದೇಶ್ಯ ಏನಿದೆ, ಪಾರ್ಥ...ಅಪ್ರತಿಮ ಧನುರ್ಧರನೆಂಬ ಕೀರ್ತಿ ಗಳಿಸುವುದು; ಆಯಿತು,...ಅಷ್ಟೆ...ಹೆಚ್ಚಿಲ್ಲ. ವಿದ್ಯಾರ್ಜನೆಯ ಪ್ರತಿಕ್ಷಣವೂ ನಿನ್ನ ಹೃದಯದಲ್ಲಿ ತುಂಬಿರುವುದು ಜನ ನಿನ್ನನ್ನು ಸರ್ವಶ್ರೇಷ್ಠ ಧನುರ್ಧರ ಎಂದು ಹೊಗಳುವ ಕನಸಿನ ಚಿತ್ರ, ಅದರಲ್ಲಿ ಮುಂದಿದ್ದ ಕೆಲಸದ ವಿಚಾರಕ್ಕೆ ಜಾಗೆಯೆ ಇಲ್ಲ. ಹೇಳೀಗ...ನಾನಂದುದು ಸರಿಯೆಂದು...ಒಪ್ಪಿಕೊ ...ಪ್ರಾಮಾಣಿಕನಂತೆ...

ಅರ್ಜುನ—(ಮುಖ ತಗ್ಗಿಸಿ ಅಪರಾಧಿಯಂತೆ) ಹೌದು ಗುರುವರ್ಯ... ನೀವಂದುದು ಸರಿ.

ದ್ರೋಣ—ಅದಕ್ಕೇ ನಿನ್ನ ಕಲಿಕೆ ಬಲು ನಿಧಾನ...ನಿನ್ನ ತಲೆಯು ತುಂಬ ನಿನ್ನ ವಿದ್ಯೆಗೆ ಬರುವ ಪ್ರತಿಫಲದ ಯೋಜನೆಯೇ ಹೊರತು ವಿದ್ಯೆಯು ಕುರಿತಲ್ಲ. ಅರ್ಥಾತ್ ನೀನೊಬ್ಬ "ಅಧಮ ಕಾರ್ಮಿ".

ಅರ್ಜುನ—(ಪುನರುಚ್ಚರಿಸುತ್ತ) ಅಧಮ ಕಾರ್ಮಿಯೆ? ಹಾಗೆಂದ ರೇನು ಗುರುವರ್ಯ ?

ದ್ರೋಣ—"ಕರ್ಮಣಾ ಸ್ವಾರ್ಥಃ" ತನ್ನ ಕರ್ಮವು ತನ್ನ ಸ್ವಾರ್ಥ ವನ್ನು ಸಫಲಗೊಳಿಸುವ ಸಾಧನ ಮಾತ್ರ, ಎಂದು ತಿಳಿದ ಮನುಷ್ಯ. ನನ್ನ ಗುರುವಿನ ಬಳಿ ಧನುರ್ವಿದ್ಯೆ ಆರಂಭಿಸಿದಾಗ ನನಗೂ ಇದೇ ಗುರಿಯಿದ್ದಿದ್ದರೆ... ಬಾಣದ ಪ್ರಯೋಗವಿರಲಿ, ಬಿಲ್ಲನ್ನು ಎತ್ತಲೂ ಕೂಡ ಕಲಿಯಲಾಗುತ್ತಿದ್ದಿಲ್ಲ.

ಅರ್ಜುನ—ಆದರೆ ಗುರುವರ್ಯ...ಒಮ್ಮೆ ಮಾತನಾಡುತ್ತಾಡುತ್ತ ನಿಮ್ಮನ್ನೂ ಕಾರ್ಮಿಗಳೆಂದು ನೀವು ಅಂದುಕೊಂಡುದು ನನ್ನ ನೆನಪಿಲ್ಲಿದೆ ?

ದ್ರೋಣ—ನಿಜ. ಆದರದು ಮಧ್ಯಮಾರ್ಥದಲ್ಲಿ! "ಕರ್ಮ ಏವ ಅರ್ಥಃ-" ಕರ್ಮವೆ ಸಾಧ್ಯ ಕರ್ಮವೆ ಕೊನೆಯ ಧ್ಯೇಯ ಎಂದು ತಿಳಿದವ, ಎಂಬ ಅರ್ಥದಲ್ಲಿ.

ಅರ್ಜುನ—ಓ! ಇದೂ ಮಧ್ಯಮಾರ್ಥವೇಯೋ ? ಹಾಗಾದರೆ ಆ ಮಾತಿಗೆ ಉತ್ತಮಾರ್ಥವೊಂದು ಇದೆಯೆ, ಗುರುವರ್ಯ ?

ದ್ರೋಣ—ಇದೆ..."ಕರ್ಮಣಾ ಪರಾರ್ಥಃ" ಪರಾರ್ಥಕ್ಕಾಗಿಯೇ ಕರ್ಮ ವೆಸಗುವಿಕೆ. ತನಗೆಳ್ಳಷ್ಟೂ ಫಲ ಪ್ರಾಪ್ತಿ ಇಲ್ಲದೆ, ಇತರರು ಅದರ ಫಲವನನುಭವಿಸಲಿ ಎಂಬ ಒಂದೇ ಒಂದು ಭಾವನೆಯಿಂದ ಪ್ರೇರಿತನಾದವ; ಇದು ಪಾರ್ಥ. ಧರ್ಮ ಧ್ಯೇಯ.

ಅರ್ಜುನ—ನನಗರ್ಥವಾಯಿತು ಗುರುವೆ! ಆದರೂ-ಅಂದರೆ ನೋಡಿ, ಗುರುವರ್ಯಾ! ತನಗೆ ಯಾವ ಲಾಭವೂ ಇಲ್ಲದೆ, ಇತರರಿಗೇ ಅದು ದೊರೆಯಲೆಂದು ಜೀವಾಂತ ದುಡಿಯುವುದು, ದಣಿಯುವುದು, ಕಿವಿಗೆ ಸಾಧುತ್ವದ ತತ್ತ್ವ ಎನ್ನಿಸಿದರೂ ಹೃದಯಕ್ಕೆ ಇದೇನೊ ಒಪ್ಪಲಾಗದ ಅನ್ಯಾಯ, ನಿರ್ಘೃಣ ಮಾತು ಎನ್ನಿಸುವುದು. ಅಲ್ಲವೇ ಗುರುವರ್ಯ ?

ದ್ರೋಣ—(ತಲ್ಲಣಗೊಂಡು) ಅನ್ಯಾಯ ? ನಿರ್ಘೃಣ ? ಪಾರ್ಥ ! ಧರ್ಮ ಎಂಬುದು...ನ್ಯಾಯಕ್ಕೆ ಅಡಿಯಾಳಲ್ಲ...ದಯೆಯ ದಾಸನಲ್ಲ ! (ಅರ್ಜುನನನ್ನು ಒಂದು ಕ್ಷಣ ದುರುಗುಟ್ಟಿನೋಡಿ, ನಿಟ್ಟುಸಿರಿಟ್ಟು, ಒತ್ತಿ ಹೇಳುತ್ತ) ಹುಂ...ಇನ್ನೂ ಚಿಕ್ಕವ ನೀನು, ಇದೆಲ್ಲ ಇಷ್ಟು ಬೇಗನೆ ನಿನಗೆ ಹೇಳಬಾರದೇನೋ...ಆದರೂ ಹೇಳುವೆ, ಕಿವಿಗೊಟ್ಟು ಕೇಳು...ಅಚ್ಚಳಿಯದಂತೆ ನಿನ್ನ ಮನಃಪಟಲದ ಮೇಲೆ ಕೊರೆದಿಡು. ಮುಂದೆ ಎಂದಾದರೊಂದು ದಿನ ನಿನ್ನ ಜೀವನದಲ್ಲಿ ಧರ್ಮದ ಬಳಿಗೆ ತೆವಳಿಕೊಂಡಾದರೂ ಹೋಗುವಷ್ಟು ಭಾಗ್ಯ ನಿನಗೊದಗಿದರೆ, ಆಗ ನಿನಗೆ ಹೊಳೆಯುವುದು, ಪಾರ್ಥಾ, ಧರ್ಮ ನಿರಂಕುಶವಾಗಿ ನಲಿಯುವಲ್ಲಿ, ನ್ಯಾಯ ಮಣ್ಣುಮುಕ್ಕುತ್ತಿರುವುದೆಂದು. ಧರ್ಮ ರಾಜನಾಗಿ ಸಿಂಹಾಸನವೇರಿದಲ್ಲಿ, ನ್ಯಾಯ, ಕಂಗೆಟ್ಟು ಕಂಗಾಲಾಗಿ ಕಾಲ್ಕುಸಿದು ಬೀಳುವುದು, ಗತಿಗಾಣದೆ ದಿಕ್ಕುಗೇಡಾಗುವುದು. ಆಗ ನಿನಗೆ ತಿಳಿಯುವುದು...ಧರ್ಮವೆಂಬುದು ತಪ್ಪೂ ಅಲ್ಲ...ಒಪ್ಪೂ ಅಲ್ಲ...ದಯಾ ಮೂರ್ತಿಯೂ ಅಲ್ಲ...ಕ್ರೂರವೂ ಅಲ್ಲ. ಇವೆಲ್ಲಕ್ಕೂ ಅತೀತ, ಅಚಲ, ಅಜೇಯಶಕ್ತಿ ಎಂಬುದು ; ಧರ್ಮ ಎಂದರೆ ದಂಡಸ್ವರೂಪ ಎಂಬುದು ಆಗ ತಿಳಿಯುವುದು. (ತನ್ನ ಭಾವಾವೇಶಕ್ಕಧೀನನಾದವನಂತೆ ತೋರಿ, ಅರ್ಜುನನನ್ನು, ಸಿಂಹವು ತುಂಟ ನರಿಯ ಹಿಡಿದು ಒದರುವಂತೆ ಒದರಿ, ಘರ್ಜಿಸುತ್ತ) ಮಮಕಾರ ಮದದ ಮೊಬ್ಬು ಮುಸುಕಿರುವ ಮಗುವೇ...ಆಗ ನಿನಗೆ, ಧರ್ಮವೇ ದೇವ... ಎಂದು ಸಾಕ್ಷಾತ್ಕಾರವಾಗುವುದು...(ತನ್ನ ಉಗ್ರತೆಗೆ ಹೆದರಿದ ಅರ್ಜುನನನ್ನು ಕಂಡು, ಅಯ್ಯೋ ಎನಿಸಿ, ಕ್ರಮೇಣ ಶಾಂತನಾಗಿ ಅವನನ್ನು ಬಿಟ್ಟು ಹಿಂದೆ ಹೆಜ್ಜೆ ಇಟ್ಟು ಸಾಂತ್ವನದಿಂದ) ಹುಂ...ಹೋಗಲಿ ಬಿಡು ಪಾರ್ಥ...ನಿನ್ನನ್ನು ತುಂಬ ಭಯಪಡಿಸಿಬಿಟ್ಟೆನೇನೋ...ಚಿಕ್ಕವನಾದ ನಿನ್ನ ಬುದ್ಧಿಗೆ ನಿಲುಕದ ವಿಷಯಗಳ ಬಗ್ಗೆ ನೀನು ಮಾತನಾಡತೊಡಗಿದರೆ ಎಂತಹ ಅಪಚಾರವೆಸಗುತ್ತೀ ಯೆಂಬುದಾದರೂ ನಿನಗೆ ತಿಳಿದೀತು ಎಂಬ ಆಸೆ ನನಗೆ. ಈಗ...ಅಭ್ಯಾಸದಲ್ಲಿ ತೊಡಗೋಣ...ಧನುರ್ವಿದ್ಯೆಯಲ್ಲಿ ಪ್ರವೀಣನಾಗಲು...ನಾನಾಡುವ ಪ್ರತಿಮಾತಿಗೆ, ನಿನ್ನ ಕಿವಿ ನನ್ನ ಮಾತಿನಲ್ಲಿ, ನಿನ್ನ ಕಣ್ಣು ನಿನ್ನ ಗುರಿಯಲ್ಲಿ, ನಿನ್ನ ಅಂಗಾಂಗಗಳು ಧನುರ್ಬಾಣಗಳಲ್ಲಿ—ನಿನ್ನ ಅಚಲವಾದ ಮನಸ್ಸು ಇವೆಲ್ಲವುಗಳಲ್ಲಿ ನೆಡುವಂತಾ ದರೂ ಸಾಕು, ಈ ನನ್ನ ಕಂಠಶೋಷ ಸಾರ್ಥಕವೆನ್ನುವೆ. ಎಲ್ಲಿ...ಈಗ...

ಬೆಳಗೆಲ್ಲ ಎಂತು ನೀನು ಬಾಣ ಹೂಡಿ ಎಸೆಯುತ್ತಿದ್ದೆಯೆಂಬುದನ್ನು ಗಮನಿಸುವ, ಸರಿಪಡಿಸಬೇಕಾದ ತಪ್ಪುಗಳೇನಿವೆಯೋ ನೋಡುವ...ಮತ್ತೆ...ಗಮನವಿಡು... ಮರೆಯಬೇಡ...ನಿನ್ನ ಮನಸ್ಸೆಲ್ಲ ಧನುರ್ವಿದ್ಯೆಯಲ್ಲಿ ಮುಳುಗಿದೆ...ನಿನ್ನ ದೃಷ್ಟಿ ಗುರಿಯಲ್ಲಿ ನೆಟ್ಟಿದೆ...ನಿನ್ನ ಕಿವಿಗಳು ನನ್ನ ಮಾತುಗಳನ್ನು ಮಾತ್ರ ಕೇಳುತ್ತಿವೆ... ನಿನ್ನ ಶರೀರ-ಅಂಗಗಳು...ಬಿಲ್ಲಿನ ನಾಣೆಸ-ಬಾಣದ ಸ್ಪರ್ಶವನ್ನು ಮಾತ್ರ ಅನುಭವಿಸುತ್ತಿವೆ...ಎಲ್ಲಿ...ಆರಂಭಿಸೀಗ...

ಏಕಲವ್ಯ—(ಅರ್ಜುನ ಆರಂಭಿಸುವನು; ಮೊದಲಂತೆ ಅವನ ಶರೀರ ಜಡವಾಗಿ ಸೆಟೆದು ನಿಂತಿದೆ. ದ್ರೋಣರು ಅವನನ್ನು ಸೂಕ್ಷ್ಮವಾಗಿ ಪರಿಶೀಲಿಸು ವುದರಲ್ಲಿ ಮಗ್ನರಾಗಿರುವಾಗ ಇಬ್ಬರಿಗೂ ಗೊತ್ತಾಗದಂತೆ ಪ್ರವೇಶಿಸಿ, ಹಿಂದೆ ನಿಂತು) ತಾಯಿ ಹೇಳಿದ ಸ್ಥಳ ಇದೇ ಎಂದು ಕಾಣಿಸುತ್ತಿದೆ. "ವಿಶಾಲ ಹುಲ್ಲು ಬಯಲು, ವಜ್ರ ವೈಢೂರ್ಯ ಆಭರಣಗಳನ್ನೂ, ಅಂದವಾದ ಬಟ್ಟೆಬರೆಗಳನ್ನೂ ಧರಿಸಿರುವ, ಬಿಲ್ಲು, ಗದೆ, ಕತ್ತಿ ಹಿಡಿದು ಅಭ್ಯಾಸ ಮಾಡುತ್ತಿರುವ ಅರಸುಕುವರರು; ಪಾಠಕಲಿಸುತ್ತಿರುವ ಒಬ್ಬ ದೇವ ಕಳೆಯುಳ್ಳ ಬ್ರಾಹ್ಮಣ" ಎಂದೇ ಅಮ್ಮ ಹೇಳಿದುದು...ಅಕ್ಷರಶಃ ಹೊಂದು ವಂತಿದೆಯಲ್ಲ...ಇಲ್ಲಿ? (ದ್ರೋಣಾರ್ಜುನರನ್ನು ನಟ್ಟದೃಷ್ಟಿಯಿಂದ ನೋಡಿ, ಅಸ್ಥಿರನಾಗಿ, ಅಧೈರ್ಯಗೊಂಡು ತನ್ನಲ್ಲಿ ತಾನೇ) ಓ...ಆ ಅವರೇ...ಧನು ರ್ವಿದ್ಯೆಯಲ್ಲಿ ನನ್ನನ್ನು ಅಪ್ರತಿಮನಾಗಿಸುವವರು...? ಮಾನ್ಯ ದ್ರೋಣಾ ಚಾರ್ಯರೆಂಬುವರು...ಖಂಡಿತ ಅವರಲ್ಲ...ಶಿಷ್ಯನೊಬ್ಬ ಅಭ್ಯಾಸದಲ್ಲಿ ಎಳೆಯು ನಿಗಿಂತಲೂ ಕೀಳಾಗಿ ಬಾಣಬಿಡುವಾಗಲೂ...ತಾನು **ಒಂದು** ಮಾತಾಡದೆ ಮೌನವಾಗಿ ನೋಡುತ್ತ ಹಾಗೇ ನಿಂತ ಇವರು ಖಂಡಿತ ದ್ರೋಣಾಚಾರ್ಯರಲ್ಲ! ಹಾ?...ಇಲ್ಲ...ಇಲ್ಲ...ಏನೋ ಹೇಳುತ್ತಿರುವಂತಿದೆ...! (ದ್ರೋಣರ ಮಾತಿನ ಕಡೆ ಕಿವಿಗೊಡುವನು)

ದ್ರೋಣ—ಪಾರ್ಥ! ನೀನೀಗ ಎಸೆಯುತ್ತಿರುವಂತೆ...ನಿನ್ನ ಶರೀರವನ್ನು ಸೆಟೆದು ನಿಲ್ಲಿಸಿದ್ದೀ...ಅಂಗುಷ್ಠದಿಂದ ಕುತ್ತಿಗೆವರೆಗೆ ದೇಹ ಸೆಟೆದಿದೆ...... ಜಡವಾಗಿದೆ...ನಾಡ ಕಬ್ಬಿಣದಂತೆ...ಆದರೆ ಯಾವಾಗಲೂ ಅದು ಉಕ್ಕಿನಂತೆ ಬಳುಕುತ್ತ ಇರಬೇಕಾದುದು, ಬಡಿದಲ್ಲಿ ಬಗ್ಗಿ ಬಯಸಿದ ಆಕಾರವನ್ನು

ತಾಳುವಂತಿರಬೇಕು. ಈಗ ಕೇಳು ಮತ್ತೊಮ್ಮೆ...ಕಾಲನ್ನು ನೆಲದ ಮೇಲೆ ಭದ್ರವಾಗಿ ಊರಿಡು; ಹಾಂ! ಹಿಮ್ಮಡಿ ನೆಲವನ್ನು ಮುಟ್ಟದಿರಲಿ. ಹುಂ, ಇಡಿಯ ಶರೀರದ ಭಾರ ಒಮ್ಮೆ ಒಂದು, ಒಮ್ಮೆ ಇನ್ನೊಂದು, ಹೀಗೆ ಎರಡೂ ಕಾಲ್ಗಳ ಮೇಲೆ ಹಂಚಿಹೋಗಲಿ...ಈ ಮಧ್ಯೆ ಬಾಣ ಹೂಡಿದಾಗ, ನಾಣೆಳೆದಾಗ, ಬಾಣವೆಸೆದಾಗ ಕ್ರಮವಾಗಿ ನಿನ್ನ ಶರೀರ ಮುಂದೆ, ಹಿಂದೆ, ಮತ್ತೆ ಮುಂದೆ ತೂಗುತ್ತಿರಲಿ...ಈಗ ನಾನು ಹೇಳಿದ ಹಾಗೆ ಪ್ರಯತ್ನ ಮಾಡು, ನೋಡೋಣ. (ಅರ್ಜುನನ ಯತ್ನ ಪುನಃ ಹಾಗೆ ಹಾಗೆಯೇ; ದ್ರೋಣರು ವ್ಯಗ್ರವಾಗಿ ಅವನನ್ನೇ ನೋಡುತ್ತಿದ್ದಾರೆ)

ಏಕಲವ್ಯ—(ಹರ್ಷ ರೋಮಾಂಚನದಿಂದ) ಓ...ಏನದ್ಭುತ...ಅವರೇ ಇರಬಹುದೇನೋ...ಗುರುಗಳು? (ನಿಲ್ಲಿಸಿ ಪುನಃ ಹೆಚ್ಚು ಕಿವಿಗೊಡುವನು)

ದ್ರೋಣ—ಇಲ್ಲ, ಪಾರ್ಥಾ...ಇಲ್ಲ...ಇನ್ನೂ ನೀನು ತಿದ್ದಿಕೊಂಡಿಲ್ಲ... ಪುನಃ ಹೆಜ್ಜೆ ಹೆಜ್ಜೆಯಾಗಿ ವಿವರವಾಗಿ ಹೇಳುತ್ತೇನೆ...ಕೇಳು... (ಶಿಷ್ಯನನ್ನು ಸಮೀಪಿಸಿ, ಒಂದೊಂದನ್ನೂ ವಿವರವಾಗಿ ಒತ್ತಿ ನಿಧಾನವಾಗಿ ಎಳೆದೆಳೆದು ಹೇಳುತ್ತ ಅವನ ಮನಸ್ಸಿಗೆ ಹಿಡಿಸುವಂತೆ) ಮೊದಲು ಎಡಗಾಲು ಮುಂದೆ, ಹೀಗೆ...ಈಗ ಎರಡೂ ಕಾಲುಗಳ ಹಿಮ್ಮಡಿ ಎತ್ತು (ಏಕಲವ್ಯ ಹಿಂದೆ ಇವರಿಬ್ಬರ ಗಮನಕ್ಕೂ ಬೀಳದೆ, ದ್ರೋಣ ಅರ್ಜುನನಿಗೆ ಒತ್ತಿ ಹೇಳಿ ಮಾಡಿಸುವ ಪ್ರತಿಚಲನೆಯನ್ನು ತಾನೂ ಮಾಡುತ್ತ)...ಎರಡೂ ಕಾಲ್ಗಳದು... ನಿನ್ನ ಭಾರವೆಲ್ಲ ಮುಂದಿದ್ದ ಎಡಗಾಲಿನ ಮೇಲೆ ಬೀಳಲಿ...ಈಗ ನಿನ್ನ ಶಿರಸ್ಸು... ಕುತ್ತಿಗೆ...ದೇಹ ಸಹಿತ...ಮುಂದೆ ಬಾಗಿರಲಿ! ಹಾ, ಹಾಗೆ...ಎಡಬಾಹುವನ್ನು ಮುಂದೆ ಚಾಚಿ ಬಿಲ್ಲನ್ನು ಭದ್ರವಾಗಿ ಹಿಡಿ...ಬಲದೋಳನ್ನು ಮುಂದೆ ಚಾಚಿ ಹೆಬ್ಬೆಟ್ಟಿನಿಂದ ನಾಣು ಹಿಡಿದು ಬಾಣದ ಹಿಂಭಾಗವನ್ನು ನಾಣಿಗೆ ಅಂಟಿದಂತೆ ಸರಿಯಾದ ಸ್ಥಾನದಲ್ಲಿ ಸ್ಥಾಪಿಸು...ನಿನ್ನ ಮನಸ್ಸಿನಲ್ಲಿ ಚೆನ್ನಾಗಿ ನಾಟಿದೆಯೆಂದು ಭರವಸೆ ಬರುವವರೆಗೆ ಹಾಗೆಯೇ ಇರು...ಆಯಿತೇ?...ಈಗ ನೀನಿದುವರೆಗೆ ಮಾಡುತ್ತಿದ್ದಂತೆ ಬರಿ ಬಲದೋಳು ಮಾತ್ರ ಬಗ್ಗಿಸಿ ನಾಣನ್ನು ಹಿಂದೆಳೆಯಬೇಡ. ನಾಣೆಳೆಯುತ್ತಿದ್ದಂತೆಯೇ ನಿನ್ನ ನಡು, ಬೆನ್ನು, ಕುತ್ತಿಗೆ, ಶಿರಸ್ಸುಗಳನ್ನು ಹಿಂದಕ್ಕೆ ಎಸೆ...ಅದೇ ಸಮಯದಲ್ಲಿ ಮುಂದಿದ್ದ ಕಾಲಿನ ಮೇಲೆ ಬಿಟ್ಟ ಭಾರ ಹಿಂಗಾಲು

ಬಲಗಾಲಿಗೆ ಬರಲಿ... (ಅರ್ಜುನ ಮುಂದೆ, ಏಕಲವ್ಯ ಹಿಂದೆ, ದ್ರೋಣರು ಹೇಳಿದ್ದನ್ನು ಚಾಚೂ ತಪ್ಪದೆ ಮಾಡುವರು) ಹಾ! ಅಹುದು ಹಾಗೆ...ಮತ್ತೆ... ಮತ್ತೊಮ್ಮೆ ಈ ಸೆಳೆತ ಎಸೆತಗಳ ರೀತಿಗಳನ್ನು ಪದೇ ಪದೇ ಅಭ್ಯಾಸಿಸು... ನಿನ್ನ ಅಂಗಾಂಗಗಳಲ್ಲಿ ಅಚ್ಚೊತ್ತುವ ತನಕ...ಈ ವಿದ್ಯೆ ನಿನ್ನದೇ ಆಗುವ ತನಕ... (ಅರ್ಜುನ ಅಂತೆಯೇ ಮಾಡುವನು)

ಏಕಲವ್ಯ—(ದ್ರೋಣರು ಹೇಳಿದ್ದು ಮಾಡುತ್ತ ಪುಳಕಿತನಾಗಿ) ಓ... ಸಂದೇಹವೇನು...ಇವರೇ, ಈ ಇವರೇ, ಆ ಪ್ರಖ್ಯಾತ ದ್ರೋಣಾಚಾರ್ಯರು! ಇಷ್ಟು ಎಳೆಯನಾಗಿರುವ ಇಂತಹ ಶಿಷ್ಯನೊಬ್ಬನನ್ನು ಕ್ಷಣಾರ್ಧದಲ್ಲಿ ಹೀಗೆ ಒಳ್ಳೆಯ ಧನುರ್ಧಾರಿಯಾಗಿ ಪರಿವರ್ತಿಸಬಲ್ಲವರು ಯಾರು? ಆ ಹುಡುಗ... ಪಾರ್ಥ...ಇಷ್ಟರಲ್ಲಿಯೇ ಕಲಿತ ಧನುರ್ಧಾರಿಯಂತಾಗಿದಾನೆ...ಪಾರ್ಥ ಏಕೆ... ಇವರ ಮಾತು ಕೇಳಿ...ಇಲ್ಲೇ ಅಭ್ಯಾಸ ಕೈಗೊಂಡು...ನಾನು ಕೂಡ ಮೊದಲಿಗಿಂತ ಎಷ್ಟೋ ಉತ್ತಮವಾಗಿದ್ದೇನೆ (ಮತ್ತೊಮ್ಮೆ ಅರ್ಜುನನಂತೆ ಚಲಿಸುತ್ತ ಪೂರ್ಣ ಅರಿವಿನ ಭರವಸೆಯ ಧ್ವನಿಯಿಂದ) ಅಬ್ಬ! ಎಷ್ಟು ಸುಲಭ ಮಾಡಿದರಷ್ಟನ್ನೂ...? ಹೌದು...ಶರೀರ ಹಗುರಾಗಿ ತೂಗುತ್ತಿದ್ದರೆ ತೋಳಿಗೆ ಶಕ್ತಿ ಹೆಚ್ಚು, ಶ್ರಮ ಕಡಮೆ...ದಿನವೆಲ್ಲಾ ಬಾಣವೆಸೆಯುತ್ತಿದ್ದರೂ ಆಯಾಸ ವಾಗದು...ಆಹ! ಆಚಾರ್ಯರು ಪುನಃ ಮಾತನಾಡುತ್ತಿದ್ದಾರೆ...ಒಂದು ಶಬ್ದ ವನ್ನೂ ಬಿಡದೆ ಕೇಳಬೇಕು ನಾನು...

ದ್ರೋಣ—(ತೃಪ್ತಿಹೊಂದಿದ ಮುದ್ರೆಯಿಂದ) ಸರಿ!...ಪಾರ್ಥ...ಈಗ ಏನೂ ತಪ್ಪಿಲ್ಲ...ಈಗ ಹೇಳು...ಅದೊ, ಗಿಡವಿದೆಯಲ್ಲ! ಗುರಿಯನ್ನು ತೂಗುಬಿಟ್ಟಿದೆ ಅಲ್ಲಿ? ಆ ಗಿಡ...ಎಷ್ಟು ಎತ್ತರವಾಗಿದೆ?

ಅರ್ಜುನ—(ತಲೆ ಎತ್ತದೆ ಅಂಗಾಂಗಗಳನ್ನು ಮೊದಲಿನಂತೆ ಕೀಲಿಸುತ್ತ) ಗಿಡ? ಯಾವ ಗಿಡ? ಅಲ್ಲಿ ನನ್ನ ಗುರಿಯ ಮಧ್ಯಬಿಂದುವಾಗಿ ಒಂದು ಕಪ್ಪು ಚುಕ್ಕೆಯಲ್ಲದೆ ಬೇರೇನೂ ನನಗೆ ಕಾಣದು.

ದ್ರೋಣ—ಹು! ನಿನ್ನೆಡಬಲದಲ್ಲಿ ದೂರದಲ್ಲಿ ಆಗುತ್ತಿರುವ ಕತ್ತಿ ಗುರಾಣಿಗಳ ಶಬ್ದದಿಂದ ನಿನಗೆ ತೊಂದರೆಯಾಗುತ್ತಿದೆಯೆ?

ಅರ್ಜುನ—(ಅಚಲನಾಗಿ) ಕತ್ತಿ ಗುರಾಣಿ ಶಬ್ದ ?...ಎಲ್ಲಿ ? ನನಗೆ ಕೇಳಿಸುತ್ತಿರುವುದೊಂದೇ ಧ್ವನಿ...ನಿಮ್ಮ ಧ್ವನಿ...

ದ್ರೋಣ—ಹೂಂ...ಈ ಉರಿಬಿಸಿಲು ನಿನಗಾಯಾಸಕೊಡುತ್ತಿದೆಯೆ ?

ಅರ್ಜುನ—(ಕಾರ್ಯನಿರತನಾಗಿ ಚಲಿಸದೆ) ನನಗೆ ತಿಳಿಯದು...ನನಗೆ ತೋಚದು...ನನಗೆ ತೋಚುವುದು ನನ್ನ ತೋಳಿನ ಮೇಲೆ ಬಿಲ್ಲಿನ ನಾಣು ಉಜ್ಜುತ್ತಿರುವುದು ಮಾತ್ರ.

ದ್ರೋಣ—(ಚಪ್ಪಾಳೆ ತಟ್ಟುತ್ತ) ಭಾಪು! ಭಾಪು! ಸಾಕು...ನೀನೀಗ ಸ್ವಲ್ಪ ಹೊತ್ತು ವಿಶ್ರಮಿಸಿಕೊಳ್ಳಬಹುದು. (ಅರ್ಜುನ ವಿರಮಿಸುವನು)

ಅರ್ಜುನ—ಗುರುವರ್ಯ...ಈಗ ಹೇಳಿ...ನನ್ನ ಅಭ್ಯಾಸದಲ್ಲಿದ್ದಾಗ ಆ ಮರ ಕಾಣಿಸಲೇ ಇಲ್ಲ...ಈಗ ಮರ, ಅದರಿಂದ ತೂಗಿರುವ ಲಕ್ಷ್ಯ, ಎರಡೂ ಕಾಣುತ್ತಿದೆಯಲ್ಲ...ಇದು ಹೇಗೆ ?

ದ್ರೋಣ—(ಮುಗುಳ್ನಕ್ಕು) ನಿನಗಿನ್ನೂ ತಿಳಿಯದೋ? ಆ ಕತ್ತಿ ಗುರಾಣಿಗಳ ಶಬ್ದಕ್ಕೆ ನಿನ್ನ ಕಿವಿ ಕಿವುಡಾಗಿತ್ತಲ್ಲ...ಈಗ ಅದೂ ಕೇಳಿಸುತ್ತಿದೆ... ಮತ್ತೆ ನಾವು ನಿಂತಿರುವ ನೆಲವನ್ನೇ ಸುಡುತ್ತಿರುವ ಈ ಉರಿ ಬಿಸಿಲಿನ ಝಳ ನಿನ್ನನ್ನು ಸೋಕಲಿಲ್ಲ!...ಈಗ...ಸುಡುತ್ತಿದೆ...ಇದಕ್ಕೆ ಕಾರಣ ಒಂದೇ ಒಂದು ...**ಏಕಾಗ್ರಚಿತ್ತತೆ**...ಯಾವ ವಿದ್ಯೆ ಕಲಿಯಲೂ ಅತ್ಯವಶ್ಯವಾದ ಗುಣ... ಪರಿಪೂರ್ಣ ಧನುರ್ಧಾರಿ ಎಂದರೆ...ಅವನಿಗೆ ನಿಜವಾಗಿ ಏಕಾಗ್ರಚಿತ್ತತೆ ಇದೆ ಯೆಂದರೆ...ಅಂಥವನು...ತನ್ನ ಗುರಿಯ ಹೊರತು ಏನನ್ನೂ ಕಾಣಲಾರ... ತನ್ನ ಬಾಣದ ಸೂತ್ಕಾರದ ಹೊರತು ಏನನ್ನೂ ಕೇಳಲಾರ...ತೋಳಿನ ಮೇಲೆ ಬಿಲ್ಲಿನ ದಾರ ಉಜ್ಜುವುದನ್ನುಳಿದು ಏನನ್ನೂ ತಿಳಿಯಲಾರ...ಗುರುವನ್ನು ಬಿಟ್ಟು ಇನ್ನೊಬ್ಬರ ಕುರಿತು ಯೋಚಿಸುತ್ತಿರಲಾರ...ಇದು, ಇದು ಏಕಾಗ್ರ ಚಿತ್ತತೆ...ಪಾರ್ಥ!

ಏಕಲವ್ಯ—(ಕಷ್ಟದಿಂದ ಉಚ್ಚರಿಸುತ್ತ) ಏಕಾ—ಏಕಾಗ್ರ—ಏ-ಕಾ-ಗ್ರ-ಚಿ-ತ್ತ-ತೆ ಯಂತೊ? ಇದನ್ನೂ ನೆನಪಿಟ್ಟುಕೊಳ್ಳಬೇಕು ನಾನು...ಓ, ಮತ್ತೆ ಮಾತಾಡುತ್ತಿದ್ದಾರೆ—! (ಪುನಃ ಕಿವಿಗೊಡುವನು)

ದ್ರೋಣ—ಧನುರ್ವಿದ್ಯೆಯ ಅಸ್ತಿವಾರ ಅಭ್ಯಾಸ, ಅಂಗಾಂಗಗಳ ಚಲನ ವಲನಗತಿ, ಇವನ್ನು ಕಲಿತ ನೀನು...ಏಕಾಗ್ರಚಿತ್ತತೆಯನ್ನೂ ಹೊಂದಬಲ್ಲೆ... ಎಂದು ತೋರಿದ ಮೇಲೆ...ಇನ್ನು ನಿನ್ನನ್ನು ಯುಕ್ತ ಧನುರ್ಧಾರಿಯಾಗಿ ಮಾಡಬಲ್ಲೆ, ಎಂಬ ಭರವಸೆ ನನಗೆ ಹಿಂದೆಗಿಂತ ಈಗ ಹೆಚ್ಚಾಗಿದೆ.

ಅರ್ಜುನ—ಯುಕ್ತ ಬಿಲ್ಗಾರ? ಏಕೆ ಗುರುವರ್ಯ...ಅಪ್ರತಿಮ ಧನುರ್ಧರನಾಗಬೇಕೆಂದಿದ್ದೇನೆ ನಾನು?

ಏಕಲವ್ಯ—(ತನ್ನಷ್ಟಕ್ಕೆ) ಅಯ್ಯೋ...ಈತನೂ ಕೂಡ...? ಈತನ ಉದ್ದೇಶವೇನೋ? ನಾ ಕಾಣೆ...

ದ್ರೋಣ—ಅಪ್ರತಿಮ ಧನುರ್ಧರನಾಗಲು ನಿನಗೆ ಯಾವ ಅಡ್ಡಿ ಇದೆ? ಪಾರ್ಥ! ಅದೆಲ್ಲ ನಿನ್ನ ಕೈಯಲ್ಲೇ ಇದೆ ಇನ್ನು ಮುಂದೆ!

ಏಕಲವ್ಯ—(ತನ್ನಲ್ಲಿಯೇ) ಓ...ಆತನ ಕೈಯಲ್ಲಿದ್ದರೆ...ನನ್ನ ಕೈಯಲ್ಲಿಯೂ ಇದೆಯೇನೊ?

ಅರ್ಜುನ—ಅಂದರೆ ಗುರುಜೀ ... ನೀವೆನ್ನುವುದಿಷ್ಟು ... ಸರಿಯಾದ ಚಲನವಲನಗತಿ, ಏಕಾಗ್ರಚಿತ್ತತೆ ಇವಿದ್ದರೆ ಯಾರಾದರೂ ಜಗತ್ತಿನಲ್ಲಿ ಅಪ್ರತಿಮ ಧನುರ್ಧರನಾಗಬಲ್ಲನೆಂದು?

ದ್ರೋಣ—ಅಲ್ಲ...ಪಾರ್ಥ...ಶಿಷ್ಯನಿಗೆ ಗುರುವಿನಲ್ಲಿ ಅಗಾಧವಾದ ಶ್ರದ್ಧಾನ್ವಿತವಾದ ಭಕ್ತಿಯಿರುವುದು ಅತ್ಯಾವಶ್ಯಕ ಅಂಶ.

ಅರ್ಜುನ—ನಿಮ್ಮಲ್ಲಿ ನನಗಮಿತ ಭಕ್ತಿಯಿರುವುದು ನಿಮಗೇ ಗೊತ್ತಲ್ಲ ಗುರುಜೀ!

ಏಕಲವ್ಯ—(ಏನೂ ಅಳುಕದೆ) ನನಗೂ ಅವರಲ್ಲಿ ತುಂಬ ಪ್ರೇಮವಿದೆಯಲ್ಲ...?

ದ್ರೋಣ—ನಿನ್ನ ಹಿತಕ್ಕಾಗಿಯೇ, ಪಾರ್ಥ...ನನ್ನಲ್ಲಿ ಪ್ರೇಮವಿಟ್ಟಿದ್ದೀಯೆಂದು ನಾನು ಆಶಿಸುತ್ತೇನೆ.

ಅರ್ಜುನ—ಹಾಗಾದರೆ ಈ ಮೂರು ಅಂಶಗಳು ಧನುರ್ವಿದ್ಯೆಯಲ್ಲಿ ಪರಿಪೂರ್ಣತೆಯನ್ನು ಗಳಿಸಿಕೊಡುತ್ತಲ್ಲವೆ...ಗುರುಜೀ!

ದ್ರೋಣ—ಹೇಗಾದೀತು ಪಾರ್ಥ? ಇದಕ್ಕೂ ಅಗತ್ಯವಾದ ಇನ್ನೂ ಒಂದು ಅಂಶವಿದೆ...ಅಂದರೆ ನಿನ್ನ ವಿಷಯದಲ್ಲಿ ಹೇಳಬೇಕೆಂದರೆ ಅದು ನಿನ್ನಲ್ಲಿ ನೆಲಸಿಯೇ ಬಿಟ್ಟಿದೆ.

ಏಕಲವ್ಯ—(ಭ್ರಮೆಗೊಂಡು) ಇನ್ನೂ ಒಂದು ಅಂಶವೆ? ಅದು ಆ ಬಾಲಕನಲ್ಲಿದೆಯೆ ಪೂರ್ತಿ? ಅದೇನೋ...ನನ್ನಲ್ಲಿಯೂ ಇದೆಯೋ ಅದು?

ಅರ್ಜುನ—ಈ ನಾಲ್ಕನೆಯ ಅಂಶ ಯಾವುದು ಗುರುಜೀ?

ದ್ರೋಣ—ಈ ನಾಲ್ಕನೆಯ ಅಗತ್ಯವಾದ ಅಂಶವೆಂದರೆ ಪಾರ್ಥ, ಶಿಷ್ಯನಿಗೆ ವಿದ್ಯಾದಾನ ಮಾಡಲು ಗುರುವಿಗೆ **ಮನಃಪೂರ್ವಕವಾದ ಸಂಕಲ್ಪ** ವಿರಬೇಕು...ನಿನ್ನ ವಿಷಯದಲ್ಲೆಂದರೆ–ನೀನು ನನ್ನಲ್ಲಿ ಅಭ್ಯಾಸನಿರತನಾದ ಕ್ಷಣದಿಂದ ನೀನದನ್ನು ಸಂಪೂರ್ಣವಾಗಿ ಹೊಂದಿದ್ದೀಯೆ...ನೋಡು...(ಅರ್ಜುನ ನನ್ನು ನೇವರಿಸಿ) ನಿನಗೆ ಕಲಿಸಲು ನನಗೆ ಪರಮ ಪ್ರೀತಿ...ನಿನಗೇ ಗೊತ್ತಿದೆ ಅದು...ಈಗ ನಿನಗೆ ಅಸ್ತ್ರವಿದ್ಯೆಯ ಅಸ್ತಿವಾರದ ಪೂರ್ಣ ಪರಿಚಯ, ಸ್ವಾಮಿತ್ವ –ಇದೆ. ಕೆಲಸ ಮಾಡುವಾಗ ಏಕಾಗ್ರಚಿತ್ತತೆ ಹೊಂದುವುದು ಚೆನ್ನಾಗಿ ಗೊತ್ತಿದೆ ...ನಿನ್ನ ಗುರುವಿನಲ್ಲಿ ಶ್ರದ್ಧಾಪೂರ್ಣ ಭಕ್ತಿ ಇದೆ...ಗುರುವಿಗೆ ಹೇಳಿಕೊಡಲು ಪರಮ ಪ್ರೀತಿಯಿದೆ...ಇನ್ನೇನು ಬೇಕು ನಿನಗೆ...? ಸತತವಾದ ಅಭ್ಯಾಸವೊಂದೇ ಉಳಿದುದು...ಇದಾದರೆ ನಿನ್ನ ಧನುರ್ವಿದ್ಯೆ ಪೂರ್ಣವಾಯಿತು.

ಏಕಲವ್ಯ—(ವ್ಯಸನ ಧ್ವನಿಯಿಂದ) ಹಾಗಾದರೆ ಎಲ್ಲವೂ ನನ್ನ ಕೈಲಿಲ್ಲ ...ಅವರು ನನಗೆ ಹೇಳಿ ಕೊಡಲು ಪರಮ ಪ್ರೀತಿ!...ಆ ಅಂಶವೊಂದೇ ನನಗೆ ಬೇಕಾದುದು. ವಿದ್ಯಾನ್ವೇಷಣಾರ್ಥಿಗೆ ಕಲಿಸಲು ಗುರುವಿನ ಕಡೆಯಿಂದ ಇರಬೇಕಾದ ಮನಃಪೂರ್ವಕವಾದ ಸಂಕಲ್ಪ ಎಂದರವರು. ಇರಲಿ...ಇನ್ನೇನು ಹೇಳುವರೋ ಕೇಳೋಣ.

ಅರ್ಜುನ—ಆಹಾ...ಸತತಾಭ್ಯಾಸ...ಸರಿಯೇ...ಅದೂ ಈಗ ನೀವು ನನಗೆ ಕಲಿಸಿದ ರೀತಿಯಲ್ಲಿ ಗುರೂಜಿ! ಅದನ್ನೇಯೊ...ನೀವು ಕರೆಯುವುದು... ಧನುರ್ವಿದ್ಯೆಯ ಅಸ್ತಿವಾರವೆಂದು?

ದ್ರೋಣ—ಹೌದು ಪಾರ್ಥ......ಅದೇ...ಅಸ್ತಿವಾರ......ಧನುರ್ವಿದ್ಯಾ ಭ್ಯಾಸಕ್ಕೆ ಅದೇ ಬುನಾದಿ. ಶಿಷ್ಯನಿಗೆ ವಿವರಿಸಿ...ಗುರುವಿನ ನೇತೃತ್ವದಲ್ಲಿ

ಅವನನ್ನು ಸಿದ್ಧಗೊಳಿಸಬೇಕಾದ್ದು...ಅದೆಂದರೆ...ಮೊದಲಲ್ಲೇ ಶರೀರಾದ್ಯಂತದ ಸರಿನಿಲುವು, ಲಕ್ಷ್ಯವನ್ನು ಎದುರಿಸುವ ಸರಿಸಡೆ, ಬಾಣ ಹೂಡುವಾಗ ಶರೀರದ, ಅಂಗಾಂಗಗಳ ಕ್ರಮಪರಿತ ಚಲನೆಗಳು...ಕೊನೆಯದಾಗಿ ಬಾಣಪೆಸೆವಾಗಿನ ಗುರಿ ನೋಟ, ಎಸೆತ...ಆಯಿತೇ...ಎಲ್ಲ ಇಲ್ಲಿದೆ...ಮತ್ತೆ ನೀನು ಈ ಬೆಳಿಗ್ಗೆ ಮಾಡಿದ ಅಭ್ಯಾಸದಿಂದ ಒಳ್ಳೆಯ ತಳಪಾಯ ಹಾಕಿದ್ದೀಯೆ.

ಏಕಲವ್ಯ—(ನೊಂದು) ನಾನೂ ಹಾಕಿಕೊಂಡಿದ್ದೇನಲ್ಲಾ...ಅಂತೆಯೇ ? ಆದರೆ ಅವರ ಮನಸ್ಸಂಕಲ್ಪವನ್ನು ನಾನು ಗಳಿಸದಿದ್ದರೆ ಇವೆಲ್ಲ ಆರ್ಜಿಸಿದರ ಫಲವೇನು? ಅವರೇ ಅಂದರಲ್ಲಿ ಅದು ಅಗತ್ಯ...ಎಂದು ?

ಅರ್ಜುನ—ಗುರುಜೀ...ಈಗ ನೀವು ಹೇಳಿದ ಅಗತ್ಯ ಅಂಶ ಲಕ್ಷಣಗಳೆಲ್ಲ ನನ್ನಲ್ಲಿ ಅಳವಡಿಸಿರುವುದರಿಂದ ನನ್ನನ್ನು ನೀವು ಜಗತ್ತಿನಲ್ಲೇ ಅಪ್ರತಿಮ ಧನುರ್ಧಾರಿಯಾಗಿ ಮಾಡುವಿರಿ...ಅಲ್ಲವೇ ?

ದ್ರೋಣ—(ಮುಗುಳುನಕ್ಕು) ಆಗಲಿ ಪಾರ್ಥ.

ಅರ್ಜುನ—ಹಾಗೆ ನೀವು ವಚನ ಕೊಡುತ್ತಿರುವಿರಾ, ಗುರುಜೀ?

ದ್ರೋಣ—ಖಂಡಿತವಾಗಿ.

ಅರ್ಜುನ—(ಚಪ್ಪಾಳೆ ತಟ್ಟುತ್ತ) ಇದೀಗ ಪರಮ ಸಂತೋಷ ನನಗೆ! ಈಗಿಂದೀಗಲೇ ಓಡಿಹೋಗಿ ಎಲ್ಲರಿಗೂ ಈ ಸುವಾರ್ತೆಯನ್ನು ತಿಳಿಸಲೇಬೇಕು... **(ಆತುರದಿಂದ ಹಿಂಬಯಲಿನ ಕಡೆ, ಕುಣಿಯುತ್ತ ಓಡುವನು)**

ಏಕಲವ್ಯ—ಶಿಷ್ಯನಿಗೆ ಕಲಿಸಬೇಕೆಂದು ಗುರುವಿನ ಮನಃಪ್ರೀತಿ! ಅದೊಂದೇ ನನಗಿಲ್ಲದ ಅಂಶ. ಉಳಿದುದೆಲ್ಲ ನನ್ನ ಕೈಯಲ್ಲೇ ಇದೆ. ಅಯ್ಯೊ! ಅವರು ನನ್ನನ್ನು ಶಿಷ್ಯನಾಗಿ ಸ್ವೀಕರಿಸಲಾರರೆಂದೇ ನನ್ನ ಭಯ. ಈ ರಾಜ ಕುಮಾರರ ಸರಿಸಮಾನಸ್ಕಂಧ ಶಿಷ್ಯನಾಗಿರಲು ನಾನು ಅರ್ಹನಲ್ಲವೆಂದು ಭಾವಿಸುವರೋ ಏನೋ! (ಅರಸುಗುವರರ ಕಡೆ ನೋಡಿ ಸುಯ್ದು) ನಾನು ತಾನೇ ಏನು ? ಈ ವಿಶಾಲ ಮನೋಹರ ಕ್ಷೇತ್ರದಲ್ಲಿ ಎಷ್ಟು ಕ್ಷುಲ್ಲಕ, ಭಿಕಾರಿಯಾಗಿ ಕಾಣುತ್ತಿದ್ದೇನಲ್ಲ ಎಂದು ನನಗೆ ಎನ್ನಿಸುತ್ತಿದೆ. ಎನ್ನಿಸುವುದೇನು? ಹಾಗೇ ಇದ್ದಿರಲೂ ಸಾಕು! ಇದ್ದಿರಲೇ ಬೇಕು! ಈ ವೇಷ–ಭೂಷಣ–ಸಜ್ಜಿತ

ರಾಜಕುವರರ ಇದಿರಿನಲ್ಲಿ...ಆದರೂ ಅವರ ಮನಃಪ್ರಸಾದವನ್ನು ಗಳಿಸಲೇ ಬೇಕು—(ಅಂಜುತ್ತ) ಹೇಗೆ?—ಹೇಗಾದರೂ...ಏನಾದರೂ ನನ್ನನ್ನು ಕಲಿಸು ವಂತೆ ಅವರ ಮನಸ್ಸನ್ನು ಒಲಿಸಿ ಪ್ರಸನ್ನಗೊಳಿಸಬೇಕು...ಬೇಕು—ಬೇಕು... ಹೇಗೆ? ನನಗೆ ಹೆದರಿಕೆಯಾಗಿದೆ, ಆದರೂ ನಾನು ಅವರೆಡೆ, ಹೋಗಲೇಬೇಕು. ಹೋಗಿ ಕೇಳ–ಅಬ್ಬ! ಅಷ್ಟೊಂದು ಧೈರ್ಯ ಬಂದೀತೆ ನನಗೆ?...ಓ! ಅಂತಹ ಮಹಾನ್‌ವ್ಯಕ್ತಿ, ಅಷ್ಟೊಂದು ಉದಾರ! (ಕ್ರಮೇಣ, ದೃಢ ನಿರ್ಧಾರ ಗೊಂಡಂತೆ) ಛೆ! ಧೈರ್ಯ! ಧೈರ್ಯ! ಧೈರ್ಯವನ್ನು ತಂದುಕೊಳ್ಳಲೇಬೇಕು. ನನ್ನ ಬಡ ಜಿಂಕೆ ಹುಲ್ಲೆಗಳ ರಕ್ಷಣೆಗಾಗಿ ನಾನು ಏನನ್ನು ಮಾಡಲೂ ಧೈರ್ಯವಂತ ನಾಗಿರಬೇಕು...(ಏನೋ ಹೊಳೆದಂತಾಗಿ) ಹಾಂ...ಹೊಳೆಯಿತು...ಹೀಗೆ ಹೇಳುವೆ ...ಜಗತ್ತಿನಲ್ಲಿಯೆ...ನಾನು ಶ್ರೇಷ್ಠ ಧನುರ್ಧರನಾಗಬೇಕಿದ್ದ ಕಾರಣವನ್ನು ಅರಿಕೆ ಮಾಡಿಕೊಳ್ಳುವೆ...ಅವರ ಮುಖದ ಮೇಲೆ ಇಷ್ಟೊಂದು ಸಾಧು ಕಳೆ ಇದೆ ಎಂದ ಮೇಲೆ ಅವರಲ್ಲಿ ಈ ನಿಸ್ಸಹಾಯ, ನಿರುಪದ್ರವಿ ಪ್ರಾಣಿಗಳಿಗಾಗಿ ದಯೆ ಇರಲೇ ಬೇಕು. ಆ ಪಾರ್ಥನೂ ಅಪ್ರತಿಮ ಧನುರ್ಧರನಾಗಬಯಸುತ್ತಾನಲ್ಲವೆ? ಅವನ ಉದ್ದೇಶವೇನೊ? ಆದರೂ ನನ್ನದಕ್ಕಿಂತ ಉದಾತ್ತವಾಗಿರಲಾರದು... ಇಷ್ಟೇಕೆ? (ನಿಶ್ಚಿತ ಧ್ವನಿಯಿಂದ) ಅವರೊಡನೆ–ಮಾತನಾಡಿಯೇ ಬಿಡುತ್ತೇನೆ ...ನನ್ನ ಅದೃಷ್ಟ...ಅವರೊಬ್ಬರೇ ಇದ್ದಾರೆ...ಅಷ್ಟೇ ಅಲ್ಲ...ಮಂದಸ್ಮಿತರಾಗಿ ದ್ದಾರೆ...ಪ್ರಸನ್ನರಾಗಿದ್ದಾರೆ... (ಅಂಜುತ್ತಂಜುತ್ತ ಮುಂದೆ ಬಂದು ದ್ರೋಣರು ತನ್ನೆಡೆ ತಿರುಗಲು ಕಾಲಿಗೆ ಬಿದ್ದು) ಪ್ರಣಾಮ, ಸ್ವಾಮಿನ್!

ದ್ರೋಣ—(ಬಗ್ಗಿ. ಅವನನ್ನೆತ್ತಿ ಆದರದ ಧ್ವನಿಯಿಂದ) ದೇವರು ನಿನಗೆ ಒಳ್ಳೆಯದನ್ನು ಮಾಡಲಿ ಮಗು! ನನ್ನಿಂದೇನಾಗಬೇಕಪ್ಪ?

ಏಕಲವ್ಯ—(ಪರಮಾನಂದ ಹೊಂದಿ ಉತ್ತೇಜಿತನಾಗಿ) ಒಂದು ಸಣ್ಣ ಅನುಗ್ರಹ ಸ್ವಾಮಿ...ಮತ್ತೇ...ತಾವು ಘನತೆವೆತ್ತ ದ್ರೋಣಾಚಾರ್ಯರಲ್ಲವೆ?

ದ್ರೋಣ—(ಪ್ರೇಮದ ನಗು ನಗುತ್ತ) ನಾನು ದ್ರೋಣಾಚಾರ್ಯ ಸರಿ, ಆದರೆ "ಘನತೆವೆತ್ತುದೇ"ಕೆ?

ಏಕಲವ್ಯ—ನನಗೆ ತಿಳಿಯದು ಸ್ವಾಮಿ! ನನ್ನ ತಾಯಿ ಹಾಗೆನ್ನುತ್ತಾಳೆ ತಮ್ಮನ್ನ!

ದ್ರೋಣ—ನಿನ್ನ ತಾಯಿ? ಹೂಂ...ಸರಿ...ಅದೇನು ಸಣ್ಣ ಅನುಗ್ರಹ ನೀನು ಕೇಳಿದ್ದು?

ಏಕಲವ್ಯ—(ಅಂಜುತ್ತಂಜುತ್ತ) ಜಗತ್ತಿನಲ್ಲೆಲ್ಲ ಅಪ್ರತಿಮ ಧನುರ್ಧರನಾಗುವಂತೆ ನನಗೆ ಸಹಾಯ ಮಾಡುವಿರಾ?

ದ್ರೋಣ—(ಒಂದು ಕ್ಷಣ ಅಪ್ರತಿಭನಾಗುವನು; ಬಾಲಕನ ಮುಗ್ಧತೆಯಿಂದ ಹರ್ಷಗೊಂಡು) ಏನೂ? ಪಾರ್ಥನಿಗೊಬ್ಬ ಪ್ರತಿಸ್ಪರ್ಧಿಯೆ? (ಗಟ್ಟಿಯಾಗಿ ನಗುತ್ತ) ಇಂದೇಕೊ...ಭೂಮಂಡಲದ ಪ್ರತಿಯೊಬ್ಬ ಬಾಲಕನೂ ಅಪ್ರತಿಮ ಧನುರ್ಧರನಾಗಬೇಕೆಂದು ಬಯಸುವಂತೆ ಕಾಣುತ್ತದೆ. (ಮತ್ತೆ ನಗುವರು)

ಏಕಲವ್ಯ—(ಮಾತೆಳೆಯುತ್ತ ಆದರೂ ದೃಢವಾಗಿ) ತಾವು ನಗುವುದೇಕೋ...ಕೇಳಲೇ ಸ್ವಾಮಿ?

ದ್ರೋಣ—ಕೇಳು ಮಗು, ...ಸಂಕೋಚವಿಲ್ಲದೆ ಕೇಳು...ನೀನು ಕೇಳಿದ್ದು ಖಂಡಿತ ಸಣ್ಣ ಅನುಗ್ರಹವಲ್ಲ. ಆದರೂ ನೀನು ಇಷ್ಟೊಂದು ಸಹಜವಾಗಿ, ಸರಳವಾಗಿ ಕೇಳಿದೆಯಲ್ಲ...ಹಹ–ಅದಕ್ಕಾಗಿ ನಗೆ...ನೀನು ನಿಜವಾಗಿಯೆ ಹಾಗೆ ಬಯಸುತ್ತಿರಲಿಕ್ಕಿಲ್ಲವಷ್ಟೆ?

ಏಕಲವ್ಯ—ಅಯ್ಯೊ! ನಿಜವಾಗಿ ಸ್ವಾಮಿ ... ಮನಃಪೂರ್ವಕವಾಗಿ, ಅತ್ಯಂತ ಆತುರತೆಯಿಂದ...

ದ್ರೋಣ—(ಒಂದು ಕ್ಷಣ ಅವನನ್ನು ಮೇಲಿಂದ ಕೆಳಗೆ ದೃಷ್ಟಿಸಿ) ನಿಜವಾಗಿ? ಮನಃಪೂರ್ವಕವಾಗಿ...ಹೂ...ಇದ್ದರೂ ಇರಬಹುದೇನೋ, ನಿನ್ನ ನೋಡಿದರೆ! ಅದು ಹೇಗಾದರಾಗಲೀ...ನೀನಾರು...ನಿನ್ನ ಹೆಸರೇನು... ನಿಮ್ಮ ತಂದೆ ಯಾರು...ನೀನಾವ ಜಾತಿ?

ಏಕಲವ್ಯ—(ಅಭಿಮಾನದ ನಿಲುವು ನಿಂತು) ನನ್ನ ಹೆಸರು ಏಕಲವ್ಯನೆಂದು ಸ್ವಾಮಿ! ನಮ್ಮ ತಂದೆ ಹಿರಣ್ಯಧನುಸ್ಸು...ನಿಷಾದ ಜನಾಂಗಕ್ಕೆ ನಾಯಕ, ಒಬ್ಬನೇ ಒಬ್ಬ ಅಧಿಪತಿ. ಇಂದಿನವರೆಗೆ ಎಂದೂ ಆಗಿ ಹೋಗಿರದಂತಹ ಅಧಿಪತಿ.

ದ್ರೋಣ—(ಮೆಲ್ಲನೆ–ತನ್ನಲ್ಲಿ) ನಿಷಾದರ ಅಧಿಪತಿ! ಹೂ!... ಹಾಗಾದರೆ ನೀನು ನಿಷಾದ? ಹೂ! ಬಿಲ್ಗಾರನಾಗಲು ಇಷ್ಟೊಂದು ತವಕಪಡು ತ್ತಿರುವುದು ಸಹಜವೇ. (ಬಯಲಿನ ಕಡೆ ದೃಷ್ಟಿ ಹೊರಳಿಸಿ) ಆದರೆ ಮಗು... ನನಗೆ ಶಕ್ಯವಾದೀತೆಂದು ನಾನು...ಹೇಳಲಾರೆ...

ಏಕಲವ್ಯ—(ಅರ್ಧದಲ್ಲೇ ಬಾಯಿಹಾಕಿ, ದೈನ್ಯದಿಂದ) ಕ್ಷಮೆ ಇರಲಿ, ಸ್ವಾಮಿ! ತಾವು ಹಿಂಜರಿವ ಕಾರಣವನ್ನು ನಾನು ತಿಳಿದುಕೊಳ್ಳಬಲ್ಲೆ. ನಾನು ನಿಷಾದ, ನಿರಪರಾಧಿಗಳನ್ನು ಸದೆಬಡಿದು ಸೂರೆ ಮಾಡುವವ, ಸಾಧುಪ್ರಾಣಿಗಳನ್ನು ಸ್ವಂತದ ಆಹಾರಕ್ಕೆಂದು ವಧಿಸುವವ—ನಾನು ತಮ್ಮಿಂದ ವಿದ್ಯೆಯನ್ನು ಕಲಿತುಕೊಂಡರೆ ಮುಂದೆ...ಅಹುದಲ್ಲ? ಇದಕಾಗಿ ನೀವು ಹಿಂಜರಿಯುವುದು? ಆದರೆ ಹಾಗಲ್ಲ ಸ್ವಾಮಿ...ನಾನು ಹೇಳುವುದನ್ನು ತಾವು ನಂಬಬೇಕು ಸ್ವಾಮಿ...ನಮ್ಮ ತಂದೆಯ ಮರಣದ ತರುವಾಯ ನನ್ನ ತಾಯಿಯೂ ನಾನೂ ಕಾಡಿನ ಏಕಾಂತದಲ್ಲಿ ವಾಸವಾಗಿದ್ದೇವೆ. ಕಾಡಿನ ತುಂಬ ಪಕ್ಷಿಗಳು, ಹುಲ್ಲೆಗಳು, ಜಿಂಕೆ ಮರಿಗಳು ಹೇರಳವಿದ್ದರೂ, ನಾವಿಬ್ಬರೂ ಬರೀ ಕಾಳುಕಡ್ಡಿ, ಹಣ್ಣು ಹಂಪಲು ತಿಂದು, ಹಾಲು ಕುಡಿದು ಜೀವಿಸುತ್ತಿದ್ದೇವೆ ಸ್ವಾಮಿ! ನನ್ನ ಮಾತನ್ನು ನಂಬಿ.

ದ್ರೋಣ—(ಕರುಣಾಪೂರಿತನಾಗಿ) ಇಲ್ಲ...ಇಲ್ಲ......ಮಗುವೇ...... ನಾನದನ್ನೆಲ್ಲ ಕುರಿತಲ್ಲ ಯೋಚಿಸುತ್ತಿದ್ದುದು...ಪಾಪ, ನಿಮ್ಮ ತಂದೆ ನಿನ್ನ ಚಿಕ್ಕಂದಿನಲ್ಲಿಯೇ ತೀರಿಕೊಂಡರೇ... (ಬಾಲಕನ ಸಪ್ಪೆಮೊಗಕ್ಕೆ ಒಲಿದು, ಸಮೀಪಿಸಿ, ಮೆಲ್ಲನೆ ನೇವರಿಸುತ್ತ) ಪಾಪ ಪಾಪ...ತಾಯಿಯೊಡನೆ ಒಬ್ಬನೇ ಕಾಡಿನಲ್ಲಿ ವಾಸವಾಗಿರುವೆಯಾ? ಹಾಗಿದ್ದರೆ...ಜಗತ್ತಿನ ಅದ್ವಿತೀಯ ಧನುರ್ಧಾರಿ ಯಾಗಬೇಕೆಂಬ ಈ ಹಂಬಲವೇಕೆ? ತಂದೆಯ ಮರಣವನ್ನು ನೆನಪಿನಿಂದ ಹೇಳಿದೆ. ಈಗ ನೀನು ಕಲಿಯಬೇಕೆಂದ ಧನುರ್ವಿದ್ಯೆ, ನಿನ್ನ ತಂದೆಯ ಸಾವಿಗೆ ಪ್ರತೀಕಾರ ಮಾಡಲೋ?

ಏಕಲವ್ಯ—ಇಲ್ಲ ಸ್ವಾಮಿ...ಇಲ್ಲವೇ ಇಲ್ಲ...ಸರ್ವಥಾ ಅಲ್ಲ – ನನ್ನ ತಂದೆಯ ಮರಣ ಗೌರವದ ಮರಣ. ತಮ್ಮ ರಾಜನಿಗಾಗಿ ಸಮರಾಂಗಣದಲ್ಲಿ ಕೆಚ್ಚೆದೆಯಿಂದ ಹೋರಾಡಿ ಮಡಿದರು ಅವರು. ಅವರು ವೀರ ಮರಣ

ಪಡೆವರೆಂದು ಎಲ್ಲರೂ ಹೇಳುತ್ತಿದ್ದುದನ್ನು ಕೇಳಿದ್ದೇನೆ ನಾನು! ನಾನಾದರೋ ಈ ಪ್ರಪಂಚದಲ್ಲಿಲ್ಲ ಅದ್ವಿತೀಯ ಅಸ್ತ್ರವಿದ್ಯಾ ಪ್ರವೀಣನಾಗಲೇ ಬೇಕು... ಆಗಲೇ ಬೇಕು ಸ್ವಾಮಿ! ಅದಕ್ಕೆ ಕಾರಣ...ಅದಕ್ಕೆ... (ದೈನ್ಯದಿಂದ ದ್ರೋಣರ ಕಣ್ಣೆಳೆಯುತ್ತ) ಅದೊಂದು ತುಂಬ ವಿಷಾದಮಯ ಕತೆ, ಉದ್ದದ ಕತೆ ಸ್ವಾಮಿ ...ನೀವೂ ದಯಾಳುಗಳಾಗಿ ಕಾಣುತ್ತೀರಿ, ಹಾಗೆಯೇ ಮಾತನ್ನೂ ಆಡುತ್ತಿದ್ದೀರಿ ...ನಿಮಗೆ ಆ ದೊಡ್ಡ ಕತೆ ಹೇಳಲೇ ಬೇಕೆನಿಸುತ್ತಿದೆ, ತಾವು ಸ್ವಲ್ಪ ಅವಕಾಶ ವಿತ್ತರೆ...ಅದರಿಂದ ನನಗೆಷ್ಟೋ ಸಮಾಧಾನ...ಅಷ್ಟೈಶ್ವರ್ಯ ಬಂದಂತೆ.

ದ್ರೋಣ—(ಬಾಲಕನಿಗೊಲಿದು) ಅಗತ್ಯವಾಗಿ...ಮಗು...ನಿನ್ನ ಕತೆ ಯನ್ನೆಲ್ಲ ಹೇಳು...ಕೇಳೋಣ...ಆದರೆ ತಾಳು...ಈಗ–ಈಗ–? ಹಾಂ... (ಸುತ್ತ ನೋಡಿ) ನನ್ನ ಪೂರ್ವಾಹ್ನದ ಕೆಲಸವೆಲ್ಲ ಮುಗಿದಿದೆ. ಇನ್ನು ಕೆಲವು ಕಾಲದ ಹೊತ್ತೆಲ್ಲ ಬಿಡುವಿದೆ, ನಿನಗಾಗಿಯೆ ಅದು ಮೀಸಲು; ತಡೆ...ಮುಂಚೆ, ಕೂರಲು ಒಂದು ನೆರಳಿನ ಪ್ರದೇಶಕ್ಕೆ ತೆರಳೋಣ... (ದೊಡ್ಡ ವೃಕ್ಷದಡಿಗೆ ನಡೆದು ಕುಳಿತು) ಬಾ...ಆ...ಕೂಡು ಮಗು...ಕೂಡು...ಆ ಅದು ಸರಿ...ಎಲ್ಲಿ ಈಗ ನಿನ್ನ ಕತೆ...ಉದ್ದವಾದುದು...ವಿಷಾದದ್ದು...ನೀನೆಂದಂತೆ... (ಆದರದ ನಗೆ ನಗುತ್ತ) ಹೇಳು ಮಗು.

ಏಕಲವ್ಯ—(ಆನಂದಭರಿತನಾಗಿ) ಅದೆಂದರೆ ಹೀಗೆ...ನಾನು...ಅಲ್ಲ, ನಾನು ಏನು ಹೇಳುತ್ತಿದ್ದೆ? ಓ...ಸರಿ...ನಾನು...ನನ್ನ ತಾಯಿ ನಾನು ಇಬ್ಬರೇ ಒಂದು ಸಣ್ಣ ಕಾಡಿನಲ್ಲಿದ್ದೇವೆ...ಎಂದು ಹೇಳಿರುವೆನಲ್ಲವೆ? ಸರಿ. ಇಲ್ಲಿಂದ ಬಹುದೂರವದು....ಮೂರು ಹಗಲು ಮೂರು ರಾತ್ರೆ ನಡೆಯಬೇಕು ಅಲ್ಲಿಗೆ ತಲಪಲು. ನಮ್ಮ ಕಾಡಿನ ಮಗ್ಗುಲಲ್ಲೇ ಮತ್ತೊಂದು ಕಾಡು.... ಅದೂ ಚಿಕ್ಕದೇ....ಅಲ್ಲೊಂದು ಆಶ್ರಮ....ಅಲ್ಲೊಬ್ಬ ಋಷಿ. ಆಯಿತೇ–? ಇನ್ನು ತೋಳಗಳು....ತೋಳಗಳು ಸ್ವಾಮಿ....ನೂರಾರು ತೋಳಗಳು....ನಮ್ಮ ಕಾಡಿನ ಜಿಂಕೆ ಹುಲ್ಲೆಗಳನ್ನು ಹಿಂಸಿಸಿ ಕೊಂದು....ನೀಚತನದಿಂದ ಆ ಋಷಿಯ ಕಾಡಿನ ಆಶ್ರಯವನ್ನು ಸೇರುತ್ತವೆ. ಆದರೆ ಅಲ್ಲಿ ಅವೇ ತೋಳಗಳು—ನೀವು ನಂಬಿ, ನಂಬದಿರಿ, ಅವೇ ತೋಳಗಳು, ಅಲ್ಲಿ ಜಿಂಕೆ ಹುಲ್ಲೆಗಳನ್ನು ಕೊಲ್ಲುವುದಂತೂ ಇಲ್ಲವೇ ಇಲ್ಲ, ಹಿಂಸಿಸುವುದೂ ಇಲ್ಲ—ಅವುಗಳೊಡನೆ ಸರಸವಾಡುತ್ತವೆ!

ಅವಕ್ಕೆ ಮೊಲೆಯುಣಿಸುತ್ತವೆ! ನನ್ನ ತಾಯಿಗೆಂದೆ–"ಅಮ್ಮಾ, ನಮ್ಮ ಕಾಡಿನಲ್ಲಿ ನಮ್ಮ ಜಿಂಕೆ ಹುಲ್ಲೆಗಳನ್ನು ಹಿಂಸಿಸುವ ಅದೇ ತೋಳಗಳು ಋಷಿಯಾಶ್ರಮದಲ್ಲಿ ಅಂತಹ ಜಿಂಕೆ ಹುಲ್ಲೆಗಳನ್ನು ಆದರಿಸಿ ನೇವರಿಸುವುವಲ್ಲ? ಇದೇನು ಸೋಜಿಗ, ಅಮ್ಮಾ?" ಎಂದಾಗ, ತನ್ನ ತಾಯಿ–"ಅಯ್ಯೋ...ತೋಳಗಳು ತೋಳಗಳೆ. ಎಲ್ಲಿ ಹೋದರೂ ಕ್ರೂರಿಗಳೇ...! ಆದರೆ ಇದು ಅವುಗಳ ದಯಾಧರ್ಮವಲ್ಲ. ಆ ಋಷಿಯ ತಪಶ್ಶಕ್ತಿ ಅವುಗಳ ದುಷ್ಟ ಸ್ವಭಾವವನ್ನು ಹಿಡಿದಿಟ್ಟಿದೆ...ಆದೂ ಆ ತೋಳಗಳು ಆತನ ಕಾಡಿನಲ್ಲಿರುವ ತನಕ ಮಾತ್ರ" ಎಂದಳು. "ಅಮ್ಮಾ, ಆ ಋಷಿಯನ್ನು ಬೇಡೋಣವೇ...ನಮ್ಮ ಕಾಡಿಗೆ ಬಂದು ಇಲ್ಲಿರುವ ಜಿಂಕೆ ಹುಲ್ಲೆಗಳನ್ನು ಮರಿಗಳನ್ನು ತೋಳಗಳ ಹಿಂಸೆಯಿಂದ ಆಘಾತದಿಂದ, ಬಿಡಿಸಿ ಕಾಪಾಡಿ...ನಿಮ್ಮ ತಪಶ್ಶಕ್ತಿಯ ಪ್ರಭಾವ ಉಪಯೋಗಿಸಿ ಎಂದು?" ಎಂದಾಗ ನನ್ನ ತಾಯಿ "ಋಷಿಯ ಶಕ್ತಿ, ಅವನ ಕಾಡಿನ ಮಟ್ಟಿಗೆ, ಹೊರಗೆ ನಡೆಯದು" ಎಂದಳು. ಆಗ... (ಥಟ್ಟನೆ ತಡೆದು ಮೆಲ್ಲನೆ) ತಮಗೆ ಬೇಸರವೇ ಸ್ವಾಮಿ?

ದ್ರೋಣ—(ಬೆಚ್ಚಿ...ಏಕಲವ್ಯನನ್ನು ನೇವರಿಸುತ್ತ) ಇಲ್ಲ...ಇಲ್ಲ...... ಏನೂ ಬೇಸರವಿಲ್ಲ...ಹೇಳು ಹೇಳು.. ಕೇಳಲು ಕುತೂಹಲಿಯಾಗಿಯೇ ಇದ್ದೇನೆ ...ಹೇಳು ಮಗು!

ಏಕಲವ್ಯ—(ಸಮಾಧಾನ ಹೊಂದಿ) ತುಂಬ ವಂದನೆಗಳು ಸ್ವಾಮಿ! ನೀವು ತುಂಬ ದಯಾರ್ದ್ರಹೃದಯರು. ಆ...ಏನು ಹೇಳುತ್ತಿದ್ದೆ ನಾನು? ಹಾಂ, ...ಸರಿ...ಆಗ ನಾನು ತಾಯಿಯನ್ನು ಕೇಳಿದೆ..."ಅಮ್ಮಾ ಇಂಥ ವಿಶೇಷ ಶಕ್ತಿಯನ್ನು ನಾನು ಗಳಿಸಿಕೊಳ್ಳುವ ಬಗೆ ಹೇಗೋ?" ಎಂದು. "ಈ ಜನ್ಮದಲ್ಲಲ್ಲ, ಮಗೂ! ಈಗ ನೀನು ಹುಟ್ಟಾ ನಿಷಾದ. ಆದರೆ ನಿನ್ನ ಕುಲಧರ್ಮಕ್ಕೆ ತಕ್ಕಂತೆ ನೀನು ನಿನ್ನ ಕರ್ತವ್ಯ ಕರ್ಮ ನೆರವೇರಿಸಿ ಜೀವನ ದಾಟಿದರೆ ಆಗ ನಮ್ಮ ನೆರೆಯ ಋಷಿಯಂತೆ ನೀನೂ ಮುಂದಿನ ಯಾವುದಾದರೊಂದು ಜನ್ಮದಲ್ಲಿ ಆರ್ಯನಾಗಿ ಹುಟ್ಟಬಹುದು. ಆತನಂತೆ ತಪಶ್ಶಕ್ತಿ ಗಳಿಸಲೂ ಬಹುದು..." ಎಂದಳು. "ಹಾಗಾದರೆ ಅಲ್ಲಿಯ ತನಕ ನಮ್ಮ ಸಾಧು ಪ್ರಾಣಿಗಳ ಗತಿಯೇನು? ನಾನು ಮುಂದೆ ಎಂದೋ ಆರ್ಯನಾಗಿ ಜನಿಸುವ ತನಕ...ಇಲ್ಲಿ ನಮ್ಮ ಜಿಂಕೆ ಹುಲ್ಲೆಗಳು ಹೀಗೇ ಹಿಂಸೆಗೆ ತುತ್ತಾಗಬೇಕೆ, ಅಮ್ಮ!" ಎಂದೆ. "ಛೆ ಅದೇಕೆ, ಬೇಕಾದರೆ,

ಇದೇ ಜನ್ಮದಲ್ಲೇ ನಿನ್ನ ಕುಲಧರ್ಮಕ್ಕೆ ತಕ್ಕಂತೆ ತೋಳಗಳನ್ನು ಕೊಂದು ಹುಲ್ಲೆ ಜಿಂಕೆಗಳನ್ನು ರಕ್ಷಿಸಬಹುದಲ್ಲ? ಆಗ ಕುಲಧರ್ಮವನ್ನು ಪಾಲಿಸಿದ್ದಕ್ಕೆ ನೀನೂ ತಪಶ್ಶಕ್ತಿಯನ್ನು ಸಾಕಷ್ಟು ಶೇಖರಿಸಿಕೊಳ್ಳುವೆ." ಅದೇನೋ "ರಕ್ಷಾಯೋಗ ವಂತೆ...ರಕ್ಷಾಯೋಗ" ಎಂದಳು ಆಕೆ, ಸ್ವಾಮಿ! "ನಿಸ್ಸಹಾಯಕರೂ ದುರ್ಬಲರೂ ಆದವರನ್ನು ಬಲಿಷ್ಠರೂ ಕ್ರೂರಿಗಳೂ ಆದವರ ಹಿಂಸಾತ್ಮಕ ಹಾವಳಿಗಳಿಂದ ಕಾಪಾಡುವ ಸಾಮರ್ಥ್ಯ ಇದು..." ಎಂದು ಆಕೆ ವಿವರಿಸಿದಳು... ಆಮೇಲೆ ನನಗೊಂದು ಯೋಚನೆ ಹೊಳೆಯಿತು ಸ್ವಾಮಿನ್! "ಎಲ್ಲ! ನನ್ನ ಈಗಿನ ಜೀವಮಾನದಲ್ಲೇ ಜಗತ್ತಿನಲ್ಲೆಲ್ಲ ಎಲ್ಲ ಕಾಡುಗಳಲ್ಲಿರುವ ಎಲ್ಲ ತೋಳ ಗಳನ್ನೂ ಕೊಂದುಬಿಡುವೆ. ಆಗ ಹುಲ್ಲೆ, ಜಿಂಕೆಗಳಲ್ಲದೆ ಮತ್ತಿತರೆಲ್ಲ ಸಾಧು ಪ್ರಾಣಿಗಳಿಗೆ ಅಪಾಯದ ಭಯ, ಸಾವಿನ ಭಯ, ಒಂದೂ ಇಲ್ಲದೆ, ಅವು ಸ್ವೈರ, ಸುರಕ್ಷಿತವಾಗಿ ತಿರುಗಾಡಬಹುದು. ಅಹುದು, ಹೀಗೆ ಮಾಡಿದರೆ ಈ ನಿಷಾದ ಜನ್ಮದಲ್ಲಿಯೆ ಬೇಕಾದ ಆರ್ಯ ಋಷಿಗಿಂತ ಶ್ರೇಷ್ಠನೆನ್ನಿಸಬಲ್ಲೆ. ತಮ್ಮ ಆಶ್ರಮದ ನಾಲ್ಕು ಮೇರೆಗಳೊಳಗೇ ಅಲ್ಲವೆ, ಈ ಋಷಿಗಳು ದುರ್ಬಲ ಜೀವಿ ಗಳನ್ನು ರಕ್ಷಿಸುವುದು? ಅಹುದು. ಈ ಯೋಚನೆ...ಅಮ್ಮಾ, ನನ್ನ ಯೋಚನೆ ಇದು" ಎಂದೆ. ನನ್ನ ತಾಯಿ ಅಂದಳು, "ಅಹುದಪ್ಪಾ, ಅಹುದು. ಆರ್ಯ ಋಷಿಗಿಂತ ಶ್ರೇಷ್ಠ...ಆಗಬಲ್ಲೆ ನೀನು. ಆದರೆ ಯಾವಾಗ? ಜಗತ್ತಿನಲ್ಲಿಯೇ ನೀನು ಅದ್ವಿತೀಯ ಬಿಲ್ಲುಗಾರನಾಗಬೇಕು. ಹಾಗೆ ನಿನ್ನನ್ನು ಕಲಿಸಿ ಅನುಗೊಳಿಸಲು ತಕ್ಕ ಗುರು ಜಗತ್ತಿನಲ್ಲಿ ಒಬ್ಬರೇ...ಅವರು ಘನತೆವೆತ್ತ ದ್ರೋಣಾಚಾರ್ಯರು" ಎಂದಳು. ಹೀಗೆ ಹೇಳಿ ಇಲ್ಲಿಗೆ ಬರುವ ಬಗೆ ಹೇಗೆ, ತಮ್ಮನ್ನು ನೋಡುವ ಬಗೆ ಹೇಗೆ, ಎಂದೆಲ್ಲವನ್ನೂ ಹೇಳಿದಳು. ಈಗ ತಮಗೆ ತಿಳಿದಿರಬಹುದು... ನಾನೇಕೆ ಧನುರ್ವಿದ್ಯೆ ಕಲಿಯಬೇಕೆನ್ನುವುದು...ಸಹಾಯ ಮಾಡುವಿರಾ...ಸ್ವಾಮಿ! (ಏಕಲವ್ಯ ತನ್ನ ಕತೆ ಮುಗಿಸುವುದರಲ್ಲಿ, ದ್ರೋಣರ ಮೊಗದಲಿ, ಕುತೂಹಲ, ಆಸಕ್ತಿ, ಸಹಾನುಭೂತಿ, ದಯೆ, ಅಭಿಮಾನ, ಆಶ್ಚರ್ಯ, ಪ್ರೇಮ, ಕೊನೆಗೆ ಗಾಢವಾದ ಗೌರವ ಭಾವಗಳು ಮೂಡುವವು. ಏಕಲವ್ಯನನ್ನು ದೃಷ್ಟಿಸಿ ನೋಡಿ)

ದ್ರೋಣ—(ತನ್ನಲ್ಲಿ) ಕರ್ಮಣಾ ಪರಾರ್ಥಃ!...ನೋಡಿದರೆ ಇವನು ನಿಷಾದ...! ಆಶ್ಚರ್ಯ!

ಏಕಲವ್ಯ—(ಕೊನೆಯೆರಡು ಮಾತು ಕೇಳಿಸಿಕೊಂಡು) ನಿಜ ಸ್ವಾಮಿ... ನಾನು ನಿಷಾದನೇ...ಅದರಲ್ಲೇನಿದೆ ಆಶ್ಚರ್ಯ? (ಉತ್ತರ ಬರದಿರಲು) ಕ್ಷಮಿಸಿ ಸ್ವಾಮಿ! ತಾವೇನನ್ನು ಯೋಚಿಸುತ್ತಿದ್ದೀರೆಂದು ಕೇಳಬಹುದೆ?

ದ್ರೋಣ—ಕೇಳು ಮಗೂ...ಕೇಳು...ನೀನು, ನಿನ್ನ ಜಾತಿ, ನಿನ್ನ ಹೆಬ್ಬಯಕೆ...ಇದೇ ನನ್ನ ಯೋಚನೆ.

ಏಕಲವ್ಯ—(ಕಣ್ಣೀರಿಡುತ್ತ–ಅಂಗಲಾಚಿ) ನನ್ನ ಕುರಿತು ಯೋಚಿಸದಿರಿ ಸ್ವಾಮಿ! ನಾನು, ನನ್ನ ಕೀಳುಜಾತಿ...ಅದನ್ನು ಮೀರಿದ ಈ ಹೆಬ್ಬಯಕೆ! ಹೀಗೆ ಯೋಚಿಸಿ ಕೊನೆಗೆ ನೀವು ನನಗೆ ಕಲಿಸುವ ಯೋಚನೆಯನ್ನೇ ಬಿಟ್ಟುಬಿಡಬಹುದಾಗಿದೆ. ನನ್ನನ್ನು ಬಿಡಿ; ಯೋಚಿಸುವುದಾದರೆ ಆ ಬಡ ಹುಲ್ಲೆಗಳನ್ನು ಕುರಿತು ಯೋಚಿಸಿರಿ. ಹಗಲೂ ರಾತ್ರಿ ತೋಳಗಳ ಭಯದಿಂದ ಕೊರಗುತ್ತಿರುವ ಆ ಬಡ ಹುಲ್ಲೆಗಳ ಕುರಿತು ಯೋಚಿಸಿ...ಪಾಪ! ಎಷ್ಟು ದಿನ ಅವು ಆಹಾರವಿಲ್ಲದೆ ಹಸಿದು ಬಳಲುವುವು! ಹುಲ್ಲನ್ನು ಹುಡುಕುತ್ತ ದೂರ ಹೋದರೆ ತಾವೇ ತೋಳಗಳಿಗೆ ಆಹಾರವಾಗುವ ಭಯ ಅವಕ್ಕೆ! ನೀರಿಗಾಗಿ ಝರಿ-ನಿರ್ಝರಗಳವರೆಗೂ ಹೋಗಲಾರವು...ಹೋಗಲಾರವು... ತೋಳಗಳೆಲ್ಲಿ ಅವಿತಿಟ್ಟುಕೊಂಡಿದ್ದು ತಮ್ಮನ್ನು ಮುಗಿಸುವವೋ, ಎಂದು ಭಯ ದಿಂದ ರಾತ್ರೆಯೆಲ್ಲ ಬಾಯೊಣಗಿಸಿಕೊಂಡೇ ಬಿದ್ದುಕೊಳ್ಳುವುವು. ಕಗ್ಗತ್ತಲು ಮುಸುಕಿದರೂ ಸುಖವಿಲ್ಲ, ಕ್ಷೇಮವಿಲ್ಲ; ತೋಳಗಳು ಹಿಂಡುಗಳೊಳಗೆ ಕದ್ದು ನುಗ್ಗಿ ಮರಿಗಳನ್ನು ಎತ್ತಿಕೊಂಡೊಯ್ಯುತ್ತವೆ ಸ್ವಾಮಿ! ಅನೇಕವೇಳೆ ರಾತ್ರೆ ಯೆಲ್ಲ ಮರಿ ಹುಲ್ಲೆಗಳ ಮೊರೆ...ತಾಯಿ ಹುಲ್ಲೆಗಳ ಕೊರಗು, ಕೇಳುತ್ತ, ನನ್ನ ತಾಯಿ–ನಾನು, ನಿದ್ದೆಬಾರದೆ ಕೊರಗುತ್ತಿರುತ್ತೇವೆ... (ಅಳು ತಡೆಯದೆ ಮೊಗ ದಿರುಹಿ, ಕ್ರಮೇಣ ಸಾವರಿಸಿಕೊಂಡು, ಕಣ್ಣೊರಸಿ) ನಮ್ಮ ತಂದೆ ಬದುಕಿದ್ದಾಗ ಹೀಗಿದ್ದಿರಲಿಲ್ಲ, ಸ್ವಾಮಿ! ಆ ತೋಳಗಳನ್ನು ಕೊಂದುಬಿಡುತ್ತಿದ್ದರು...ಹತ್ತಿರ ಸುಳಿಯಲೂ ಬಿಡುತ್ತಿದ್ದಿಲ್ಲ ಅವರು. ನನಗೆ ಬಿಲ್ಲು ಹಿಡಿವ ರಹಸ್ಯ ಕಲಿಸುವ ಮುನ್ನವೇ ಅವರು ತೀರಿಕೊಂಡರು...ನಾನೂ ತುಂಬ ಪ್ರಯತ್ನಪಟ್ಟಿದ್ದೇನೆ ಸ್ವಾಮಿ...ತುಂಬ...ಅಭ್ಯಾಸ ಮಾಡಿದ್ದೇನೆ ಬಾಣ ಬಿಡುವುದು ಕಲಿಯೋಣವೆಂದು ...ಆ ವಿದ್ಯೆ ಕರಗತವಾಗಿಲ್ಲ. ತನ್ನಷ್ಟಕ್ಕೆ ತಾನೇ ಎಲ್ಲವನ್ನೂ ಕಲಿಯುವುದು

ಅಸಾಧ್ಯವೆನಿಸುತ್ತಿದೆ...ಆದರೆ...ಆ ಅಸಹಾಯ ಹುಲ್ಲೆ ಜಿಂಕೆಗಳ ಯೋಚನೆ... ನೀವೂ ಅವುಗಳನ್ನು ಕುರಿತು ಯೋಚಿಸಿದರೆ, ನನಗೆ ಕಲಿಸಲು ಮನಸ್ಸು ಮಾಡು ವಿರೆಂದೇ ನನ್ನ ನಂಬಿಕೆ. ಅದಲ್ಲದೆ...ಇನ್ನೊಂದು ನಿಮಗೆ ಹೇಳುವುದು ಮರೆತೆ ಸ್ವಾಮಿ! ಅರಸು ಮಕ್ಕಳಿಗೆ ಆಚಾರ್ಯರಾದ ನೀವು, ನನ್ನಂಥ ಬಡ ನಿಷಾದನಿಗೆ ಕಲಿಸಲಿಚ್ಛಿಸಲಿಕ್ಕಿಲ್ಲ ಎಂದು ನನ್ನ ತಾಯಿಗೆ ಹೇಳಿದಾಗ, "ಹಾಗಲ್ಲ, ಮಗೂ, ಅವರಿಗಿಂತ ನಿನಗೆ ವಿದ್ಯೆ ಹೇಳಿಕೊಡುವುದರಿಂದ ಆಚಾರ್ಯರಿಗೇ ಹೆಚ್ಚು ಲಾಭ. ಯಾವಜ್ಜೀವವೂ ಅವರ ಶಿಷ್ಯನಾಗಿ ನೀನು ಶೇಖರಿಸುವ ತಪಸ್ಸಿನ ಫಲದ ಬಹುಭಾಗ ನಿನ್ನ ಆಚಾರ್ಯರದಾಗಿ ಅವರಿಗೆ ಸಲ್ಲುತ್ತದೆ. ಬ್ರಾಹ್ಮಣರಾದ ಆಚಾರ್ಯರಿಗೆ ಅರಸು ಮಕ್ಕಳೀಯುವ ಅಷ್ಟೈಶ್ವರ್ಯಾದ್ಯಾ ಭರಣಗಳಿಗಿಂತ ನಿನ್ನ ತಪಸ್ಸೇ ಯೋಗ್ಯ ದಕ್ಷಿಣೆಯೆಂದು ಆರಿಸಿಕೊಂಡಾರು" ಅಂದಳು...ಆದ್ದರಿಂದ...ನನಗೆ...ಕಲಿಸುವಿರಾ...ಸ್ವಾಮಿ! (ದ್ರೋಣರು ಅನ್ಯ ಮನಸ್ಕರಾಗಿರುವುದು ಕಂಡು...ನಿಲ್ಲಿಸುವನು. ಅಷ್ಟರಲ್ಲಿ ಇವರಿದ್ದುದು ಕಾಣದೆ, ಇವರು ಅವನನ್ನು ಕಾಣದೆ, ಅರ್ಜುನ ಹಿಂದಿರುಗಿ ಬಂದು ಅಭ್ಯಾಸದಲ್ಲಿ ತೊಡಗಿರುವನು)

ದ್ರೋಣ—(ನಿಟ್ಟುಸಿರಿಟ್ಟು, ವಿಷಾದಪೂರಿತ ಧ್ವನಿಯಿಂದ) ಮಗು... ನನಗೆ ನಿಜವಾಗಿ ವ್ಯಥೆಯಾಗುತ್ತದೆ...ಆಗುವುದಿಲ್ಲ ಎನ್ನಬೇಕಲ್ಲಾ ಎಂದು... ನೋಡು...ನನ್ನಿಂದ ಕಲಿತುಕೊಳ್ಳಲು ಈಗಲೆ ನೂರಕ್ಕೂ ಮಿಕ್ಕಿದ್ದಾರೆ ಇಲ್ಲಿ... ಇವರ ಶಿಕ್ಷಣ ಮುಗಿಸಲೇಬೇಕಾಗಿದೆ ಮೊದಲು...ಬಹುಶಃ ಇಲ್ಲಿ ಮುಗಿದ ಮೇಲೆ...ನಿನಗೆ...

ಏಕಲವ್ಯ—(ಬಯಲಕಡೆ ಕಣ್ಣು ಹೊರಳಿಸಿದ್ದ ಏಕಲವ್ಯ, ಅರ್ಜುನನ ಕಡೆ ನೋಡಿ, ಹತಾಶಧ್ವನಿಯಿಂದ) ಇಲ್ಲಿ ಮುಗಿಸಿದ ಮೇಲೆಂದಿರಾ ಸ್ವಾಮಿ? ಆದರೆ...ಇಲ್ಲಿ ತಾವು ಎಂದೆಂದಿಗೂ ಮುಗಿಸುವ ಹಾಗೇ ಇಲ್ಲ ಸ್ವಾಮಿ... ಅಕೊ...ಪಾರ್ಥನೆಂದು ಕರೆದಿರಲ್ಲಾ ಆ ಬಾಲಕನ ಕಡೆ ನೋಡಿ ಸ್ವಾಮಿ... ಅವನ ಹಿಮ್ಮಡಿಗಳನ್ನು ನೋಡಿ...ನೆಲದಮೇಲೇ ಇವೆ! ನ್ಯಾಯವಾಗಿ ಅವು ಮೇಲೆದ್ದಿರಬೇಕಲ್ಲವೆ?

ದ್ರೋಣ—(ಚಕಿತನಾಗಿ, ಅರ್ಜುನನ ಕಡೆ ತಾನೂ ನೋಡಿ, ವ್ಯಗ್ರನಾಗಿ) ಹಾ? ಹೌದೇ...ನೀನಂದದ್ದು ಸರಿ...ಅವು ಮೇಲೆದ್ದಿರಬೇಕೆಂದು ನೀನೇಕೆನ್ನುವಿ?

ಏಕಲವ್ಯ—ಏಕೇ? ಶರೀರದ ಭಾರವು ಒಮ್ಮೆ ಒಂದು, ಒಮ್ಮೆ ಇನ್ನೊಂದು ಕಾಲ ಮೇಲಿರಬೇಕಲ್ಲವೆ? ಹೀಗೆ? ಹೀಗೆ...(ಚಲನೆಯಿಂದ ತೋರುವನು)

ದ್ರೋಣ—(ಅವನ ಚಲನೆಗೆ ಮೆಚ್ಚಿ-ಅಚ್ಚರಿಯಿಂದ) ಎಲಾ ಮಗೂ?! ಧನುರ್ವಿದ್ಯೆಯಲ್ಲಿ ಒಳ್ಳೆಯ ಅಸ್ತಿವಾರವೇ ಇದೆಯಲ್ಲ ಈಗಾಗಲೇ...? ನೀ ಮೊದಲು ಇಲ್ಲಿಗೆ ಬಂದಾಗ ಅಂದಂತೆ ಇನ್ನೂ ಎಳೆಯನಲ್ಲ ನೀನು!... ನಿಮ್ಮ ತಂದೆ ನಿನಗೆ ಈ ವಿದ್ಯೆ ಕಲಿಸುವ ಮೊದಲೇ ತೀರಿಕೊಂಡಿದ್ದರೆ...ಇಷ್ಟೆಲ್ಲ ...ನಿಜವಾಗಿ...ನಿನ್ನಷ್ಟಕ್ಕೆ ನೀನೇ ಕಲಿಯಲಿಲ್ಲ...ಅಲ್ಲವೇ?

ಏಕಲವ್ಯ—ಇಲ್ಲ ಸ್ವಾಮಿ...ಹೇಗಾದೀತು? ಇಲ್ಲಿಗೆ ಬಂದಾಗ ಇದೊಂದೂ ನನಗೆ ತಿಳಿದೇ ಇರಲಿಲ್ಲ...ಆ ಬಾಲಕ ಪಾರ್ಥನಿಗೆ ನೀವು ಹೇಳಿಕೊಡುತ್ತಿದ್ದಾಗ ನಾ ಬಂದೆ...ಹಿಂದೆ ನಿಂತೆ...ನಿಮ್ಮ ಮಾತು ಕೇಳಿಕೊಂಡೆ ...ನನಗೆ ತಿಳಿಯದೆಯೇ ಆ ಚಲನೆ ಅಭ್ಯಾಸ ಮಾಡಿದೆ...ಇದು...ನಾನೇನಾದರೂ ಅಪಚಾರ ಮಾಡಿದ್ದೇನೆಯೆ ಸ್ವಾಮಿ...?

ದ್ರೋಣ—(ತನ್ನಲ್ಲಿ) ಇಲ್ಲಿ ಕಲಿತನೇ?...ಇಲ್ಲಿ?...ಆಶ್ಚರ್ಯ? (ಪ್ರಕಾಶ) ಅಪಚಾರವೇ?...ಏನಿಲ್ಲ...ಏನೂ ಇಲ್ಲ...ಸರ್ವಥಾ ಇಲ್ಲ.

ಏಕಲವ್ಯ—(ಪುನಃ ತೋರಿಸುತ್ತ) ನೋಡಿ ಸ್ವಾಮಿ...ಅವನೆಷ್ಟು ಹಿಂದೆ ಬಗ್ಗಬೇಕೋ ಅಷ್ಟು ಬಗ್ಗಲಾರ!...ಇನ್ನೇನೆಂದರೆ?...ಸರಿ! ಇಲ್ಲಿ ನೀವೆಂದಿಗೂ ಮುಗಿಸಲಾರಿರಿ ಸ್ವಾಮಿ! ಆ ಬಾಲಕ ಪಾರ್ಥ...ಅವನೆಂದೂ ಮೇಲಾಗಲಾರ...

ಅರ್ಜುನ—(ಕೇಳಿದ್ದನ್ನು ಪುನರುಚ್ಚರಿಸುತ್ತ) "ಬಾಲಕ ಪಾರ್ಥ ಮೇಲಾಗಲಾರ!"— (ಸುತ್ತ ನೋಡಿ) ಯಾರದನ್ನಂದದ್ದು?

ಏಕಲವ್ಯ—ಏಕೆ?...ನಾನಂದೆ!

ಅರ್ಜುನ—(ಏಕಲವ್ಯನೆಡೆಗೆ ಬಂದು) ನಿನಗೆ ಹೇಗೆ ಗೊತ್ತು? ನಾನು ಮೇಲಾಗಲಾರೆನೆಂದು?

ಏಕಲವ್ಯ—(ಎಳೆಸಗುತ್ತ) ಸುಲಭವಾಗಿ...ನಿಮ್ಮ ಗುರು ಹೇಳಿದ್ದರು ...ಧನುರ್ವಿದ್ಯೆಯಲ್ಲಿ ಮೇಲಾಗಲೂ ಏಕಾಗ್ರಚಿತ್ತವಿರಬೇಕೆಂದು...ನೀನು... **ಏ ಕಾ ಗ್ರ ಚಿ ತ್ತ** ನಾಗಿರಲಿಲ್ಲ!

ಅರ್ಜುನ—ನಾನು ಏಕಾಗ್ರಚಿತ್ತನಾಗಿರಲಿಲ್ಲವೆಂದು **ನಿನಗೆ** ಹೇಗೆ ಗೊತ್ತು?

ಏಕಲವ್ಯ—(ಕಿರುನಗೆಯಿಂದ) ಅದೂ ಸುಲಭವಾಗಿಯೇ. ನಿಮ್ಮ ಗುರು ಹೇಳಿದರು...ಏಕಾಗ್ರಚಿತ್ತನಾದರೆ...ನಿಜವಾಗಿ...ನಿನ್ನ ಬಾಣದ ಸುಯ್ಲಿನ ಹೊರತು ಮತ್ತೊಂದು ಕೇಳಿಸದೆಂದು...ನೀನು ಏಕಾಗ್ರಚಿತ್ತನಾಗಿದ್ದರೆ...ನನ್ನ ಮಾತುಗಳು ನಿನಗೆ ಕೇಳಿಸುತ್ತಿದ್ದಿಲ್ಲ? (ಅರ್ಜುನ ಅಳುಕುವನು) ಅಲ್ಲದೆ ನಿನ್ನ ಗುರು ಧನುರ್ವಿದ್ಯೆಯ ಅಸ್ತಿವಾರವಾಗಿ ಹೇಳಿದ್ದನ್ನೆಲ್ಲ ಮರೆತಿದ್ದೀಯೆ. ಏಕೆ? ನಿನ್ನ ಹಿಮ್ಮಡಿಗಳು ಮೇಲೆದ್ದಿರಬೇಕಾಗಿತ್ತು...ನೆಲಕ್ಕೇ ಘಟ್ಟಿಸಿದ್ದೆ... ಅಲ್ಲದೆ, ನೀನು ಹಿಂದಕ್ಕೆ ವಾಲಿದಾಗ ನಿನ್ನ ಶರೀರದ ಭಾರ ಇನ್ನೂ ನಿನ್ನ ಮುಂಗಾಲಿನ ಮೇಲೇ ಇತ್ತು...ಇನ್ನೂ ಏನೆಂದರೆ...

ಅರ್ಜುನ—(ಬೇಸರ ಕೋಪಗಳಿಂದ) ಸಾ ಕು ! ತ ಡೆ !...... (ದ್ರೋಣರಿಗೆ) ಯಾರಿವನು ಗುರುಗಳೆ? ಏನು ಬೇಕಂತೆ ಇಲ್ಲಿ ಇವನಿಗೆ?

ದ್ರೋಣ—(ನೀರಸವಾಗಿ) ಅವನನ್ನೇ ಕೇಳು...ಪಾರ್ಥ... (ಹಿಂದೆ ಸರಿದು ಬೇರೆಡೆ ತಿರುಗಿ ನಿಲ್ಲುವರು)

ಅರ್ಜುನ—(ಕಟುವಾಗಿ) ಯಾರು ನೀನು?....ಏನು ಬೇಕಿಲ್ಲಿ ನಿನಗೆ?

ಏಕಲವ್ಯ—ನಾನೊಬ್ಬ ನಿಷಾದ....ನನ್ನನ್ನು ಜಗತ್ತಿನಲ್ಲೆಲ್ಲ ಅಪ್ರತಿಮ ಧನುರ್ಧರನಾಗಿ ಮಾಡಬೇಕೆಂದು ನಿನ್ನ ಗುರುವನ್ನು ಬೇಡಲು ನಾನಿಲ್ಲಿಗೆ ಬಂದೆ.

ಅರ್ಜುನ—(ಅಪಹಾಸ್ಯ ಮಾಡುತ್ತ ಅಣಕಿಸುತ್ತ) ಜಗತ್ತಿನ ಅಪ್ರತಿಮ ಧನುರ್ಧರನಾಗಬೇಕಂತೆ! ಹ ಹ ಹ! ಸರಿ ಹೋಯಿತು! ಅಲ್ಲಯ್ಯಾ... ಆರ್ಯನಿಗೇ ಅಷ್ಟೊಂದು ಅಸಾಧ್ಯವಾಗಿರುವಾಗ ಒಬ್ಬ ನಿಷಾದನಿಗೆ ಅದು ಸಾಧ್ಯವೆಂದು ಹೇಗಾದರೂ ಯೋಚಿಸಿದೆ?

ಏಕಲವ್ಯ—(ಅರ್ಜುನನ ನಗುವಿನಿಂದ ದುಗುಡಗೊಳ್ಳದೆ) ನಾನು

ನಿಷಾದನಾದರೆ ತಾನೇ ಏನು ? ನೀನು ಆರ್ಯನಾದ್ದರಿಂದ ನಿನ್ನ ಬಿಲ್ವಿದ್ಯೆಗೆ ಬಂದ ಭಾಗ್ಯ ಯಾವುದು ? ಈ ಹುಚ್ಚು ನಗೆ ಬಿಟ್ಟು ನಿಮ್ಮ ಗುರು ಹೇಳಿದ್ದನ್ನೆಲ್ಲ ಎಚ್ಚರದಿಂದ ನೆನಪಿಗೆ ತಂದರೆ ನಿನಗೆ ಗೊತ್ತಾಗುತ್ತದೆ... ಜಾತಿ ಯಾವದೆ ಇರಲಿ, ಅಪ್ರತಿಮ ಧನುರ್ಧರನಾಗಬೇಕಾದರೆ ಅಗತ್ಯ ವಾಗಿರುವುದು ಐದೇ ಅಂಶಗಳು... (ಬೆರಳೆಣಿಸುತ್ತ) ಅಸ್ತ್ರವಿದ್ಯೆಯ ಅಸ್ತಿ ವಾರದ ಪೂರ್ಣ ಅರಿವು, ಏಕಾಗ್ರಚಿತ್ತನಾಗುವ ಸಂಕಲ್ಪಶಕ್ತಿ, ತನ್ನ ಗುರುವಿನಲ್ಲಿ ಗಾಢವಾದ ಭಕ್ತಿಯುತವಾದ ಪ್ರೇಮ, ಶಿಷ್ಯನಿಗೆ ಕಲಿಸಬೇಕೆಂಬ ಗುರುವಿನ ಮನಃಪೂರ್ವಕ ಸಂಕಲ್ಪ, ಕೊನೆಯದಾಗಿ ಸತತವಾದ ಅಭ್ಯಾಸ. ಈಗ ನೋಡು ...ನನಗೆ ಧನುರ್ವಿದ್ಯೆಯ ಅಸ್ತಿವಾರ ರೂಢಿಸಿದೆ, ಏಕಾಗ್ರಚಿತ್ತತೆ ಹೊಂದಬಲ್ಲೆ, ಅವರನ್ನು ಭಕ್ತಿಯಿಂದ ಪೂಜಿಸುತ್ತೇನೆ, ರಾತ್ರೆ ಹಗಲೂ ಬಿಡದೆ ಅಭ್ಯಾಸ ಮಾಡುತ್ತೇನೆ...ನನಗೆ ಬೇಕಾದುದು, ಅವರು ಕಲಿಸಬೇಕೆಂಬ ಮನಃಸಂಕಲ್ಪ... ಅಷ್ಟೆ...ಅದನ್ನು ನಾನು ಸಂಪಾದಿಸಿದೆನೆಂದರೆ...ನನಗೆ ಖಂಡಿತ ಗೊತ್ತು... ಜಗತ್ತಿನಲ್ಲೆಲ್ಲ ಅದ್ವಿತೀಯ ಧನುರ್ಧರ ನಾನಾಗುವೆನೆಂದು...ನಿಷಾದನಿಗಿಂತ ಆರ್ಯನಿಗೇ ಧನುರ್ವಿದ್ಯೆ ಕಲಿಯಲು ಅವಕಾಶಗಳು ಹೆಚ್ಚು ಎಂದು ಇವರು ಇನ್ನೂ ನನಗೆ ಹೇಳಿಲ್ಲವಲ್ಲ ? ಧನುರ್ವಿದ್ಯಾಪಾರಂಗತನಾಗಲು ಆರ್ಯನಾಗಿರ ಬೇಕಾದುದೂ ಆರನೆಯದೊಂದು ಅಂಶ, ಎಂದು ನೀನು ಯೋಚಿಸುವುದಾದರೆ ...ಅದು ನಿನಗೆ ನಿನ್ನ ಜಾತಿಯಲ್ಲಿರುವ ಮೂರ್ಖ, ಒಣಜಂಭದ ಗುರುತು. ನನ್ನ ಜಾತಿಗೆ ನಿನಗಿರುವ ಕೀಳುಭಾವನೆಯ ಚಿಹ್ನೆ...ಅಷ್ಟೆ.

ಅರ್ಜುನ—(ಚುಚ್ಚಿದಂತಾಗಿ) ನನ್ನ ಜಾತಿಯಲ್ಲಿನ ಒಣಜಂಭವೆಂದೆ ಯೆಲ್ಲಾ...ಏನು ಹಾಗೆಂದರೆ ?

ಏಕಲವ್ಯ—(ಶಾಂತನಾಗಿ ಮಂದಸ್ಮಿತನಾಗಿ) ಏನೇ ? ಈಗ ನಾನು ಹೇಳಿದ್ದಷ್ಟೇ! ನಿನ್ನ ಜಾತಿಯಲ್ಲಿ ನಿನಗಿರುವುದು ಮೂರ್ಖ ಜಂಭವೆಂದು ನಾನೆಂದುದಕ್ಕಿದೇ ಅರ್ಥ...ನಿನ್ನ ಜಾತಿಯ ನಿಜವಾದ ಘನತೆ ಯಾವುದೆಂದರಿ ಯದೇ ನಿನ್ನ ಜಾತಿ ದೊಡ್ಡದೆನ್ನುತ್ತಿದ್ದೀಯಲ್ಲಾಯೆಂದು.

ಅರ್ಜುನ—(ವ್ಯಂಗ್ಯವಾಗಿ) ನನಗೆ ಗೊತ್ತಿಲ್ಲವೆಂದು ನಿನಗೆ ಹೇಗೆ ಗೊತ್ತೊ ?

ಏಕಲವ್ಯ—ಅದಿನ್ನೂ ಸುಲಭ...ಇರಲಿ ಹಾಗಾದರೆ...ಆರ್ಯನಾಗಿರುವುದರಲ್ಲಿ ನಿಷಾದನಾಗಿರುವದಕ್ಕಿಂತ ಹೆಮ್ಮೆಪಡಬಹುದಾದದ್ದು ನಿಜವಾಗಿ ಏನೋ ಇದೆಯೆಂದು ನಿನಗೆ ಗೊತ್ತಿದ್ದರೆ...ಹೇಳು ನೋಡೋಣ? ನಾನು ನಿಷಾದ... ನೀನು ಆರ್ಯ...ಆದರೆ ನಿನ್ನಷ್ಟೇ ನಾನೂ ಬಲಿಷ್ಠ...ನೀನೆಂತು ಉತ್ತಮ ಧನುರ್ಧರನಾಗಬಲ್ಲೆಯೋ ಅಂತೆಯೇ ನಾನೂ ಆಗಬಲ್ಲೆ...ನಿನ್ನ ಗುರು ಸಂಕಲ್ಪಿಸಿದರೆ...ನನ್ನ ರಮ್ಯ ಕಾಡಿನಲ್ಲಿ ನನಗೆ ಬೇಕಾದ್ದೆಲ್ಲ ಇದೆ...ಈ ದೊಡ್ಡ ನಗರದಲ್ಲಿ ನಿನಗೆ ಬೇಕಾದುದಿದ್ದಂತೆ...ಹೇಳು ಹಾಗಾದರೆ...ನೀನು ಆರ್ಯನಾದುದರಿಂದ ನನಗಿಂತ ಯಾವ ವಿಷಯದಲ್ಲಿ...ಹೇಗೆ...ಹೆಚ್ಚು? ಹೇಳು ನೋಡೋಣ!

ಅರ್ಜುನ—(ಏನೂ ತೋಚದೆ ಕೊನೆಗೆ ಕಟುವಾಗಿ ಜರೆಯುತ್ತ) ಓ! ನೀನಿದೆಲ್ಲ ಇರಬಹುದು...ಗುರುಜಿ ನಿನ್ನನ್ನು ಶಿಷ್ಯನಾಗಿ ಅಂಗೀಕರಿಸಿದರೆ, ನನ್ನಂತೆ ನೀನೂ ಒಳ್ಳೆಯ ಧನುರ್ಧರನೂ ಆಗಬಹುದು...ಆದರೂ...ನೀನೇನೇ ಅನ್ನು ...ಆರ್ಯನೆಂದರೆ ಆರ್ಯನೇ...ನಿಷಾದನೆಂದರೆ ಕೀಳುಜನ್ಮ ನಿಷಾದನೇ?

ಏಕಲವ್ಯ—(ನಕ್ಕು) ನಗೆ ಬರುತ್ತಿದೆ ನನಗೆ, ನೀನನ್ನುವುದನ್ನು ಕೇಳಿ!

ಅರ್ಜುನ—(ಕ್ರುದ್ಧನಾಗಿ) ಇದರಲ್ಲಿ ನಗುವಂಥದೇನಿದೆಯೊ?

ಏಕಲವ್ಯ—ಏನೇ? 'ಆರ್ಯ ಎಂದರೆ ಆರ್ಯ, ನಿಷಾದ ಎಂದರೆ ನಿಷಾದ' ಎಂತೆ. ಎಂದರೆ ತಾನು ನಿಷಾದನಲ್ಲ ಎಂಬುದಕ್ಕೆ ಆರ್ಯ ಎಂದು ಕೊಳ್ಳುವನು ಹೆಮ್ಮೆ ಪಡಬೇಕು! ಅಲ್ಲವೆ? ಹಾಗೆಂದರೆ ಈ ಜಗತ್ತಿನಲ್ಲಿ ನಿಷಾದರೇ ಇಲ್ಲದಿದ್ದಿದ್ದರೆ, ಪಾಪ, ನೀವು ಆರ್ಯರು...ಆರ್ಯರಾಗಿ ಹುಟ್ಟಿದುದರಲ್ಲಿ ಹೆಮ್ಮೆಪಟ್ಟುಕೊಳ್ಳುವಂಥದೇ ಇರುತ್ತಿರಲಿಲ್ಲ, ಅಲ್ಲವೇ?

ಅರ್ಜುನ—ಓ, ನೀನು ತಿಳಿದುಕೊಂಡುದು ಹಾಗೊ?

ಏಕಲವ್ಯ—ಸರ್ವಥಾ ಅಲ್ಲ...ಆರ್ಯನಾಗಿರುವಲ್ಲಿ ಹೆಮ್ಮೆಪಡುವಂಥದ್ದೇನಿದೆಯೆಂದು **ನನಗೆ** ತಿಳಿದಿದೆ. **ನಿನಗೆ** ತಿಳಿದಿಲ್ಲ, ಅಷ್ಟೆ...ಇಷ್ಟವಿದ್ದರೆ... ಹೇಳುವೆ ಕೇಳು...ತಿಳಿದುಕೋ–ನಾನಿರುವ ಕಾಡಿನಲ್ಲಿ ತೋಳಗಳು, ಕ್ರೂರ ಮೃಗಗಳು, ನಿಸ್ಸಹಾಯಕ ಜಿಂಕೆ ಹುಲ್ಲೆಗಳನ್ನು ಹಿಂಸಿಸುತ್ತವೆ, ಕೊಲ್ಲುತ್ತವೆ. ಈ ಬಡ ಜಿಂಕೆ ಹುಲ್ಲೆಗಳನ್ನು ಕಾಪಾಡಬೇಕಾದರೆ ನನಗಿರುವುದೊಂದೇ ಮಾರ್ಗ, ಆ ತೋಳಗಳನ್ನು ಕೊಲ್ಲುವುದು!...ನನ್ನ ಕಾಡಿನ ಪಕ್ಕದ ಕಾಡಿನಲ್ಲಿ ಆರ್ಯ

ಋಷಿಯೊಬ್ಬನಿದ್ದಾನೆ; ಆತ ತೋಳಗಳನ್ನು ಕೊಲ್ಲದೆ ತಪೋಬಲದಿಂದಲೆ ಆ ಬಡಜಿಂಕೆ ಹುಲ್ಲೆಗಳನ್ನು ರಕ್ಷಿಸುತ್ತಾನೆ. ನನ್ನ ಮಾರ್ಗದಲ್ಲಿ, ತೋಳಗಳಿಗೆ ಸಾವು ಇದೆ, ಆದರೆ, ಅಷ್ಟಕ್ಕೇ ಮುಗಿಯುವುದಿಲ್ಲ...ಅವುಗಳ ಮರಣದಿಂದ ಹಿಂದುಳಿಯುವ ನಿರಪರಾಧಿ ಮರಿ ತೋಳಗಳಿಗೆ ತಂದೆ ತಾಯಿಯರಿಲ್ಲದೆ ನರಳಬೇಕಾಗುವುದು. ತಂದೆಯ ನಷ್ಟದಿಂದಾಗುವ ಸಂಕಟ ನನಗೆ ಗೊತ್ತು, ತಾಯಿಯ ಪ್ರೇಮದಿಂದಾಗುವ ಆನಂದವೂ ನನಗೆ ಗೊತ್ತು...ಇಂಥ ನನಗೆ ಆ ಮರಿತೋಳಗಳನ್ನು ಕಂಡರೆ ಅಯ್ಯೋ ಎನಿಸುತ್ತದೆ. ಈಗ ಗೊತ್ತಾಯಿತೇ ನಿನಗೆ...ಆರ್ಯನಿಗಿರುವ ಶಕ್ತಿ ಎಂತೆಂದು...ನಿಷಾದ ಮಾಡುವ ಕಾರ್ಯವನ್ನೇ ಆರ್ಯನೂ ಮಾಡುತ್ತಾನೆ...ಆದರೆ ಅವನಿಂದ ಯಾರಿಗೂ ತೊಂದರೆ...ಇಲ್ಲ, ಅಪಾಯವಿಲ್ಲ...**ಇದು** ಹೆಮ್ಮೆ ಬಡುವಂಥದು ನಿಜವಾಗಿ! ಇದೇ, ಆರ್ಯನಿಗೂ ನಿಷಾದನಿಗೂ ಇರುವ ಅಂತರ. ಆರ್ಯನಾಗಿ ಹುಟ್ಟಿದ ಮಾತ್ರಕ್ಕೇ ನಿನ್ನ ಜಾತಿ ಉತ್ತಮವೆಂದು ನೀನು ಮೂರ್ಖನಂತೆ ಕೊಚ್ಚುವುದಾದರೆ ಅದು ನಿನ್ನ ಅಲ್ಪತನದ ಅಪಕ್ವ ಬುದ್ಧಿಯ ಗುರುತು!

ಅರ್ಜುನ—(ರೊಚ್ಚಿಗೆದ್ದು) ನನ್ನ ಅಲ್ಪತನ? ಅಪಕ್ವ ಬುದ್ಧಿ?

ಏಕಲವ್ಯ—(ಹುಸಿನಗುತ್ತ) ಅಲ್ಲದೆ ಏನು? ಇನ್ನೊಬ್ಬರಿಗೆ ಕಲ್ಯಾಣ ಮಾಡುವ ತನ್ನ ಶಕ್ತಿಗಿಂತ ತನ್ನ ಜಾತಿಗಾಗಿಯೆ ತಾನು ಶ್ರೇಷ್ಠ ಎಂದು ಜಂಬ ಕೊಚ್ಚುವುದು ಅಪಕ್ವ ಬುದ್ಧಿಯ ಅಲ್ಪತನದ ಖಚಿತ ಚಿಹ್ನೆ, ಎಂದು ನನ್ನ ತಾಯಿ ಹೇಳುತ್ತಾಳೆ...ಏಕೆ? ನೀ ಹೇಳಿದ ರೀತಿ ನೋಡು..."ನಿಷಾದನೆಂದರೆ ಕೀಳು ಜನ್ಮ ನಿಷಾದನಷ್ಟೆ" ಎಂದು? ಅದೇ ತೋರಿಸುತ್ತದೆ, ನೀನು ಅಪಕ್ವನಷ್ಟೇ ಅಲ್ಲ...ಪುಕ್ಕಲೂ ಎಂದು. ನಮ್ಮ ತಾಯಿ ಹೇಳುತ್ತಾಳೆ...ಇತರರ ಜಾತಿಯ ತಿರಸ್ಕಾರವು...ಹೇಡಿತನದಿಂದ ಹುಟ್ಟುವುದೆಂದು!

ಅರ್ಜುನ—(ಹುಚ್ಚೆದ್ದ ಕೋಪದಿಂದ ಬುಸುಗುಟ್ಟುತ್ತ) ಅಲ್ಪ ಬುದ್ಧಿ? ...ಹೇಡಿತನ? ಹೆದರಿಕೆ? ಎಲೊ! ಕೇಳಿಲ್ಲಿ...ನನಗೆ ಅಲ್ಪ ಬುದ್ಧಿ ಇಲ್ಲ... ನಾನು ಹೇಡಿ ಅಲ್ಲ...ಹೆದರಿಕೆಯೂ ನನಗಿಲ್ಲ.

ಏಕಲವ್ಯ—(ಒತ್ತಿ ಹೇಳುತ್ತ) ಅಲ್ಲ? ಇಲ್ಲ! ನಿಜವಾಗಿ ಇವೆಲ್ಲ

ಒಂದೊಂದೂ ನೀನಾಗಿರುವೆ...ನಿನಗೆ ನಿಜವಾಗಿ ಹೆದರಿಕೆಯಿಲ್ಲದಿದ್ದಲ್ಲಿ, ನನ್ನ ಕಂಡರೆ ಭಯವೇಕೆ ನಿನಗೆ ?

ಅರ್ಜುನ—(ಅಪಹಾಸ್ಯದಿಂದ) ನಿನ್ನ ಕಂಡರೆ ಭಯ ?...ನನಗೆ ? ಎಂದಿಗೂ ಇಲ್ಲ !

ಏಕಲವ್ಯ—ಇಲ್ಲವೊ ? ಸರಿ...ಹಾಗಾದರೆ ನನ್ನ ಕಂಡರೆ ನಿನಗೆ ಪ್ರಿಯವೋ ? ನಿಜವಾಗಿ ?

ಅರ್ಜುನ—(ಅಸಹ್ಯದಿಂದ) ಪ್ರಿಯವೇ...? ನಿನ್ನ ಕಂಡರೆ ?—ನನಗೆ ನಿನ್ನ ಕಂಡರಾಗದು...ನಿನ್ನ ಕಂಡರೆ ನನಗೆ...ದ್ವೇಷ !

ಏಕಲವ್ಯ—(ಗೆದ್ದ ನಗುವಿನಿಂದ) ನೋಡಿದೆಯಾ...ನಿನಗೆ ನಾನು ಸೇರೆನು...ನನಗಾಗಿ ಹೆದರಿರುವೆ ಎಂಬುದಕ್ಕೆ ಅದೇ ಸಾಕ್ಷಿ...ನಮ್ಮ ತಾಯಿ ಹೇಳುತ್ತಾಳೆ...ದ್ವೇಷವೆನ್ನುವುದು ಭಯದ ಅಪರಾವತಾರವೆಂದು (ಮೃದುವಾಗಿ, ಸಮಾಧಾನಗೊಳಿಸುವಂತೆ) ಈಗ ನೋಡು...ನಿನ್ನ ಕಂಡರೆ ನನಗೇನೂ ಸೇರದಿರದು...ನಿಜವಾಗಿ ನಿನ್ನ ಕಂಡರೆ ಪ್ರೀತಿಯೇ ನನಗೆ...ಅಷ್ಟೇ ಅಲ್ಲ ನಿನ್ನ ನೋಡಿದರೆ...ಅಯ್ಯೋ ಎನಿಸುತ್ತದೆ.

ಅರ್ಜುನ—ನಿನಗೆ ? ನನ್ನ ನೋಡಿದರೆ ? ಅಯ್ಯೋ ಎನಿಸುತ್ತದೆಯೆ ? ಏಕೊ ?

ಏಕಲವ್ಯ—ಏಕೆನ್ನುವೆಯಾ? ಪಾಪ ! ಇಷ್ಟು ಕಾಲ ಇಂಥಾ ಘನತೆವೆತ್ತ ಈ ದ್ರೋಣಾಚಾರ್ಯರನ್ನು ಗುರುವಾಗಿ ಹೊಂದಿದ್ದು...ನೀನು ಇನ್ನೂ ಹೀಗೇ ಇರುವೆಯೆಲ್ಲಾ, ಎಂದು.

ಅರ್ಜುನ—(ಸಿಡುಕಿನ ಮಾತೆಸೆಯುತ್ತ) ನಾನು ಇನ್ನೂ ಹೇಗಿದ್ದೇನೆ, ಏನು, ಎಂತು, ಇದೆಲ್ಲ ನಿನಗೇಕೆ ?... ಇದೆಲ್ಲ ಏನು ಗುರುಗಳೆ ? (ಗಟ್ಟಿಯಾಗಿ) ಗುರುಗಳೇ, ಏನು ಇದೆಲ್ಲ ?

ದ್ರೋಣ—(ಗಂಭೀರ ಮೊಗ, ಅಚಲ ಧ್ವನಿ) ಯಾವುದೆಲ್ಲ ಏನು... ಪಾರ್ಥ ?

ಅರ್ಜುನ—(ಮೈಮರೆತು ನಾಲಗೆ ಹರಿಯಬಿಟ್ಟು ರೇಗಿ ತೊದಲುತ್ತ)

ಇದು, ಎಲ್ಲ...ಅಂದರೆ...ಈ ಹುಚ್ಚುಚ್ಚು ಮಾತು......ಈ...ಈ...ಕಾಡು ಮನುಷ್ಯನದು. ಈ... (ಹುಚ್ಚಿದ್ದು ಕಿರಿಚುತ್ತ) ಯಾರವನು ಗುರುಗಳೆ? ಏನು ಬೇಕಂತೆ ಅವನಿಗಿಲ್ಲಿ?

ಏಕಲವ್ಯ—ಅವರನ್ನೇಕೆ ಕೇಳುತ್ತೀಯೆ? ನಾನೇ ಹೇಳಿದ್ದೇನಲ್ಲ ನಿನಗೆ? ನಾನಾರೆಂದು...ನನಗಿಲ್ಲೇನು ಬೇಕೆಂದು?

ಅರ್ಜುನ—ಅದು ಸರಿಯೇ...ಆದರೆ...ಅವರಿಗೆ ಹೇಳಿದ್ದೀಯೇನು?

ಏಕಲವ್ಯ—ಬಿಚ್ಚುಬಯಲಾಗಿ, ನಿಚ್ಚಳವಾಗಿ ಹೇಳಿದ್ದೇನೆ...ಅಷ್ಟೇ ಅಲ್ಲ ...ನನ್ನನ್ನು ಶಿಷ್ಯನಾಗಿ ಸ್ವೀಕರಿಸಬೇಕೆಂದೂ ಅವರನ್ನು ಬೇಡಿದ್ದೇನೆ.

ಅರ್ಜುನ—(ಹಂಗಿಸುತ್ತ) ನಮ್ಮ ಗುರುಗಳು...ನಿನ್ನನ್ನು...ನಿಷಾದ ನನ್ನು...ಅರಸುಕುವರರಾದ ನಮ್ಮ ಸಹಪಾಠಿಯಾಗಿ?...ಹುಚ್ಚು! ನಿನಗೆ ಹುಚ್ಚಿರಬೇಕು. ಹಾಗೆ ಹಾರೈಸಲು...ಹುಚ್ಚು...! ಹಾಗೇ ಉದ್ಧಟ ನೀನು...ನಿನಗಿನ್ನೂ ಗೊತ್ತಿಲ್ಲ ನಮ್ಮ ಗುರು...ಎಷ್ಟು ಘನವಂತರು...ಎಷ್ಟು ದೊಡ್ಡವರು, ಎಂದು! ಕೇಳಿಲ್ಲಿ...ನೂರಾರು ಜನ ರಾಜಕುಮಾರರು... ಬೇಕಾದಷ್ಟು ವಜ್ರ ವೈಢೂರ್ಯ, ಐಶ್ವರ್ಯ, ಕೊಡಬಲ್ಲವರು...ಅಂಥವರಿಗೇ ವಿದ್ಯೆ ಕಲಿಸಲು ನಿರಾಕರಿಸಿದ್ದಾರೆ!? ಅಂಥವರು, ಹರಕು ಚಿಂದಿಯ ಬಡ ನಿಷಾದ, ಪೋರ...ಏನೂ ಗುರುದಕ್ಷಿಣೆ ಕೊಡಲಾರದ ಬಡವ...ಇಂಥ ನಿನ್ನನ್ನು ಶಿಷ್ಯನಾಗಿ ಅಂಗೀಕರಿಸುವರೇನು? ನಿನಗೆಲ್ಲೋ ಮಂಕು ಹಿಡಿದಿದೆ, ಮಂಕು!

ಏಕಲವ್ಯ—ನನಗಲ್ಲ ಮಂಕು ಹಿಡಿದಿರುವುದು...**ನಿನಗೆ!** ನಿನಗೇ ಗೊತ್ತಿಲ್ಲ...ನಿನ್ನ ಗುರುವಿನಾ ಘನತೆ ಗಾಂಭೀರ್ಯಗಳು! ಏಕೆ? ತಮಗೆ ಬೇಕಾದ ದಕ್ಷಿಣೆಯನ್ನು ಸಂಪಾದಿಸಿ ಒಪ್ಪಿಸುವಂತೆ ಶಿಷ್ಯನನ್ನೇ ಕಲಿಸಲಾರರೇ? (ದ್ರೋಣರಿಗೆ) ಕಲಿಸಲಾರಿರಾ?...ಸುಲಭವಾಗಿ ನೀವು ಕಲಿಸಬಹುದು... ಅಲ್ಲವೇ ಸ್ವಾಮಿ! (ಉಕ್ಕಿಬಂದ ಕಿರುನಗೆಯನ್ನು ತಡೆದು ದ್ರೋಣರು ಬೇರೆಡೆ ಮುಖ ತಿರುಗಿಸುವರು) ನಾನು (ಅರ್ಜುನನಿಗೆ) ಚಿಂದಿಯುಟ್ಟಿರಬಹುದು, ಬಡವನೂ ಆಗಿರಬಹುದು...ಮಾನ್ಯ ಆಚಾರ್ಯರು ನನ್ನನ್ನು ಶಿಷ್ಯನಾಗಿ ಅಂಗೀಕರಿಸಿದ್ದಾದರೆ......ಅಸಹಾಯಿಗಳನ್ನು ಸಾವು ನೋವಿನ ಭಯದಿಂದ ರಕ್ಷಿಸುವ ಸತ್ಕಾರ್ಯಕ್ಕೆ ನನ್ನನ್ನು ಅನುವುಗೊಳಿಸಿದ್ದಕ್ಕಾಗಿ, ನನ್ನ ಜೀವಮಾನವೆಲ್ಲ

ದುರ್ಬಲ ಪ್ರಾಣಿಗಳನ್ನು ಕಾಪಾಡಿದ್ದರಿಂದ ಆರ್ಜಿಸಿದ ತಪಸ್ಸಿನ ಬಹುಭಾಗವೆಲ್ಲ ಅವರಿಗೇ ಸೇರುತ್ತದೆ. ಬ್ರಾಹ್ಮಣರಾದ್ದರಿಂದ ಅವರು, ಧನಕನಕಾಭರಣಾದಿಗಳಿಗಿಂತ ತಪಸ್ಸೇ ಹೆಚ್ಚೆಂದು ಆದರದಿಂದ ಸ್ವೀಕರಿಸುವರು. (ದ್ರೋಣರಿಗೆ) ಅಲ್ಲವೇ ಸ್ವಾಮಿ...?

ದ್ರೋಣ—(ಅರ್ಜುನನಿಗೆ) ಇವನನ್ನು ಗುರುತಿಸಿದೆಯಾ ಪಾರ್ಥ?

ಅರ್ಜುನ—ಗುರುತಿಸುವುದೆ?......ಇವನನ್ನು? ಏಕೆ ಗುರೂಜೀ... ಅವನನ್ನು ನಾನೆಂದೂ ಹಿಂದೆ ಕಂಡೇ ಇಲ್ಲವಲ್ಲ?

ದ್ರೋಣ—ಕಂಡಿಲ್ಲದೆ ಇರಬಹುದೂ! ಆದರೆ ನಾವಿಬ್ಬರೂ ಸ್ವಲ್ಪ ಹೊತ್ತಿಗೆ ಮುಂಚೆ ಇವನನ್ನೇ ಕುರಿತಾಡಿದುದು...(ಮುಂದೆ ಬಂದು) ಪಾರ್ಥ! ಇವನೇ ಆ ಉತ್ತಮ ಕರ್ಮಾರ್ಥಿಯೆಂದದ್ದು ನಾವು...ಈ ಬಾಲಕ ಜಗತ್ತಿನಲ್ಲೇ ಅಪ್ರತಿಮ ಧನುರ್ಧರನಾಗಬೇಕೆಂದು ಆಶಿಸುತ್ತಾನೆ ಏಕೆ ಗೊತ್ತೆ? ಅವನ ಗುರಿ ಒಂದೇ ... ಜಗತ್ತಿನೆಲ್ಲ ಕಾಡುಗಳಲ್ಲಿನ ಜಿಂಕೆ, ಹುಲ್ಲೆ ಮತ್ತಿತರ ನಿರಪರಾಧಿ ಪ್ರಾಣಿಗಳು ನಿರ್ಬಾಧಿಕವಾಗಿ ಸಾವು ನೋವುಗಳ ಭಯವಿಲ್ಲದೆ ಜೀವಿಸುವಂತೆ ಕಾಡಿನ ಕ್ರೂರ ಮೃಗಗಳನ್ನೆಲ್ಲ ಕೊಂದಿಡಬೇಕೆಂದು...

ಅರ್ಜುನ—(ಮುನಿದು) ಇದೆಲ್ಲ ಸರಿ...ಗುರುಜೀ...ಉತ್ತಮ ಬಯಕೆಗಳು, ಅರಣ್ಯಗಳು......ಹುಲ್ಲೆಮರಿಗಳು......ಕಾರ್ಮಿಗಳು, ನಿಷಾದರು ಉತ್ತಮಾರ್ಥಗಳು...ತೋಳಗಳು ಇವೆಲ್ಲ ನಿಮ್ಮ ತಲೆಯಲ್ಲಿ ತುಂಬಿಕೊಂಡು... ನೀವು ಕೊಟ್ಟ ವಚನವನ್ನೇ ಮರೆತು ನಿಂತಿದ್ದೀರಲ್ಲ...?

ದ್ರೋಣ—(ಆ ಕ್ಷಣ ಬೆಚ್ಚಿ) ಕೊಟ್ಟ ವಚನ...ಏನದು ಕೊಟ್ಟ ವಚನ?

ಅರ್ಜುನ—ನೋಡಿದಿರಾ...ಮಾತುಕೊಟ್ಟು ಮತ್ತೆ ಮರೆತಿದ್ದೀರಿ... ಈ ಒರಟು ನಿಷಾದ ಬಾಲನ ಯೋಚನೆ ನಿಮ್ಮ ತಲೆಯಲ್ಲಿ ತುಂಬಿ, ಅವನ ಹದ್ದುಮೀರಿದ ಹೆಬ್ಬಯಕೆಗಳಿಗೆ ಓಗೊಟ್ಟು, ನನ್ನನ್ನು ಜಗತ್ತಿನಲ್ಲೆಲ್ಲ ಅಪ್ರತಿಮ, ಅದ್ವಿತೀಯ ಧನುರ್ಧರನಾಗಿಸುವೆನೆಂದು ಕೊಟ್ಟ ಮಾತು ಮರೆತೇ ಬಿಟ್ಟಿರಿ...! ಅವನನ್ನು ನೀವೀಗ ಶಿಷ್ಯನಾಗಿ ಸ್ವೀಕರಿಸಿದರೆ...ಅವನು...? ನೀವಿನ್ನೂ... ತಿಳಿಯಲಿಲ್ಲವೇ.. ಗುರುಜಿ...? ಅವನು?

ದ್ರೋಣ—ಇದೇನು, ಪಾರ್ಥ? ನಿನಗೆ ನಾನು ಕೊಟ್ಟ ವಚನ...ತನ್ನ ಘನೋದ್ದೇಶವನ್ನು ಪೂರ್ತಿಗೊಳಿಸುವಂತೆ ಅವನಿಗೆ ನಾನು ಸಹಾಯಮಾಡು ವುದಕ್ಕೆ ನಿನಗೆ ಕೊಟ್ಟ ವಚನ ಅಡ್ಡಬರುವುದಿಲ್ಲವಲ್ಲ?

ಅರ್ಜುನ—ಅದು ಹೇಗಾದೀತು ಗುರುಗಳೆ? ಅವನಿಗೆ ಸಹಾಯವೂ ಮಾಡಿ ನಿಮ್ಮ ಮಾತೂ ಉಳಿಸಿಕೊಳ್ಳುವುದು?...ನಿಮ್ಮನ್ನು ಗುರುವಾಗಿ ಹೊಂದಿದ ಅವನು ನನ್ನಷ್ಟೇ, ಕನಿಷ್ಠ ನನ್ನ ಮಟ್ಟದ ಹತ್ತಿರದಷ್ಟು ಉತ್ತಮ ಧನುರ್ಧರನಾಗಬಹುದಲ್ಲ...?

ಏಕಲವ್ಯ—(ನಗುತ್ತ, ಅಣಕಿಸುತ್ತ) ತನ್ನಷ್ಟೇ!......ಕನಿಷ್ಠ ತನ್ನ ಮಟ್ಟದ ಹತ್ತಿರದಷ್ಟು!..."ಬಹುದಲ್ಲ" ಅಂತೆ! ನನ್ನಮಟ್ಟಿನ ಬಹುದು–ಗಿಹುದುಗಳನ್ನು ತೂಗಿ, ತರ್ಕಿಸಿ, ಲೆಕ್ಕ ಹಾಕುವ ನಿನ್ನ ಔದಾರ್ಯಕ್ಕಾಗಿ ಋಣಿಯಾಗಿದ್ದೇನೆ!...ಹಹ. ಕೇಳು! ಈ ಮಾನ್ಯ ಆಚಾರ್ಯರೇನಾದರೂ ನನ್ನನ್ನು ಶಿಷ್ಯನಾಗಿ ಅಂಗೀಕರಿಸಿದ್ದೇ ಆದರೆ......ಬಹುದು–ಗಿಹುದುಗಳ ಹೊಯ್ದಾಟವೇ ಇಲ್ಲ. ಖಂಡಿತ 'ಬಲ್ಲೆ'...ಬಹುದಲ್ಲ...ಖಂಡಿತ ಅಪ್ರತಿಮ ಧನುರ್ಧರನಾಗಬಲ್ಲೆ, ಜಗದೇಕವೀರ ಧನುರ್ಧರನಾಗಿಯೇ ಆಗುವೆ.

ಅರ್ಜುನ—(ರೇಗಿ ಮೈ ಮರೆತು) ಕೇಳಿ, ಗುರುಗಳೆ, ಕೇಳಿ...ಅವನ ತಲೆಹರಟೆ...(ಕೆಲವೊಂದು ಕ್ಷಣ ಮುನಿದು ಬಾಯಿಗೆ ಬಂದ ಏನೇನೋ ಹೇಳ ಬೇಕೆಂದಿದ್ದುದನ್ನು ತಡೆದು, ಆದರೂ ಎಚ್ಚರಿಸುವಂತೆ) ಗುರುಗಳೆ! ನಾನೀಗ ತಾನೇ ಒಂದು ಮಾತನ್ನು ಕೇಳಿದೆ...ನನ್ನ ಸಹೋದರರಿಂದ, ದಾಯಾದಿಗಳಿಂದ; ತಾತಾಜಿ ಭೀಷ್ಮರು ಈ ಬಯಲು ಬಿಡುವ ಮೊದಲು ಎಲ್ಲರನ್ನೂ ಎಚ್ಚರಿಸಿದ ರಂತೆ ..ನಿಮಗಿರುವ ಹೊತ್ತಷ್ಟನ್ನೂ ನಮ್ಮ ಕಲಿಕೆಗೆ ಪೂರ್ಣ ಬಳಸಬೇಕೆಂದು... ಬೇಗ ಕಲಿಯಬೇಕೆಂದು...ಈಗಿರುವ ಸ್ಥಿತಿಯಲ್ಲಿ ನಮಗೆಲ್ಲರಿಗೂ ಪಾಠ ಕಲಿಸಲು ನಿಮಗೆ ಹೊತ್ತೇ ಸಾಕಾಗುತ್ತಿಲ್ಲ—ಇನ್ನೊಬ್ಬ ಶಿಷ್ಯನನ್ನೂ...ತೆಗೆದುಕೊಂಡರೆ...?

ಏಕಲವ್ಯ—(ಅರ್ಜುನನನ್ನು ಅಂಗಲಾಚುತ್ತ) ಹೆದರಿಕೆ ಬೇಡ! ನಿಮ್ಮ ಗುರುವಿನ ಅಮೂಲ್ಯವಾದ ಕಾಲದಲ್ಲಿ ಒಂದು ಘಳಿಗೆಯನ್ನೂ ನಾನು ಸೂರೆ ಗೊಳ್ಳೆ...ಅವರು ಅಪ್ಪಣೆಯಿತ್ತರೆ...ನಾನಿಲ್ಲಿ ದಿನಾಲು ಈ ಹೊತ್ತಿಗೆ ಬರಲು ಒಪ್ಪಿದರೆ...ನಿಮ್ಮ ಹೊತ್ತೇನೂ ಕಳೆಯದೆ...ನಾನಿನ್ನೇನನ್ನೂ ಮಾಡದೆ

...ಗುರುವು ನಿಮಗೆ ಪಾಠ ಹೇಳುವುದನ್ನು ಮಾತ್ರ ಕೇಳುತ್ತ...ಗಮನಿಸುತ್ತ... ನನಗೆ ಬೇಕಾದಷ್ಟು ಮಾತ್ರ ಕಲಿತು...ಅ...

ಅರ್ಜುನ—(ಥಟ್ಟನೆ ಅವನ ಬಾಯಿ ಮೇಲೆ ಹೊಡೆದಂತೆ) ನನಗಿಂತ ದೊಡ್ಡ ಧನುರ್ಧಾರಿಯಾಗುವೆಯಲ್ಲವೆ? ಆಗದು?

ಏಕಲವ್ಯ—(ಉಕ್ಕಿ ಬಂದ ಕಣ್ಣೀರನ್ನು ಕಷ್ಟದಿಂದ ತಡೆದು) ನೋಡು! ಧನುರ್ವಿದ್ಯೆಯನ್ನು ಕಲಿಯಲು ಇಷ್ಟೊಂದು ಬೇಡುತ್ತಿರುವುದು ಏಕೆ?... ನನಗಾಗಿ ಅಲ್ಲ...ಆ ಯೋಚನೆಯೇ ನನಗಿಲ್ಲ...ನನಗಿದ್ದ ಯೋಚನೆ ತೋಳಗಳಿಂದ ಹತವಾಗುತ್ತಿರುವ ನೂರಾರು ಅಸಹಾಯ ಜಿಂಕೆ ಹುಲ್ಲೆಗಳನ್ನು ಕುರಿತು... ಹುಲ್ಲೆಗಳೆಂದರೆ ನಿನಗೆ ಪ್ರೀತಿಯಿಲ್ಲವೆ...ಬಹುಶಃ ನಗರದಲ್ಲಿ ವಾಸಿಸುವ ನೀನು ಅದೇನೆಂದು ಕಾಣೆಯೇನೊ! ನನ್ನೊಡನೆ ನನ್ನ ಕಾಡಿಗೊಮ್ಮೆ ಬಂದು ನೋಡು ...ಆ ಸಾಧುಪ್ರಾಣಿಗಳು ಕೊರಗಿ ಮೊರೆಯಿಡುತ್ತ ಅಸಹಾಯಕ ದೃಷ್ಟಿಯಿಂದ ನಿನ್ನನ್ನು ಮೊರೆ ಇಡುವ ಆ ಕಣ್ಣುಗಳನ್ನು ನೋಡು...ಆಗ ನನ್ನ ಈ ಜೀವನ ವ್ರತದಲ್ಲಿ ನೀನೂ ಭಾಗಿಯಾಗಬೇಕು, ಎಂದೆನ್ನಿಸೀತು...ನಿಮ್ಮನ್ನೆಲ್ಲ, ಅಭ್ಯಾಸ ಮಾಡುತ್ತಿರುವಾಗ ಸುಮ್ಮನೆ ನಾನು ನಿಂತು ನೋಡಿದರೆ, ಏನು ಮಹಾ ಪ್ರಮಾದವಾದೀತು?

ಅರ್ಜುನ—ಪ್ರಮಾದವೆ? ಯಾವುದಾಗಬಾರದೆಂದಿರುವೆನೋ ಅದೇ ಆಗುತ್ತದೆ. ಏಕೆ? ಗುರುಗಳು ನಮಗೆ ಕಲಿಸುತ್ತಿರುವುದನ್ನು ಕೇಳಿ...ನಮ್ಮ ಅಭ್ಯಾಸ ನೋಡಿ...ನಮಗಿಂತ ಹೆಚ್ಚಾಗಿ ನೀನು ಕಲಿಯುವುದು ಖಂಡಿತ ಎಂದೆನ್ನಿಸುತ್ತಿದೆ ನನಗೆ? ಅದೇಕೆ? ನೀನಿಲ್ಲಿಗೆ ಮೆಲ್ಲನೆ ಸದ್ದಿಲ್ಲದೆ ಬಂದು ಕಳ್ಳತನದಲ್ಲಿ ಅಸ್ತ್ರವಿದ್ಯೆಯ ಅಷ್ಟಿವಾರವನ್ನೆಲ್ಲ ಕಲಿತುಬಿಟ್ಟೆಯಲ್ಲ? ಅದು ನೋಡಿದರೆ ನಿನ್ನನ್ನು ಪುನಃ ಇಲ್ಲಿಗೆ ಬರಗೊಡಿಸಿದರೆ ಏನು ಪ್ರಮಾದವಾಗು ವುದೆಂದು ತಿಳಿಯುತ್ತದೆ. ಇದು ನನ್ನನ್ನೆಚ್ಚರಿಸಿದೆ! (ದ್ರೋಣರಿಗೆ) ಗುರುಗಳೆ! ತಾತಾಜಿಯವರಿಗೆ ನೀವು ಕೊಟ್ಟ ಮಾತನ್ನೆಲ್ಲ ಮರೆತುಬಿಟ್ಟಿರುವಂತೆ ಕಾಣುತ್ತದೆ: ನಮಗೆ ಪೂರ್ತಿ ಕಲಿಸಿದ್ದಾಗುವವರೆಗೆ ಇನ್ನಾರನ್ನೂ ಶಿಷ್ಯರನ್ನಾಗಿ ತೆಗೆದುಕೊಳ್ಳು ವುದಿಲ್ಲವೆಂದುದನ್ನು! ಅನೇಕಾನೇಕ ಅರಸು ಮಕ್ಕಳನ್ನು ಈ ಕಾರಣದಿಂದ ಹಿಂದಕ್ಕೆ ಕಳುಹಿಸಿದ ನೀವು...ಈ ನಿಷಾದ ಬಾಲಕನನ್ನು ನಿಮ್ಮ ಶಿಷ್ಯನನ್ನಾಗಿ

ಈಗ ಸ್ವೀಕರಿಸಿದರೆ...ತಾತಾಜಿಯವರಿಗೆ, ಅದು ಒಪ್ಪಿಗೆಯಾಗದಿರಬಹುದು... ನಾನವರಿಗೆ ತಿಳಿಸಿದರೆ...ಅಲ್ಲ...ಅವರಿಗೇನಾದರೂ...ಇದು...ಕಿವಿಗೆ ಬಿದ್ದರೆ...

ದ್ರೋಣ—ಹೌದು ಪಾರ್ಥ! ಅವರಿಗಿದು ಸೇರುವುದಿಲ್ಲ...ಗೊತ್ತು ನನಗೆ... (ಏಕಲವ್ಯನೆಡೆಗೆ ಬಂದು ಮಮತೆಯಿಂದ ಅವನ ನೇವರಿಸಿ, ಗಲ್ಲ ಹಿಡಿದೆತ್ತಿ, ಕಣ್ಣಲ್ಲಿ ದೃಷ್ಟಿಯಿಟ್ಟು ತುಂಬು ವ್ಯಸನದಿಂದ) ನೋಡು ಮಗೂ! ಈ ರಾಜ್ಯದಲ್ಲಿ ಒಬ್ಬ ಮಹಾತ್ಮರಿದ್ದಾರೆ...ಹಿರಿಯರು...ರಾಜಮನೆತನದವರು ...ಈ ರಾಜ್ಯಕ್ಕೆಲ್ಲ ಅನಭಿಷಕ್ತ ದೊರೆ. ಅವರಲ್ಲಿ ನನಗೆ ತುಂಬಾ ಪ್ರೀತಿ, ಗೌರವ. ಅವರಿಗೆ ನಾನೊಂದು ವಚನಕೊಟ್ಟಿದ್ದೇನೆ...(ಬಯಲು ಕಡೆ ಕೈಬೀಸಿ) ಈ ಅರಸುಕುವರ ಶಿಷ್ಯರ ಶಿಕ್ಷಣ ಪೂರ್ಣವಾಗುವವರೆಗೆ ನಾನಾರನ್ನೂ ಶಿಷ್ಯನಾಗಿ ಅಂಗೀಕರಿಸೆನೆಂದು...ಈಗ...ನಾನವರಿಗೆ ಕೊಟ್ಟ ಭಾಷೆಯನ್ನು...ತಪ್ಪುವಂತೆ... ನೀನು ಮಾಡೆ...ಹೌದಲ್ಲ?

ಏಕಲವ್ಯ—(ತಡೆಯದೆ ದುಃಖ ಉಕ್ಕಿ ಬಂದು ಬಿಕ್ಕುತ್ತ, ಒಡೆದ ದನಿಯಿಂದ) ನನಗರ್ಥವಾಯಿತು ಸ್ವಾಮಿ...ಮನದಟ್ಟಾಯಿತು. ತಾವು ನಂಬಬೇಕು ನನ್ನನ್ನು...ನಿಮ್ಮಲ್ಲಿ ನನಗೆ ಅನಂತ ಗೌರವ, ಅಮಿತ ಭಕ್ತಿ ಇದೆ... ನೀವು ಇನ್ನೊಬ್ಬ ಹಿರಿಯರನ್ನೇ ಗೌರವಿಸುವಿರಿ, ವಿಶ್ವಾಸವಿಟ್ಟಿರುವಿರಿ. ಆ ಹಿರಿಯರಿಗೆ ಕೊಟ್ಟ ಮಾತನ್ನು ನಿಮ್ಮಿಂದ ತಪ್ಪಿಸಲು ಕಾರಣ ನಾನಾಗಲಾರೆ... ನಿಮ್ಮ ಸತ್ಯಸಂಧತೆಗೆ ಚ್ಯುತಿ ಬರಬಾರದೆನ್ನುವಷ್ಟು ಭಕ್ತಿ ಇದೆ ಸ್ವಾಮಿ, ನಿಮ್ಮಲ್ಲಿ, ನನಗೆ (ನಿಲ್ಲಿಸಿ, ಮತ್ತೆ ಅಳು ಮರುಕೊಳಿಸಲು) ...ಈಗ...ಈ ಜಿಂಕೆಗಳ ಪಾಡು ದುಃಖಕರ ಅಲ್ಲವೇ ಸ್ವಾಮಿ? ಅದು ಸುಖಕರವಾಗುವುದು ಸಾಧ್ಯವಿಲ್ಲವೇನೊ!...ಅಯ್ಯೋ, ನನ್ನ ಬಡಪಾಯಿ ನಿರ್ಭಾಗ್ಯ ಹುಲ್ಲೆಗಳು!... (ತಲೆತಗ್ಗಿಸಿ, ಅರ್ಧಸ್ವಗತ) ಊ? ಇರಲಿ...ಈಗ ನನಗೆ ಬೇಕಾದುದೆಲ್ಲ ಏನು? (ಬೆರಳಲ್ಲೆಣಿಸುತ್ತ) ನನ್ನ ಅಸ್ತ್ರವಾರ ಭದ್ರವಾಗಿದೆಯೆಂದು ಅವರೇ ಹೇಳಿದ್ದಾರೆ...ನಾನು ಏಕಾಗ್ರಚಿತ್ತನಾಗಬಲ್ಲೆ; ಅವರನ್ನು ಕಂಡರೆ ನನಗೆ ತುಂಬ ಪ್ರೀತಿ, ಗೌರವ; ರಾತ್ರಿ ಹಗಲೂ ಸತತಾಭ್ಯಾಸ ನಡೆಸುತ್ತೇನೆ; ಇನ್ನು ನನಗೆ ಒಂದೇಬೇಕು...ನನಗೆ ಕಲಿಸುವುದರಲ್ಲಿ ಅವರ ಪರಮ ಪ್ರೀತಿ...ಅವರ ಮನಃಪೂರ್ವಕ ಒಪ್ಪಿಗೆ...ಅದೊಂದೇ ನನಗೆ ಬೇಕಾದುದು (ಯೋಚಿಸಿ ಏನೋ

ಹೊಳೆದಂತೆ) ಅದು ಸರೀ!? ಅವರ ಪ್ರೀತಿ ಬೇಕೆಂದ ಮಾತ್ರಕ್ಕೆ...ಅವರ ಕಣ್ಣೆದುರಿಗೇ ನಾನು ಅಭ್ಯಾಸ ಮಾಡಬೇಕೆಂದೇನೂ ಇಲ್ಲವಲ್ಲ?...ಹೌದೇ... ಖಂಡಿತ ಇರಬೇಕಾಗಿಲ್ಲ...ಅಬ್ಬ!... (ಅಳುವಿನಲ್ಲೂ ನಗುತ್ತ) ಅವರ ಮನದೊಪ್ಪಿಗೆ ಮಾತ್ರವೇ ನನಗೆ ಬೇಕಾದುದು...ಅದನ್ನಷ್ಟು ದಯಪಾಲಿಸಿರೆಂದು ಬೇಡುತ್ತೇನೆ!...ಆದರೆ...ಬಲು ಎಚ್ಚರದಿಂದ ಕೇಳಬೇಕು. (ದ್ರೋಣರಿಗೆ—ಪ್ರಕಾಶ, ನಿದಾನವಾಗಿ) ಕ್ಷಮಿಸಿ ಸ್ವಾಮಿ! ತಮಗೊಂದು ವೇಳೆ ಕಾಲಾವಕಾಶವಿದ್ದಿದ್ದರೆ...ನನ್ನನ್ನು ಕಲಿಸಲು ಸ್ವತಂತ್ರರಿದ್ದರೆ ನಾನು ನಿಷಾದನಾಗಿರುವುದೇನಾದರೂ ಅಡ್ಡಿಯಾಗಬಹುದಿತ್ತೆ, ಸ್ವಾಮಿ!

ದ್ರೋಣ—ಮಗುವೇ! ನನ್ನಲ್ಲಿ ಅಂತಹ ಯಾವ ಭೇದಭಾವವೇ ಇಲ್ಲ ...ಮಕ್ಕಳೆಲ್ಲರೂ ನನಗೆ ಪ್ರಿಯರು, ಅವರ ಜಾತಿ ಯಾವದೇ ಇರಲಿ! ನನಗದರ ಎಣಿಕೆಯೇ ಇಲ್ಲ, ಮಗು!

ಏಕಲವ್ಯ—ಅದು ಗೊತ್ತು ನನಗೆ ಸ್ವಾಮಿ! ಕೇಳಲೇಬಾರದಾಗಿತ್ತು, ಕೇಳಿದೆ, ಕ್ಷಮಿಸಿ. ಮತ್ತೆ, ನನ್ನ ಧನುರ್ವಿದ್ಯಾರ್ಜನೆಯ ಉದ್ದೇಶ್ಯ ನಿಮಗೆ... ಒಪ್ಪಿಗೆಯೆ? ಅದು...ಒಳ್ಳೆಯದೆನ್ನುವಿರಾ?

ದ್ರೋಣ—ನಿನ್ನ ಉದ್ದೇಶ್ಯವೆ? ನನಗದರಲ್ಲಿ ತುಂಬ ಗೌರವವಿದೆ ಮಗು...ನನಗದು ಮೆಚ್ಚು...

ಏಕಲವ್ಯ—(ಉತ್ತೇಜಿತನಾಗಿ, ಆದರೂ ಅಳುಕುತ್ತಳುಕುತ್ತ) ಹಾಗಾದರೆ ಸ್ವಾಮಿ...ಇದೊಂದೇ ಪ್ರಶ್ನೆ ನನ್ನದು...ಉತ್ತರ ದಯಪಾಲಿಸುವಿರಾ...? ಆ ಉತ್ತರವೇ ನನ್ನ ಪರಮಭಾಗ್ಯವಾದೀತು...ಕೇಳಲೆ?

ದ್ರೋಣ—(ಮೃದುವಾಗಿ ನಕ್ಕು) ಕೇಳು ಮಗು! ಕೇಳು...ನಿನಗೆ ಬೇಕಾದ್ದೆಲ್ಲ ಕೇಳಪ್ಪ.

ಏಕಲವ್ಯ—(ಅಳುಕುತ್ತ, ತನ್ನ ಒಂದೊಂದು ಮಾತನ್ನೂ ಮೆಲ್ಲನೆ ಹರಿಯಬಿಡುತ್ತ, ಅಂಜುತ್ತ) ನಿಮಗೆ ಕಾಲಾವಕಾಶ...ಕಾಲಾವಕಾಶವಿದ್ದುದೇ ಆದರೆ, ನನಗೆ ಕಲಿಸಲು ಬಿಡುವಿದ್ದುದೇ ಆದರೆ, ನನಗೆ ಕಲಿಸಲು ಇಷ್ಟವಿದ್ದೀತೇ? ...ಈಷದಪಿ ಇಷ್ಟವೆನಿಸಬಹುದೇ ಸ್ವಾಮಿ...ತಮಗೆ...? ನನಗೆ ಕಲಿಸಲು...?

ದ್ರೋಣ—(ಏಕಲವ್ಯನ ಭುಜವನ್ನು ಆದರದಿಂದ ಹಿಡಿದು ಮೃದುವಾಗಿ ಒತ್ತಿ ವಿಶೇಷ ಪ್ರೀತಿ ಪುರಸ್ಸರವಾಗಿ) ಇಷ್ಟ! ಈಷದಪಿ ಇಷ್ಟ...ಎನ್ನುವೆಯಾ? ಏಕೆ...ಮಗೂ! ಅಲ್ಪವಾದರೂ ಅವಕಾಶವಿದ್ದಿದ್ದೇ ಆದರೆ...ನಿನಗೆ ಕಲಿಸಲು ನನಗೆ ಪರಮ ಸಂತೋಷ...ಪರಮ ಪ್ರೀತಿ! ಪೂರ್ಣ ಒಪ್ಪಿಗೆ!

ಏಕಲವ್ಯ—(ಒಂದು ಕ್ಷಣ ಸಂತೋಷ–ಮರುಗಳಿಗೆಯಲ್ಲೇ ಸಂದೇಹಿಸಿ) ಆದರೆ ಸ್ವಾಮಿ...ಕ್ಷಮಿಸಬೇಕು ಮತ್ತೆ...ನನಗೆ ಕಲಿಸಬೇಕೆಂಬ ನಿಮ್ಮ ಪರಮ ಪ್ರೀತಿಯೆಂದರೆ, ನೀವು ಮುಂಚೆ ಹೇಳಿದ, ಆ, ನಿಮ್ಮ ಕಡೆಯಿಂದ ನನಗೆ ಕಲಿಸಬೇಕೆಂಬ ನಿಮ್ಮ ಮನಃಪೂರ್ಣ ಸಂಕಲ್ಪವೇ ಅದು, ಎನ್ನಬಹುದೆ?

ದ್ರೋಣ—(ಅರ್ಥವಾಗದೆ ಆದರೂ ವಿಶ್ವಾಸದಿಂದ ಎಳೆ ನಗುತ್ತ) ಖಂಡಿತ, ಹಾಗೆನ್ನಬಹುದಪ್ಪ.

ಏಕಲವ್ಯ—(ಪರಮಾನಂದದಿಂದ) ನನಗಷ್ಟು ಸಾಕು ಗುರುವೆ! (ಸಡಗರದಿಂದ) ಇನ್ನು ಮನೆಗೆ ಹಿಂತಿರುಗುವೆ. ಕೂಡಲೆ ಅಭ್ಯಾಸ ಆರಂಭಿಸ ಬೇಕು...ಪ್ರಣಾಮ ಗುರುವೆ! ಅಪ್ಪಣೆ ಕೊಡಿ! (ಪ್ರಣಾಮ ಮಾಡುವನು)

ದ್ರೋಣ—(ಏಕಲವ್ಯನನ್ನೆತ್ತಿ ಮೈದಡವಿ ಅವನ ಸಂಭ್ರಮ ಕಂಡು) ದೇವರು ನಿನಗೆ ಮಂಗಳವನ್ನುಂಟುಮಾಡಲಿ ಮಗು! ಇದೇನು ... ನಿನ್ನಲ್ಲಿ ಹಠಾತ್ತಾಗಿ ಉತ್ಸಾಹ ಉಕ್ಕುತ್ತಿದೆಯಲ್ಲ? ಏನಿದರರ್ಥ?

ಏಕಲವ್ಯ—(ವಿಜೃಂಭಿಸುತ್ತ) ಅದರರ್ಥ, ಗುರುವೆ!...ಇಷ್ಟೇ...ಈ ಕ್ಷಣದಿಂದಲೇ ನನ್ನ ಜಿಂಕೆಗಳೂ ಹುಲ್ಲೆಗಳೂ ಬದುಕಿದವು...ಸುರಕ್ಷಿತವಾದವು... ಈ ಕ್ಷಣದಿಂದಲೆ...ಬದುಕಿದವು...ಸುರಕ್ಷಿತವಾದವು...ನನ್ನ ಹುಲ್ಲೆಮರಿಗಳು... (ಎಡಗಡೆಯಿಂದ ಹೋಗುವನು)

ದ್ರೋಣ—(ಅವನು ಹೋದ ಕಡೆ ನೋಡುತ್ತ) ಹೊರಟೆಯಾ ಮಗು... ಹೋಗಿ ಬಾ...ಶುಭಾಸ್ತೇ ಪಂಥಾನಃ ಸಂತು.

ಏಕಲವ್ಯ—(ಮರಳಿ ಓಡಿ ಬಂದು, ಆನಂದದಿಂದ ಭರವಸೆಯ ದನಿ ಯಿಂದ) ಗುರುವೆ!...ಹೋಗಿಬಾ ಎಂದಿರಲ್ಲ? ಅದು ಎಂದಿಗೂ ಸತ್ಯವೇ! ಹಾಗೆ ಕೇಳಿದರೆ ನಾನು ನಿಮ್ಮಿಂದ ಹೊರಟೇ ಇಲ್ಲ. ನನ್ನ ಹೃದಯಾಂತರಾಳ

ದಲ್ಲಿಯೇ ನೀವು ನೆಲಸಿರುವಾಗ ಹೋಗುವುದೆಲ್ಲಿ? ಮತ್ತೆ ಬರುವುದು ಏಕೆ? ನಮ್ಮಿಬ್ಬರಿಗೂ ಅಗಲಿಕೆಯೆಲ್ಲಿ...ಇನ್ನು? ನಾವಿಬ್ಬರೂ ಎಂದಿಗೂ ಜೊತೆಗೇ! (ಓಡಿ ಹೋಗುವನು)

ದ್ರೋಣ—(ಅವನು ಹೋದೆಡೆಯೇ ನೋಡಿ ಯೋಚಿಸುತ್ತ) ಎಂದಿಗೂ ಜೊತೆಗೇ...ನಾವಿಬ್ಬರೂ? ಏನು ಆ ಮಗುವಿನ ಅರ್ಥ?...ಹೂ...?

ಅರ್ಜುನ—(ಅಭ್ಯಾಸದ ಮಧ್ಯೆ) ಅವನನ್ನು ತೊಲಗಿಸಿದಿರಾ ಗುರುಜೀ?

ದ್ರೋಣ—ಯಾರನ್ನು ತೊಲಗಿಸುವುದು ಪಾರ್ಥ?

ಅರ್ಜುನ—(ಬಾಣ ಬಿಡುತ್ತ, ಮುಂದೆ ಬಗ್ಗುತ್ತ) ಅದೇ ಆ ಒರಟು ಬುದ್ಧಿಯ ಒರಟುತನದ ಕಾಡುಮನುಷ್ಯ...ಆ ಬಾಲಕನನ್ನು?

ದ್ರೋಣ—(ಅವನ ಕಡೆ ತಿರುಗಿ, ಬಾಹುಗಳೆರಡನ್ನೂ ಚಾಚಿ, ಕೋಪದಿಂದ) ಪಾರ್ಥ...ಇದೇಯೇ ನಿನ್ನ ಏಕಾಗ್ರಚಿತ್ತತೆ?

ಅರ್ಜುನ—(ಬಾಣ ಬಿಲ್ಲು ಕೆಳಗಿಳಿಯ ಬಿಟ್ಟು, ತಲೆ ತಗ್ಗಿಸಿ, ಅಪರಾಧಿಯಂತೆ ನಾಚಿ) ಕ್ಷಮಿಸಿ, ಗುರುವೆ; ಏನೋ...ಏಕೋ...ಆ ನಿಷಾದ ಬಾಲಕನನ್ನು ನನ್ನ ಮನಃಪಟಲದಿಂದ ಅಳಿಸಲಾರೆ ಗುರುವೇ!

ದ್ರೋಣ—(ಏಕಲವ್ಯ ಹೋದೆಡೆ ತಿರುಗಿ, ಅವನು ನಿಂತು ಹೋದ ಕಡೆ ಕಣ್ಣು ಕೀಲಿಸಿ ನಿಟ್ಟುಸಿರಿಟ್ಟು ನಿಧಾನವಾಗಿ) ನನಗೂ ಹಾಗೆಯೇ ಪಾರ್ಥ... ನಾನೂ ಅವನ ನೆನಪನ್ನಳಿಸಲಾರೆ...ಅಳಿಸಲಾರೆ!

—ತೆರೆ—

ಅಂಕ ೨

(೧ ನೆಯ ಅಂಕದ ಏಳು ವರ್ಷಗಳ ಅನಂತರ)

[ಕಾಡೊಂದರಲ್ಲಿ ಕಾಲುದಾರಿ. ದ್ರೋಣಾರ್ಜುನರು ಹಾದಿಯಲ್ಲಿ ನಡೆದು ಬರುತ್ತಿದ್ದಾರೆ]

ಅರ್ಜುನ—(ಉತ್ಸಾಹಪೂರಿತನಾಗಿ) ಗುರುಜಿ, ನನ್ನ ಶಿಕ್ಷಣ ಪೂರ್ತಿಯಾಯಿತೆಂದು ನೀವು ಭರವಸೆ ಕೊಟ್ಟಿರಿ ಈಗ...ಜೊತೆಗೆ, ಗುರುಜೀ ನೀವು ನನಗಿತ್ತ ವಚನ ಪಾಲಿಸಿದ್ದೀರೆಂದೂ ತಿಳಿಯಲೆ? ನಾನೀಗ ಜಗತ್ತಿನಲ್ಲೆಲ್ಲ ಅಪ್ರತಿಮ ಧನುರ್ಧಾರಿಯೆಂದೂ ತಿಳಿಯಲೆ?

ದ್ರೋಣ—(ಇಷ್ಟು ಮೈಮರೆತ ಉತ್ಸಾಹ ಸಲ್ಲದೆಂಬಂತೆ) ಊ?... ಊ! ತಿಳಿಯಬಹುದೇನೋ!

ಅರ್ಜುನ—ಹಾಗಾದರೆ, ಈಗ ನಾನು ಈ ಪ್ರಪಂಚದಲ್ಲಿ ಯಾರನ್ನಾದರೂ ಸೋಲಿಸಬಲ್ಲೆ ಅಲ್ಲವೆ? ಎಂದರೆ, ಧನುರ್ವಿದ್ಯೆಯಲ್ಲಿ?

ದ್ರೋಣ—ಪರೀಕ್ಷೆಯಲ್ಲಾದರೆ ಸಾಧ್ಯ, ಪಾರ್ಥ!

ಅರ್ಜುನ—ಪರೀಕ್ಷೆಯಲ್ಲೆ? ಬರೀ ಪರೀಕ್ಷೆಯಲ್ಲಲ್ಲ ಗುರುವೇ... ಗಡಸಾದ ಸಮರದಲ್ಲಿ ಕೂಡ! ಪ್ರಪಂಚದಲ್ಲೇ ಅಪ್ರತಿಮ ಧನುರ್ಧರನಾಗಿರುವಲ್ಲಿ...ಯಾರನ್ನಾದರೂ ಸೋಲಿಸಿ ಸಾಯಿಸಬಲ್ಲೆ ಅಲ್ಲವೆ? ಅಸ್ತ್ರವಿದ್ಯೆಯಲ್ಲಿ?

ದ್ರೋಣ—ಪಾರ್ಥ! ಪರೀಕ್ಷೆಯಲ್ಲಾದರೆ ನಿನ್ನ ಎದುರಾಳಿಯನ್ನು ಗೆಲ್ಲಬಲ್ಲೆ, ಆದರೆ ತೀವ್ರ ಸಮರದಲ್ಲಿ...ಅದನ್ನಷ್ಟು ಖಚಿತವಾಗಿ ಹೇಳಲಾಗುವುದಿಲ್ಲ... (ಮೆಲ್ಲನೆ ಒತ್ತಿ ಹೇಳುತ್ತ) ಪರೀಕ್ಷೆಯಲ್ಲಿ ಕೌಶಲವಿದ್ದರೆ ಸಾಕು... ಅಂಥವನಿಗೆ ಗೆಲುವು ಸಿದ್ಧ...ಆದರೆ ತೀವ್ರಯುದ್ಧಕ್ಕೆ ತೊಡಗಿದಾಗ ಪ್ರಾಣಗಳು ತೃಣಸಮಾನವಾಗಿ, ತತ್ವಗಳೇ ಪಣಗಳಾದಾಗ ಜಯವನ್ನು ನಿರ್ಣಯಿಸಲು ಇತರ ಅಂಶಗಳೂ ಸೇರಿಕೊಳ್ಳುವುವು...ಬರೀ ಯುದ್ಧ ಕೌಶಲಕ್ಕೆ ಬೆಲೆಯೇ ಬಾರದಿರಬಹುದು, ಆಗ!

ಅರ್ಜುನ—(ಆತಂಕದಿಂದ) ಆದರೆ ಗುರುಜೀ ... ತೀವ್ರವಾದ ... ನ್ಯಾಯುವಾದ ಯುದ್ಧದಲ್ಲಿ...ಎರಡೂ ಕಡೆಯು ಸ್ಥಿತಿಗತಿಗಳು ಸಮನಾಗಿರುವಾಗ ...ಕುಶಲತೆಯಲ್ಲಿ ಹೆಚ್ಚಿನ ಪ್ರವೀಣನಾದ ಯೋಧ ಗೆಲ್ಲಲೇಬೇಕು ತಾನೇ... ಎದುರಾಳಿಯನ್ನು ಕೊಲ್ಲಲೇಬೇಕು, ಅಲ್ಲವೇ ?

ದ್ರೋಣ—(ಸಿರ್ಧಾರಧ್ವನಿಯಲ್ಲಿ) ಇಲ್ಲ! ಪಾರ್ಥ...ಇಲ್ಲ! ಈಗಲೇ ನಿನಗಿದು ತಿಳಿದಿರಲಿ...ಉಗ್ರವಾದಲ್ಲಿ ಯಾವ ಸಮರವೂ ನ್ಯಾಯ, ಇಲ್ಲವೆ, ಸಮಬಲ ಸಮರವಾಗದು...ಏಕೆಂದರೆ, ತೀವ್ರ ಕಾಳಗದಲ್ಲಿ...ಉಗ್ರ ಸಮರದಲ್ಲಿ ...ಘೋರಕದನದಲ್ಲಿ...ಒಬ್ಬರ ಜೀವವನ್ನಿನ್ನೊಬ್ಬರು ತೆಗೆಯಬೇಕೆಂದು ಹಾತೊರೆಯುತ್ತಿರುವಾಗ...ಯೋಧರು ಪರಸ್ಪರ ತಮ್ಮನ್ನು ಎದುರಿಸುತ್ತಿರುವ ರಲ್ಲವೆ ಯುದ್ಧ ನಿಮಿತ್ತದ ಧರ್ಮಾಧರ್ಮತೆಯನ್ನೂ ಎದುರಿಸುತ್ತಿರುವರು. ಧರ್ಮವನ್ನು ಬಿಟ್ಟವನಿಗೆ, ಅಧರ್ಮವನ್ನು ಕಟ್ಟಿಕೊಂಡವನಿಗೆ ತಪ್ಪದ ವಿನಾಶ ವನ್ನು, ಮರಣವನ್ನು, ಎಂತಹ ಯುದ್ಧ ಕೌಶಲವೂ ತಪ್ಪಿಸಲಾರದು, ತಿಳಿಯಿತೆ? ಸ್ಪಷ್ಟವಾಯಿತೆ, ಪಾರ್ಥ ?

ಅರ್ಜುನ—(ಕಣ್ಣಿಳಿಸಿ) ತಿಳಿಯಿತು ಗುರುಜೀ...ಸ್ಪಷ್ಟವಾಗಿ.

ದ್ರೋಣ—ಹಾ...ಹಾಗಿದ್ದರೆ ನಿನ್ನ ಅಸ್ತ್ರಕೌಶಲದ ಮದಾಂಧತೆಯಲ್ಲಿ ನಿನ್ನ ಧರ್ಮಾಧರ್ಮ ವಿವೇಚನಾಶಕ್ತಿ ಕಳೆದುಕೊಂಡೀಯೆ...ಜೋಕೆ...... (ಹಠಾತ್ತನೆ ಕಾಡುಮೃಗವೊಂದರ ಆಕ್ರಂದನ ಧ್ವನಿ ಕೇಳುವುದು) ಏನದು ?... ಕೂಗು...?

ಅರ್ಜುನ—ಯಾವುದೋ ಮೃಗದ್ದು...ಕಾಡುಮೃಗದ್ದು...ಈ ಕಡೆಯೇ ಧಾವಿಸುತ್ತಿದೆಯೇನೋ! (ಕ್ಷಣಾರ್ಧದಲ್ಲಿ ಬಿಲ್ಲಿಗೆ ಬಾಣಹೂಡಿ ಕೂಗು ಬಂದೆಡೆಗೆ ನುಗ್ಗಿ ಮರೆಯಾಗಿ ಮತ್ತೆ ಮರಳಿ ಓಡಿಬಂದು ಏದುವ ಧ್ವನಿಯಲ್ಲಿ) ಗುರುಜೀ ...ಅದೊಂದು ದೊಡ್ಡ ತೋಳ...ಜೀವದಾಸೆ ಬಿಟ್ಟು ಓಡುತ್ತಿದೆ, ಯಾರೋ ಅದನ್ನ ಬೆನ್ನಟ್ಟಿ ಬರುತ್ತಿದ್ದಾರೆ...ಅದರ ತಲೆಯ ಹಿಂಭಾಗಕ್ಕೆ ಸರಿಯಾಗಿ ಬಾಣದ ಮೇಲೆ ಬಾಣ ಬಿಡುತ್ತಿದ್ದಾರೆ...ಅಗೋ...ನೋಡಿ ಗುರುಜೀ...ನೋಡಿ ...ತೋಳ!

(ತೋಳವೊಂದು ನಡುಬಯಲಲ್ಲಿ ಎಡದಿಂದ ಬಲಕ್ಕೆ ಪ್ರಾಣದಾಸೆ ತೊರೆದು

ಓಡುತ್ತದೆ; ಅದರ ತಲೆಗೇ ಗುರಿಯಿಟ್ಟ ಬಾಣಗಳ ಸರ ಅದರ ಹಿಂದೆ. ನೋಡಿ ಇಬ್ಬರಿಗೂ ಮಾತು ಮರೆಯುವಷ್ಟು ಅಚ್ಚರಿ) 031188

ದ್ರೋಣ—(ಮೆಚ್ಚಿಕೆಯಿಂದ ಮೈಮರೆತು) ನೋಡು ಪಾರ್ಥ, ನೋಡು ಚೆನ್ನಾಗಿ ... ಯಾವನೋ ಈ ಅದ್ಭುತ ಬಿಲ್ಗಾರ? ... ಯಾವನಾದರಾಗಲಿ ... ಈ ತೋಳ ಕಂಡರವನಿಗೆಷ್ಟು ರೋಷ...? ಒಂದೇ ಬಾಣದಿಂದ ಅದನ್ನು ಕೆಡವಬಲ್ಲ ... ಆದರೆ ಅವನಾ ಕ್ರೋಧ ... ಅದರ ನೋವನ್ನು ಹೆಚ್ಚಿಸಲು ನೆತ್ತಿಯನ್ನು ಗರಗಸದಿಂದ ಕೊಯ್ಯುವಂತೆ ಬಾಣಬಿಡುತ್ತಿದ್ದಾನೆ ... ಮೂವತ್ತು ಹೆಜ್ಜೆ ಅದಿಡುವುದರೊಳಗಾಗಿ ನೂರು ಬಾಣ ಬಿಟ್ಟಿದ್ದಾನೆ ನೆತ್ತಿಗೇ ... ಅಬ್ಬ! ಆಶ್ಚರ್ಯ...ಭಲೆ! ಪರಮಾಶ್ಚರ್ಯ ಪಾರ್ಥ...ಈ ಬಿಲ್ಗಾರತನದ ಕೈಚಳಕ. **ನನ್ನ ಊಹೆಗೂ ಮೀರಿದ್ದು** ... ಅಬ್ಬ ... ಅಸಾಧ್ಯವಿದು **ನನಗೇ!**

ಅರ್ಜುನ—ಗುರುಗಳ ಊಹಾಪ್ರಪಂಚಕ್ಕೂ ಅತಿ ದೂರವೇ ಈ ಚಳಕ? ಹಾಗಾದರೆ, ಗುರುಜೀ, ಧನುರ್ವಿದ್ಯೆಯಲ್ಲಿ ಈತ **ನನಗಿಂತ** ಅಷ್ಟೊಂದು ಹಿಂದಿಲ್ಲದಿರಬಹುದು!

ದ್ರೋಣ—(ಮೃದುವಾಗಿ ಹಂಗಿಸುತ್ತ) "ಇಲ್ಲದಿರಬಹುದು? ತನಗಿಂತ ಅಷ್ಟೊಂದು ಹಿಂದೆ ಇಲ್ಲದಿರಬಹುದು? ಧನುರ್ವಿದ್ಯೆಯಲ್ಲಿ?" ಹಃ! ಮಮಕಾರದ ಮದದಲ್ಲಿ ಮುಳುಗಿರುವ ಮರುಳೆ! ನಿನಗಿಂತ ಅಷ್ಟೊಂದು ಹಿಂದಿಲ್ಲ! ಅಷ್ಟೇ ಅಲ್ಲ, ಅವನು ಯಾರೇ ಆಗಿರಲಿ, ನಿನ್ನನ್ನೂ, ನನ್ನನ್ನೂ, ಆ ಧನುರ್ವಿದ್ಯೆಯಲ್ಲಿ ಮೀರಿಸಿ ಮುಂದೆ ಹೋಗಿದ್ದಾನೆ! ಈ ಜನ್ಮದಲ್ಲಿ ನಾವಿಬ್ಬರೂ ಎಷ್ಟು ಹೆಣಗಿದರೂ ಇವನಿಗೆ ಯೋಜನಗಳಷ್ಟು ಹತ್ತಿರ ಕೂಡ ಬರಲಾರೆವು. ಅಷ್ಟೊಂದು ಮುಂದುವರಿದಿದ್ದಾನೆ. ಯಾರೊ?... ಈ ಅಜ್ಞಾತ ಬಿಲ್ಗಾರ? ಛೆ! ಮಾನವನಂತೂ ಅಲ್ಲ!

ಅರ್ಜುನ—(ತನ್ನಲ್ಲಿ) ನನ್ನನ್ನು ಮೀರಿಸಿ...? ಸ್ವಯಂ ಗುರುವನ್ನೂ ಮೀರಿಸಿ ಮುಂದುವರಿದಿದ್ದಾನೆ! ...... ಇವನು ಯಾರಾದರಾಗಿರಲಿ ...... ನೋಡಲೇಬೇಕಿವನನ್ನು!

ದ್ರೋಣ—(ರಭಸದಿಂದ ಅವನನ್ನು ಹಿಂದೆಳೆದು) ಹಾಂ–ಹಿಂದೆ, ಹಿಂದೆ

ಸರಿ! ಮೈಮರೆತು ಮೂರ್ಖನಾಗಬೇಡ! ಇಂತಹ ಆವೇಶದಲ್ಲಿದ್ದಾಗ ಆ ಬಿಲ್ಗಾರನನ್ನು ಎದುರಿಸುವುದೆಂದರೆ ಮರಣವನ್ನು ಅಪ್ಪಿದಂತೆಯೆ... (ಬಾಣ ಸರಗಳ ಕಡೆ ತೋರಿಸಿ) ಕೇಳಲ್ಲಿ! ಬಾಣಗಳ ಸುಯಿಲು ಹೆಚ್ಚುತ್ತಿದೆ...ಇನ್ನೇನು ...ಬಂದಾನು! ಸಮೀಪದಲ್ಲಿದಾನೆ...ಹೀಗೆ ಬಾ...ಅವ ಹೀಗೆ ಹಾದುಹೋಗು ವುದನ್ನು ಈ ಮರದ ಮರೆಯಿಂದ ಗಮನಿಸುವ, ಬಾ.

(ಇಬ್ಬರೂ ಮರವೊಂದರ ಮರೆಯಲ್ಲಿ ನಿಲ್ಲುವರು)

(ಏಕಲವ್ಯನ ಪ್ರವೇಶ – ಬಾಣಬಿಡುತ್ತಲೇ – ಮಧ್ಯ ನಿಂತು
ಕಿಡಿಗಣ್ಣಿನಿಂದ ತೋಳ ಓಡಿದ ಕಡೆ ನೋಡುತ್ತ)

ಏಕಲವ್ಯ—ಕೂಗು! ಕಿರಿಚು! ಪ್ರಾಣ ಹೊರಬೀಳುವಂತೆ ಕಿರಿಚು! ಪಾಪಿಮೃಗವೇ...ಗಂಟಲು ಬಿರಿಯುವಷ್ಟು ಕಿರಿಚು...ನಿನ್ನಿ ಕಿರಿಚು ನೀನು ನಿನ್ನೆ ಇಡೀ ಮಧ್ಯಾಹ್ನ ಹಿಂಸಿಸಿದ ಹುಲ್ಲೆಯ ನರಳಾಟವನ್ನು ನಿನ್ನ ನೆನಪಿಗೆ ತಂದರೆ ಆಗ ನಿನ್ನ ಯಮಯಾತನೆ ತಕ್ಕಷ್ಟು, ಸಾಕಷ್ಟು, ಆಯಿತೆನ್ನುತ್ತೇನೆ ಸಾಕು... ಆಯಿತು. (ಬಾಣ ಹೂಡಿ ಗುರಿಯಿಡುತ್ತ) ಇನ್ನು ನಿನ್ನನ್ನು ಕೊಲ್ಲಬಹುದು, ನಿನ್ನ ನೋವನ್ನು ಕೊನೆಗಾಣಿಸುವಂತೆ! (ಸ್ವಲ್ಪ ತಡೆದು, ಮೃದುವಾಗಿ) ಅಯ್ಯೋ...ನಿನ್ನ ಚಿಕ್ಕ ಮರಿಗಳೇನಾದರೂ ನಿನಗಾಗಿ ಕಾಯುತ್ತಿವೆಯೇನೋ ಗುಹೆಯಲ್ಲಿ?...(ಗಡಸಾಗಿ) ಉಹು!...ನೀನು ನನ್ನ ಜಿಂಕೆಮರಿಗಳನ್ನು ಹಿಂಸಿಸಿ, ನೋಯಿಸಿ, ಕೊಲ್ಲಬಾರದಾಗಿತ್ತು...ಇದೊ ಹಿಡಿ!...ಅ ಹ ಹ! ಒಂದು, ಇನ್ನು ಒಂದೇ ಒಂದುಳಿದೆ, ತೋಳ! ಒಂದೇ ಒಂದು...ಅದನ್ನು ಕೊಂದ ಮೇಲೆ ಈ ನನ್ನ ಕಾಡು ನಿರ್ಬಾಧಿಕ...ಅಲ್ಲಿಂದ ನೆರೆಯ ಕಾಡಿಗೆ...ಅದರ ಪಕ್ಕದ ಕಾಡಿಗೆ ಅದರ ಪಕ್ಕದ್ದಕ್ಕೆ...ಕೊನೆಗೆ ಈ ಭೂಮಂಡಲದಲ್ಲಿನ ಎಲ್ಲ ಕಾಡುಗಳಲ್ಲಿನ ಎಲ್ಲ ಕ್ರೂರ ತೋಳಗಳೂ ನಿರ್ನಾಮವಾಗುವ ತನಕ...ಇಡೀ ಲೋಕದಲ್ಲಿ ತೋಳಗಳೇ ಇಲ್ಲದಂತಾಗುವ ತನಕ— (ದ್ರೋಣಾರ್ಜುನರು ಮರದ ಮರೆಯಿಂದ ಹೊರ ಬಿಟ್ಟು ತರಗೆಲೆಗಳ ಮೇಲೆ ಹೆಜ್ಜೆ ಇಟ್ಟಾಗ ಆದ ಮರಮರ ಶಬ್ದ ಕೇಳಿ, ಥಟ್ಟನೆ ಶಬ್ದ ಬಂದೆಡೆಗೆ ಬಾಣ ಹೂಡಿ...ಸ್ಪಷ್ಟವಾಗಿ ಕಾಣಿಸಿದಾಗ, ಸಂಯಮಿಸಿ) ಓ! ನೀವೇ?...ಆ ಇನ್ನೊಂದು ತೋಳ ಬಂತೇನೋ ಎನ್ನಿಸಿತ್ತು....ನನಗೆ.... ಒಂದು ಕ್ಷಣ. (ಇಬ್ಬರನ್ನೂ ಸಮೀಪಿಸಿ ದ್ರೋಣರಿಗೆ ನಮಿಸಿ) ಪ್ರಣಾಮಗಳು

ತಮಗೆ...ಸ್ವಾಮಿ! (ಅರ್ಜುನನ ಕಡೆ ಎಳೆನಗೆಯಿಂದ) ವಂದನೆ....ತಮಗೆ! ಕ್ಷಮಿಸಬೇಕು...ತಮ್ಮ ಇರವನ್ನು ಗಮನಿಸದಿದ್ದದ್ದಕ್ಕೆ!...ಆ ತೋಳವನ್ನು ಕೊಲ್ಲಲೇಬೇಕೆಂಬ ಆತುರದಲ್ಲಿ ಉಳಿದೆಲ್ಲದಕ್ಕೂ ಕಿವುಡಾಗಿದ್ದೆ...ಕುರುಡಾಗಿದ್ದೆ ನಾನು. ಆ ಮೃಗವನ್ನು ಸುಲಭವಾಗೇ ಕೊಲ್ಲಬಹುದಿತ್ತು. ಆದರದು ನಿನ್ನೆ ಮಧ್ಯಾಹ್ನವೆಲ್ಲ ಜಿಂಕೆಮರಿಯೊಂದರ ಬೆನ್ನೇರಿ ಕುಳಿತು ಅದಿನ್ನೂ ಬದುಕಿದ್ದಂತೆಯೇ ಅದರ ಮಿದುಳನ್ನು ಬಗೆದು ತಿನ್ನುತ್ತಿತ್ತು. ಅದಕ್ಕೆ ಪ್ರತೀಕಾರವಾಗಿ ಆ ತೋಳವೂ ಅದೇ ಚಿತ್ರಹಿಂಸೆ ಅನುಭವಿಸಿ ನರಳಿ ಸಾಯಲಿ, ಎಂದಿತ್ತು ನನಗೆ. (ನಾಚುತ್ತ ನಾಲಗೆ ಬಿಗಿಹಿಡಿದು) ಕ್ಷಮಿಸಬೇಕು ತಾವು...ನನ್ನ ತಾಯಿಯ ಅತಿಥಿಗಳಿಗೆ ಮಾಡಬೇಕಾದ ಸತ್ಕಾರ ಮರೆತು...ಏನೋ ಹರಟೆ ಕೊಚ್ಚುತ್ತಿದ್ದೇನೆ ...ಹೌದು...ಅದು ಎಂದೂ ಹಾಗೆಯೇ...ನನ್ನ ಕಾಡು...ನನ್ನ ಗುರು...ನನ್ನ ತಾಯಿ...ತಂದೆ...ನನ್ನ ಜಿಂಕೆ...ಹುಲ್ಲೆಮರಿಗಳು ಮತ್ತೆ ಕಾಡಿನಲ್ಲಿರುವ ಪಶು ಪಕ್ಷಿಗಳು ... ಇವುಗಳ ಕುರಿತು ಮಾತನಾಡುವಾಗೆಲ್ಲ ... ಹಾಗೆಯೇ ... ಹಾ! ಬರಲು ತುಂಬ ದಾರಿ ನಡೆದು ಬಂದಿರಬೇಕು ನೀವಿಲ್ಲಿಗೆ! ಇನ್ನು ಕೆಲವು ಹೆಜ್ಜೆ ...ಕೆಲವು ಬಾಣಗಳಷ್ಟು ದೂರ...ನಡೆದರೆ...ನಮ್ಮಮ್ಮ ನಮ್ಮ ಮನೆಯಲ್ಲೇ ನಿಮಗೆ ಸ್ವಾಗತ ನೀಡುವಳು...ಮನೆಯಲ್ಲಿ ಕರೆದ ನೊರೆ ಹಾಲು, ನಾವೆ ಬೆಳೆಸಿದ ಗಿಡಗಳ ಹಣ್ಣುಗಳು...ಇವೆಲ್ಲ ಕೊಡುವಳು...ದಯಮಾಡಬೇಕು. (ದ್ರೋಣಾ ರ್ಜುನರು ಅಚ್ಚರಿಯಿಂದ ಅವನನ್ನೇ ನೋಡುತ್ತಿರುವರು. ಮಾತಿಗೆ ಮೊದಲಿ ಡುವ ಅರ್ಜುನ)

ಅರ್ಜುನ—ನಿನ್ನ ಅಸ್ತ್ರವಿದ್ಯೆ...ಆಶ್ಚರ್ಯಕರ!

ಏಕಲವ್ಯ—(ಇದು ಸಾಮಾನ್ಯವೆಂಬಂತೆ) ನನ್ನ ಅಸ್ತ್ರವಿದ್ಯೆ...ಆಶ್ಚರ್ಯ ಕರವೇನು? ನನಗೆ ತಿಳಿಯದು. ಏನೆಂದು ಹೇಳಲೂ ಬಾರದು...ಆದರೆ ಏನನ್ನಾದರೂ ಹೊಡೆದು ಕೆಡವುಬೇಕೆಂದರೆ, ಅದನ್ನೇ ಹೊಡೆದು ಕೆಡವುತ್ತೇನೆ ಎಂಬುದಷ್ಟೇ ನನಗೆ ಗೊತ್ತು.

ಅರ್ಜುನ—ಆದರೆ ನೀನು ಇದೇ ಈಗ ಎಸಗಿದ ಅದ್ಭುತ ಕೈಚಳಕ. ಒಂದರ ಮೇಲೊಂದು ಬಾಣ, ಅದೂ ಆ ತೋಳದ ತಲೆಗೆ ಮಾತ್ರ! ಅವರಲ್ಲೂ ಬಾಣದ ಆ ವೇಗ! ಅಬ್ಬ. ಅದೂ ಏನು ವೇಗ?...ಆ ಮೃಗ

ಮೂವತ್ತು ಹೆಜ್ಜೆ ಇಕ್ಕುವುದರೊಳಗಾಗಿ ನೂರು ಬಾಣ ನಾಟಿದುವದಕ್ಕೆ... ನಿಜವಾಗಿ ಅದು...ಆಶ್ಚರ್ಯಕರ...ಅಲ್ಲವೇ?

ಏಕಲವ್ಯ—(ಹಿಂದಿನಂತೆ) ಓ, ಅದನ್ನೇ ನೀವು ಅದ್ಭುತ ಕೈಚಳಕ ವೆನ್ನುವುದು? ಅದೇನು ಮಹಾ! ಅದರರ್ಧ ಹೊತ್ತಿನಲ್ಲಿ ಅದರೆರಡರಷ್ಟು ಬಾಣಗಳನ್ನು ಬಿಡಬಲ್ಲೆ, ಲೀಲಾಜಾಲವಾಗಿ! ಹುಂ!...ನೀವೂ ಒಳ್ಳೆಯ ಧನುರ್ಧರ ಎಂದು ಕಾಣುತ್ತದೆ. ಆದರೆ ಈ ಕ್ಷುಲ್ಲಕ ಕಾರ್ಯ ಅದ್ಭುತ ಎಂದರೆ ನೀವಿನ್ನೂ ಧನುರ್ವಿದ್ಯೆಯಲ್ಲಿ ಪೂರ್ಣ ಪಾರಂಗತರಲ್ಲ ಎನಿಸುತ್ತದೆ... (ಉಪಚಾರವಾಗಿ) ಓ...ಕ್ಷಮಿಸಿ...ನನ್ನ ಅಸ್ತ್ರವಿದ್ಯೆ ಅನುಪಮವೆಂದು ಒಣ ಜಂಭದಿಂದ ನಿಮ್ಮನ್ನು ನಾನು ಹಾಗೆ ತುಚ್ಛವಾಗಿ ಮಾತನಾಡಲಿಲ್ಲ...ನಾನೆಷ್ಟು ದೊಡ್ಡ ಬಿಲ್ಗಾರನೆಂದುಕೊಂಡಿದ್ದೀರೋ ಅಷ್ಟೇ ನೀವೂ ದೊಡ್ಡವರಾಗಬಹುದಿತ್ತು ...ನನಗೆ ಕಲಿಸಿದಂಥ ಘನತೆವೆತ್ತ ಗುರು ನಿಮಗೂ ಕಲಿಸಿದ್ದರೆ, ಎಂಬುದಕ್ಕಾಗಿ! (ದ್ರೋಣಾರ್ಜುನರು ಪರಸ್ಪರ ಮುಖ ನೋಡುವರು)

ಅರ್ಜುನ—ಯಾರೊ...ಈ ನಿನ್ನ ಗುರು?...ಘನತೆವೆತ್ತ ಎನ್ನುವೆ ಯಲ್ಲ? ಯಾರು ಅವರು?

ಏಕಲವ್ಯ—ಘನತೆವೆತ್ತ? ಓ, ಅಷ್ಟೇ ಅಲ್ಲ, ಅವರ ಘನತೆ ಜಗತ್ತಿ ನಲ್ಲೆಲ್ಲ! ಅಪ್ರತಿಮ ಧನುರ್ಧಾರಿಗಳವರು! ಮತ್ತೆ ನಾನೂ ಹಾಗೆಯೇ ಆಗಲಿದ್ದೇನೆ...ಅವರು ಮನಸ್ಸು ಮಾಡಿದಾಕ್ಷಣ!

ದ್ರೋಣ—(ಸ್ವಗತ) ಇವನ ಗುರು? ಜಗತ್ತಿನಲ್ಲಿಯೇ ಅಪ್ರತಿಮ? ಯಾರಿರಬಹುದು, ಕಾಣೆನಲ್ಲಾ!

ಅರ್ಜುನ—(ಸ್ವಗತ) ಇವನ ಗುರು? ಜಗತ್ತಿನಲ್ಲೆಲ್ಲ ಅಪ್ರತಿಮ ಧನುರ್ಧಾರಿ! ಅಪ್ರತಿಮನೆಂದರೆ ನಾನೇ ಒಬ್ಬ ಎಂದು ತಿಳಿದಿದ್ದೆನಲ್ಲ...ಆ? (ಪ್ರಕಾಶ) ಯಾರೀ ನಿನ್ನ ಗುರು? ಜಗತ್ತಿನಲ್ಲೆಲ್ಲ ಅಪ್ರತಿಮರವರೆಂದೆನ್ನುವಿ ಯಲ್ಲ? ಆ?

ಏಕಲವ್ಯ—ನಿಮಗೇನಾದರೂ ಬಿಲ್ಗಾರ, ಬಿಲ್ವಿದ್ಯೆ...ಈ ಬಗ್ಗೆ ಜ್ಞಾನ ವಿದ್ದುದಾದರೆ ನಿಮಗೇ ಗೊತ್ತಿರಬೇಕಲ್ಲ?—ಈ ಜಗತ್ತಿನಲ್ಲೆಲ್ಲ ಅನುತ್ತರ

ಧನುರ್ಧಾರಿ ಎನ್ನಬೇಕಾದರೆ ಅವರೊಬ್ಬರೇ ಆ ಹೆಸರಿಗೆ ತಕ್ಕವರು...ಎಂದು! ಆ ಅವರು...ಘನತೆವೆತ್ತ ದ್ರೋಣಾಚಾರ್ಯರು...ನನ್ನ ನಚ್ಚಿನ ಗುರುಗಳು!

ಅರ್ಜುನ—ದ್ರೋಣಾಚಾರ್ಯರು...ನಿನ್ನ ಗುರು ?......ನೀನು–ನೀನು ಸುಳ್ಳಾಡುತ್ತಿರುವೆ.

ಏಕಲವ್ಯ—(ಅರ್ಜುನನ ಮುಖಕ್ಕೆ ಥಟ್ಟನೆ ಬಾಣ ಹೂಡಿ ರೋಷದಿಂದ) ಏನೆಂದೆ?...ನೋಡು! ... ನನ್ನ ತಂದೆ ನನಗೆ ಬಿಲ್ವಿದ್ಯೆ ಕಲಿಸುವಷ್ಟು ಕಾಲ ಜೀವಿಸಿರಲಿಲ್ಲ...ಆದರೆ ಒಬ್ಬನನ್ನು ಸುಳ್ಳುಗಾರ ಎಂದು ಕರೆವುದಕ್ಕಿಂತ ಹೆಚ್ಚಿನ ನಿಂದೆ ಇಲ್ಲ, ಎಂಬುದನ್ನು ಕಲಿಸಿ ಮರಣ ಹೊಂದಿದರು... ಇಷ್ಟೇ ಅಲ್ಲ, ಆ ಮಾತು ಅವನ ಬಾಯಿಯಿಂದ ಎರಡನೆಯ ಸಲ ಬಾರದಂತೆ ಮಾಡಲು ಅವನನ್ನು ಕೊಲ್ಲುವ ಹೊರತು ಬೇರೆ ದಾರಿಯಿಲ್ಲ ಎಂದೂ ಕಲಿಸಿದರು...ಆದರೆ ...ತಾಯಿ...ನನ್ನ ತಾಯಿ...ಯಾವಾಗಲೂ ನನ್ನನ್ನು ಹಿಂದೆಳೆದು ಎಚ್ಚರಿಸು ತ್ತಾಳೆ..."ಮಗೂ, ಮಗೂ, ಯಾರನ್ನಾದರೂ ಕೊಲ್ಲುವ ಮುನ್ನ ಅವರಿಗೂ ತಾಯಂದಿರಿರಬಹುದು. ನೀನು ಮಡಿದರೆ ನನಗೆಷ್ಟು ಸಂಕಟವೋ ಅಂತೆಯೇ ಅವರ ತಾಯಂದಿರಿಗೂ ಸಂಕಟ" ಎಂದು. (ಸಿಡಿದು) ಹೇಳು, ನಿನಗೆ ತಾಯಿಯಿದ್ದಾರೇನು?...

ಅರ್ಜುನ—(ಅಪ್ರತಿಭನಾಗಿ) ಉ...ಅ...ಆ...ಇ...ದ್ದಾ...ರೆ.

ಏಕಲವ್ಯ—ಓ!...ನೋಡು...ನಿನ್ನ ತಾಯಿಯನ್ನು ನೋಯಿಸುವ ಇಷ್ಟ ನನಗಿಲ್ಲವೆಂಬುದರ ಲಾಭ ಪಡೆದು ನನ್ನನ್ನು ಸುಳ್ಳುಗಾರ ಎಂದು ಹೇಳುವ ಧೈರ್ಯಮಾಡಬೇಡ...ನೋಡು ಮತ್ತೆ? ನಾನೇಕೆ ಸುಳ್ಳಾಡಬೇಕು ಹೇಳು!... ಸದಾ ನಮ್ಮ ತಾಯೆನ್ನುತ್ತಾಳೆ...ಸತ್ಯ ಹೇಳಲು ಹೆದರಿದವನು ಮಾತ್ರ ಸುಳ್ಳಾಡುತ್ತಾನೆಂದು...ನಾನೇಕೆ ಸತ್ಯಕ್ಕೆ ಹೆದರಲಿ...? ಈಗ ನೀವೆಲ್ಲ ನೋಡಿ ಮೆಚ್ಚಿದ ಧನುರ್ವಿದ್ಯೆ...ನೀವು ನೋಡದೆ ನನ್ನಲ್ಲಿರುವ ಇನ್ನೂ ಹೆಚ್ಚಿನ ಕೈಚಳಕ ...ಇದೆಲ್ಲ ನನ್ನ ಪ್ರೇಮದ ಗುರುವಿನ ಪ್ರಸಾದ–ಆ ಮಾನ್ಯ ದ್ರೋಣಾಚಾರ್ಯರ ಅನುಗ್ರಹ...ನಾನಾಡುವುದು ಕೇವಲ ಸತ್ಯ ಹೊರತು ಸುಳ್ಳಲ್ಲ...ನಂಬಿ.

ಅರ್ಜುನ—(ದ್ರೋಣರಿಗೆ ಮೆಲ್ಲನೆ) ಇವನೇಕೆ ಹೀಗೆ ಸುಳ್ಳಾಡುತ್ತಾನೆ ಗುರುವೇ? ಆದರೂ ನೋಡಿದರೆ ಸತ್ಯವಾದಿಯಂತಿದೆ...ನುಡಿಯೂ ಸತ್ಯದ

ಧ್ವನಿ! ಗುರುಗಳೇ! ನಾವು, ಕುರುವಂಶದ ರಾಜಕುಮಾರರು, ...ನಮ್ಮನ್ನು ಬಿಟ್ಟು ಮತ್ತೆ ಯಾರಿಗಾದರೂ ನೀವು ಕಲಿಸಿದಿರಾ?

ದ್ರೋಣ—ಛೆ...ಉಂಟೆ...ಮೂರ್ಖ! ನನಗೆ ತಿಳಿದಂತೆ ನಾನಿವನನ್ನು ಎಂದೂ ಕಂಡೇ ಇಲ್ಲ! (ಏಕಲವ್ಯನನೊಮ್ಮೆ ನೋಡಿ) ಆದರೂ ನೀನೆಂದಂತೆ ...ಮುಖದ ಕಳೆ,...ಧ್ವನಿ ಎರಡೂ ಒಳಗಿನ ಸತ್ಯವನ್ನೇ ಸೂಚಿಸುತ್ತಿವೆ (ಮತ್ತೆ ದಿಟ್ಟಿಸಿ) ನನಗೆ ತಿಳಿದಂತೆ...ನಾನೆಂದೂ...ಅವನಿಗೆ ಕಲಿಸಿಲ್ಲ...ಖಂಡಿತ ಇಲ್ಲ!

ಅರ್ಜುನ—ನನಗೆ ಗೊತ್ತು ಗುರುಜೀ! ಕೇಳಲೇಬಾರದಾಗಿತ್ತು ನಾನು! (ಏಕಲವ್ಯನಿಗೆ) ನೋಡು...ಧನುಷ್ಯವನ್ನು ಸಜ್ಜುಗೊಳಿಸಿ ನಿನ್ನೆದುರು ನಿಲ್ಲಲು ನನಗೆ ಭಯವಿಲ್ಲ. ಆದರೆ ದ್ರೋಣಾಚಾರ್ಯರು ನಿನ್ನ ಗುರುವೆಂಬ ನಿನ್ನ ಮಾತು ಸತ್ಯವಿದ್ದರೆ, ತಾವು ನಿನ್ನ ಗುರು ಅಲ್ಲ, ಎಂಬ ದ್ರೋಣಾಚಾರ್ಯರೇ ಸುಳ್ಳುಗಾರರು! ತಿಳಿಯಿತೆ?

ಏಕಲವ್ಯ—(ಮೈಮರೆತು ರೋಷದಿಂದ) ನನ್ನನ್ನು ಸುಳ್ಳುಗಾರನೆನ್ನುವುದಕ್ಕಿಂತ ನನ್ನ ಗುರುವನ್ನು ಸುಳ್ಳಾಡಿದವರೆಂದರೆ...ಅದಕ್ಕಿಂತ ಮಹಾ ಪಾಪವಿನ್ನಿಲ್ಲ...ಈ ಕ್ಷಣಕ್ಕೆ ನಿನ್ನನ್ನು ಕೊಲ್ಲುತ್ತೇನೆ! ಇಕೋ...(ಬಿಲ್ಲೆತ್ತುವನು)

ಅರ್ಜುನ—ಇಲ್ಲಿ ಪ್ರತ್ಯಕ್ಷವಾಗಿ ದ್ರೋಣಾಚಾರ್ಯರೇ ಹೇಳುತ್ತಿದ್ದಾರೆ, ನಿನಗೆ ಬಿಲ್ವಿದ್ಯೆ ಕಲಿಸಲೇ ಇಲ್ಲವೆಂದು?

ಏಕಲವ್ಯ—(ಅಚ್ಚರಿಯಿಂದ) ನನ್ನ ಗುರು ಹೇಳಿದರೆ? ನಿನಗೆ? ಯಾವಾಗ? ಎಲ್ಲಿ?

ಅರ್ಜುನ—(ಗೆದ್ದಂತೆ) ಇಲ್ಲಿ...ಈಗ...ನಿನ್ನ ಕಣ್ಣುಮುಂದೆಯೇ... ಕೇಳವರನ್ನ!

ಏಕಲವ್ಯ—(ಚಕಿತನಾಗಿ) ಯಾರನ್ನು? ಅವರನ್ನು? ಅವರನ್ನೇನು ಕೇಳುವುದು? ಯಾರೋ ತಿಳಿಯದವರನ್ನು?

ಅರ್ಜುನ—ಹಾಂ, ಗೊತ್ತು ನನಗೆ ನಿನಗೆ ಅವರು ತಿಳಿಯದವರೆಂದು. ಆದರೂ, ನೀನು ಈಗ ಇಲ್ಲಿಯೇ ಕೊಚ್ಚಿಕೊಂಡೆಯಲ್ಲ ಇವರು ನಿನಗೆ ತುಂಬ

ದಿನದಿಂದ ಗೊತ್ತು...ಚೆನ್ನಾಗಿಯೂ ಗೊತ್ತು...ಅದರಿಂದಾಗಿ ಇವರಿಂದಲೇ ನಿನ್ನ ಅಸ್ತ್ರವಿದ್ಯೆ ಕಲಿತೆಯೆಂದು? ಅದು ಸತ್ಯ ಎಂದು ಹಟ ತೊಟ್ಟೆಯಲ್ಲ?

ಏಕಲವ್ಯ—(ಏನೂ ತೋಚದೆ) ಇವರಿಂದ ನಾನು ಕಲಿತೆನೆ...? ಈ ಅಪರಿಚಿತರಿಂದ...? (ಹತ್ತಿರ ಬಂದು ಪರಿಷ್ಕಾರವಾಗಿ ನೋಡಿ ಅಪರಾಧಿಯಂತೆ) ಅಯ್ಯೋ! ಹೌದೇ!... ಕ್ಷಮಿಸು ನನ್ನ ಉರುಬನ್ನು ... ಹೌದು ... ಇವರೇ ... ನನ್ನ ನಚ್ಚಿನ ಗುರುಗಳು! (ಕಾಲಿಗೆ ಬಿದ್ದು) ಗುರುವೆ, ಗುರುವೆ, ಇಷ್ಟು ವರ್ಷಗಳು, ನಿಮ್ಮ ದರ್ಶನಕ್ಕಾಗಿ ಹೇಗೆ ಕಾತರಿಸುತ್ತ ನೊಂದಿದ್ದೇನೆಂದು ನಿಮಗೆ ತಿಳಿಯದು ಗುರುವೆ, ನಿಮ್ಮನ್ನು ಕಾಣಬೇಕು,...ನನಗೆ ಕಲಿಸಿದ್ದಕ್ಕಾಗಿ ಕೃತಜ್ಞತೆ ಅರ್ಪಿಸಬೇಕು, ಎಂದು ಎಷ್ಟು ಹಂಬಲಿಸಿದೆ ಎಂಬುದು ಗುರುವೆ. (ಎದ್ದು ದ್ರೋಣರ ಕೈ ಹಿಡಿದು ಸವರುತ್ತ) ಓ್ಹ! ನಿಮಗೆ ತಿಳಿಯದು...ಓ್ಹ! ತಾಯಿಗೆಷ್ಟು ಸಂತೋಷವಾಗುವುದು, ನನ್ನ ನಚ್ಚಿನ ಮಾನ್ಯ ಗುರುಗಳು ನಮ್ಮ ಕಾಡಿಗೇ ದಯಮಾಡಿಸಿರುವರೆಂದು ಕೇಳಿದೊಡನೆ! ನನ್ನ ನೋಡಿದಿರಲ್ಲ ನೀವೀಗ ...ಬಿಲ್ಲು ಬಾಣ ಕೈಲಿದ್ದಾಗ? ಈ ಬಡಪಾಯಿಗೆ ನೀವು ಕಲಿಸಿದ್ದು, ನೀವು ಅನುಗ್ರಹಿಸಿ ಪಾಠ ಹೇಳಿದ್ದು...ಒಳ್ಳೆಯದಾಯಿತೆನಿಸುತ್ತದೆಯೆ ಗುರುವರ್ಯ? ಇನ್ನೇನು, ಇನ್ನೊಂದೇ ತೋಳ, ಈ ಕಾಡಿನಲ್ಲಿ ಉಳಿದಿದೆ. ಅದನ್ನೂ ಸಂಹರಿಸಿದರೆ ಈ ಕಾಡು ಕ್ರೂರ ಮೃಗಗಳಿಂದ ಮುಕ್ತವಾಗಿಬಿಡುವುದೆಂದು ನಾನೆಂದರೆ...ನೀವು ಅನುಗ್ರಹಿಸಿ ಹೇಳಿಕೊಟ್ಟ ಶಿಕ್ಷಣಕ್ಕೆ ಅರ್ಹನಾಗಲೂ ಎಷ್ಟು ಹೆಣಗಿದ್ದೇನೆಂದು ನಿಮಗೇ ಗೋಚರವಾದೀತು ಗುರುವರ್ಯ! (ಅರ್ಜುನನ ತೋರಿ) ಈ ಯುವಕ ನನ್ನನ್ನು ಆಶ್ಚರ್ಯಕಾರಕ ಬಿಲ್ವಿದ್ಯೆಗಾರ ಎಂದ. ಒಂದು ಸಾಮಾನ್ಯ ಬಿಲ್ ಚಳಕ ಇವನಿಂದ ಇಷ್ಟು ಆಶ್ಚರ್ಯ ಸೆಳೆದ ಮೇಲೆ...ಏಕೆ, ನನ್ನ ಬಿಲ್ಲು ಬಾಣ ಹಿಡಿದು ನಾನು ಕ್ರುದ್ಧನಾಗಿ ನಿಂತೆನೆಂದರೆ ಉಸಿರು ಹಿಡಿಯುವಷ್ಟು ಆಶ್ಚರ್ಯವಾಗಬಹುದು ಇವನಿಗೆ! ನಿಮ್ಮ ಪರಿಚಯ ಈತನಿಗೆ ಚೆನ್ನಾಗಿರುವಂತಿದೆ...ಆದರೆ...ನಾನು ತೋರಿಸುವಂಥ ಬಿಲ್ವಿದ್ಯೆ ಕಲಿಸಿ ಕೊಡಲು ಈ ಜಗತ್ತಿನಲ್ಲಿ ಒಬ್ಬರಿಗೇ ಸಾಧ್ಯ; ಅದು ನೀವು, ಎಂಬಷ್ಟು ಪರಿಚಯ ಇವನಿಗಿದ್ದಂತಿಲ್ಲ. ನನ್ನ ಬಿಲ್ವಿದ್ಯೆಯೆಲ್ಲ ನಿಮ್ಮ ಅನುಗ್ರಹ ... ಸತ್ಯವಾಗಿ ... ಎಂದು, ನಾನೆಂದರೆ, ಅದು ಸುಳ್ಳೆಂದು ಹುಡುಗಾಟ ಮಾಡಿದ. ಮತ್ತೆ...

ನಿಮ್ಮನ್ನೇ ಅನೃತವಾದಿಗಳೆಂದ... (ಥಟ್ಟನೆ ಅರ್ಜುನನ ಕಡೆ ಗುರಿಯಿಟ್ಟು ಬಿಲ್ಲೆತ್ತಿ ರೋಷದಿಂದ) ನಿನಗೆ ತಾಯಿ ಇರಲಿ, ಇಲ್ಲದಿರಲಿ; ನೀಸಿಲ್ಲಿ ಅತಿಥಿ ಯಾಗಿರು, ಆಗದಿರು; ಯಾವುದರ ಹಂಗೂ ನನಗಿಲ್ಲ. ನನ್ನ ಗುರು ನೋಡು ತ್ತಿರುವಂತೆಯೇ ನನ್ನ ಗುರುವರ್ಯನನ್ನು ನಿಂದಿಸಿದ ಆ ನಾಲಗೆಯನ್ನು ನನ್ನ ಬಾಣಗಳಿಂದ ಸೀಳಿಯೇ ಬಿಡುತ್ತೇನೆ! ತೆಗೆ ನಿನ್ನ ಬಿಲ್ಲನ್ನು...ಬಾಣ ಹೂಡ ಬಲ್ಲೆಯಾದರೆ...!

ಅರ್ಜುನ—(ಅರೆಮನಸ್ಸಿನಿಂದ ಆದರೂ ಸಿದ್ಧನಾಗಿ) ಕದನಕ್ಕೆ ನೀ ಕಾಲ್ಕೆರೆದು ಬಂದೆಯಾದರೆ ನಾನೂ ನಿನಗೆ ತೃಪ್ತಿಯಾಗುವಷ್ಟು ಕಾಳಗ ಮಾಡಬಲ್ಲೆ. ಆದರೆ ನೆನಪಿಡು...ನಿನ್ನ ಗುರುವೆಂದು ಕರೆದೆಯಲ್ಲಾ...ಅವರೇ ...ನಿನಗೆ ಬಿಲ್ವಿದ್ಯೆ ಕಲಿಸಲೇ ಇಲ್ಲ, ಎಂದಿದ್ದಾರೆ...ತಿಳಿ!

ಏಕಲವ್ಯ—ಅವರು ಹಾಗೆನ್ನಲಿಲ್ಲ...ಹಾಗೆನ್ನಲೂ ಸಾಧ್ಯವೂ ಇಲ್ಲ ಅವರಿಗೆ! ಇಷ್ಟೊಂದು ವಿದ್ಯೆಯನ್ನೆಲ್ಲ ನನಗೆ ಕರುಣಿಸಿ ನಾನವರ ಶಿಷ್ಯನಲ್ಲವೆಂದು ಹೇಗೆ ಹೇಳುವರು?...ಅದೂ...ನನ್ನ ಸಾನ್ನಿಧ್ಯವನ್ನೇ ಅನುಭವಿಸದೆ?

ದ್ರೋಣ—ತಾಳು ಮಗು...ನಿನ್ನ ಸಾನ್ನಿಧ್ಯವನ್ನು ಅನುಭವಿಸದೆಯೆ ನಿನಗೆ ಕಲಿಸಿದೆನೆ ನಾನು? ನನಗಿದು ಅರ್ಥವಾಗದು, ಮಗು.

ಏಕಲವ್ಯ—(ನಗುತ್ತ) ಹೇಗರ್ಥವಾದೀತು ಗುರುವರ್ಯ?...ಇದು ವರೆಗೆ ಆಗುವಂತೆಯೂ ಇರಲಿಲ್ಲ. ಆದರೆ, ಇಷ್ಟರಲ್ಲೇ...ಅಂದರೆ ನಾಲ್ಕು ಹೆಜ್ಜೆ ಈ ಕಡೆ ತಾವು ದಯಮಾಡಿದರೆ (ಹತ್ತಿರದ ಜಗುಲಿಯನ್ನು ಸೇರಿ ಅದರ ಮೇಲಿದ್ದ ಮೃಣ್ಮೂರ್ತಿಗೆ ಹೊದಿಸಿದ್ದ ಮರದೆಲೆಗಳನ್ನು ಮೆಲ್ಲಗೆ ಸರಿಸಿ ದ್ರೋಣರಂತೆಯೇ ಇರುವ ಮೂರ್ತಿಯನ್ನು ತೋರುತ್ತ) ಈಗ ಗುರುವರ್ಯ ...ಅರ್ಥವಾಯಿತೆ ಈಗ?

ದ್ರೋಣ—(ಮೂರ್ತಿ ದಿಟ್ಟಿಸಿ ನೋಡಿ ತಿಳಿದು) ಹೌದಪ್ಪ...ಈಗ ಅರ್ಥವಾಯಿತು ನನಗೆ.

ಅರ್ಜುನ—(ತಿಳಿಯದೆ, ರೇಗಿ) ಆದರೆ ನನಗರ್ಥವಾಗುತ್ತಿಲ್ಲ ಗುರುಜೀ!

ಏಕಲವ್ಯ—ನಿನ್ನ ಧ್ವನಿಯನ್ನೆಲ್ಲೋ ಕೇಳಿದ ಹಾಗಿದೆ...ಹಿಂದೆ...ನನ್ನ ಗುರುವನ್ನು...ನೀನೂ ಗುರು ಎನ್ನುವೆ...ನೀನು? (ಹೊಳೆದು ಕಿರುನಗುತ್ತ) ಓ! ಈಗ ತಿಳಿಯಿತು! ನೀನಾ ಜಂಭಗಾರ ಆರ್ಯ ಬಾಲಕ ಪಾರ್ಥ! ನಿನ್ನನ್ನು ಮೀರಿದ ಬಿಲ್ಗಾರ ನಾನಾಗುತ್ತೇನೆಂಬ ಭಯದಿಂದ ನಿಮ್ಮ ಕಲಿಯುವ ಜಾಗೆಯ ಹತ್ತಿರ ಸುಳಿಯಲೂ ನನ್ನನ್ನು ಬಿಡಲೊಲ್ಲದ ಅಸೂಯೆಯ ಧೂರ್ತ! (ಅರ್ಜುನ ಆಳುಕಲು) ಈಗ ನೆನಪಿಗೆ ಬಂತೇ...? ನೋಡು...ನೀವು ಕಲಿಯು ವುದನ್ನು ನೋಡಲು ಕೂಡ ನನ್ನನ್ನು ಬಿಡದಿದ್ದರೂ...ನನ್ನ ನೆಚ್ಚಿನ ಮಾನ್ಯ ಗುರುವರ್ಯರ ಅನುಗ್ರಹದಿಂದ...ನೀನೇ ನೋಡಿದೆಯಲ್ಲ, (ಬಿಲ್ಲುಬಾಣ ಮುಟ್ಟುತ್ತ) ಅದ್ಭುತ ಎಂದು ನೀನಂದದ್ದನ್ನೇ!

ಅರ್ಜುನ—(ದೂರುವ ದನಿಯಲ್ಲಿ) ಗುರುವೆ; ನಿಮಗಾದರೂ ಈ ಇದರ ಅರ್ಥ ಏನು ಎಂದು ಹೊಳೆಯುತ್ತಿದೆಯೆ?

ದ್ರೋಣ—ಈ ಮೂರ್ತಿಯನ್ನು ನೋಡಿದೊಡನೆ ನನಗೆ ಹೊಳೆಯಿತು ಪಾರ್ಥ...ಹಸ್ತಿನಾವತಿಯನ್ನು ಬಿಡದೆಯೇ ಇವನು ತಿಳಿದಿರುವ ಬಿಲ್ವಿದ್ಯೆಯನ್ನೆಲ್ಲ ಹೇಗೆ ಹೇಳಿಕೊಟ್ಟೆನೆಂದು.

ಅರ್ಜುನ—ಇನ್ನೂ ನನಗೆ ಅರ್ಥವಾಗಿಲ್ಲ ಗುರುವೆ...ಅಲ್ಲ, ವರ್ಷಾನು ವರ್ಷ ನಮ್ಮ ಕಣ್ಣುಮುಂದೆಯೇ ಇದ್ದು...ಇವನಿಗೆ ಹೇಗೆ...ಹೇಳಿದಿರಿ...? (ಏಕಲವ್ಯ ನಗುವ)

ದ್ರೋಣ—(ನೀರಸ-ಗಂಭೀರ) ಅವನನ್ನೇ ಕೇಳು ಪಾರ್ಥ...ಕೇಳು, ಅವನನ್ನು.

ಏಕಲವ್ಯ—(ಒಡನೆಯೆ) ಓಹೊ! ನನ್ನನ್ನು ಕೇಳುವ ಅಗತ್ಯವೆ ಇಲ್ಲ ...ಗುರುವರ್ಯರ ಅನುಗ್ರಹ ಕುರಿತು ಹೇಳಲು ನನಗೆ ತುಂಬ ಸಂತೋಷ... ಕಾತರ. (ಮೂರ್ತಿಯನ್ನು ಭಕ್ತಿಯಿಂದ ಆಲಂಗಿಸಿ) ಗುರುಗಳು ಇಷ್ಟು ವರ್ಷವೂ ನಿಮ್ಮ ಕಣ್ಣು ಮುಂದೆಯೇ ಇದ್ದಿರಬಹುದೇನೋ...ಆದರೆ...ಅಷ್ಟೂ ಕಾಲ ಅವರಿಲ್ಲೇ ಇದ್ದಿದಾರೆ...ಇಷ್ಟು ವರ್ಷಗಳಲ್ಲಿ ಪ್ರತಿಕ್ಷಣವೂ ಇಲ್ಲೇ ಇದ್ದಿದಾರೆ...ಬಿಲ್ವಿದ್ಯೆಯ ಒಂದೊಂದು ಅಂಶವನ್ನೂ ನನಗೆ ಕಲಿಸುತ್ತ!

ಅರ್ಜುನ—(ನಂಬದೆ) ಅಲ್ಲ? ಈ...ಈ ಮಣ್ಣು ಬೊಂಬೆ ನಿನಗೆ ಬಿಲ್ವಿದ್ಯೆ ಕಲಿಸಿತೆಂದು ನಾನು ನಂಬಬೇಕೇ?

ಏಕಲವ್ಯ—(ಗಡಸಾಗಿ) ನನ್ನ ಗುರುಗಳ ವಿಷಯ ಮಾತನಾಡುವಾಗ ಶಬ್ದಗಳ ತೂಕವಿರಲಿ! ಎಚ್ಚರ! ನಿನಗೆ ಅದು ಮಣ್ಣು ಬೊಂಬೆ! ಗುರುವನ್ನು ನನ್ನಂತೆ ಪೂಜ್ಯಭಾವದಿಂದ ನೋಡದ ನಿನಗೆ ಅವರು ಮಣ್ಣು ಬೊಂಬೆಯೇ ಸರಿ. ಆದರೆ ನನ್ನದೆಲ್ಲವೂ ಅವರ ಕರುಣೆಯೆಂದು ನೋಡುವ ನನ್ನ ಕಣ್ಗಳಿಗೆ ಅದೇ ಗುರು ಸ್ವರೂಪವಾಗಿದೆ; ಸಾಕ್ಷಾತ್ ನನ್ನ ಗುರುವೇ ಆಗಿದೆ. ನನ್ನ ಧನುರ್ವಿದ್ಯೆಗಾಗಿ ನಿನಗೆ ಆಶ್ಚರ್ಯ, ಆದರ ಅಸೂಯೆಯಿದ್ದರೂ ಸರಿ...ಆಗ ನನ್ನ ಗುರುವಿನ ಬಗ್ಗೆಯೂ ನಿನಗೆ ಆದರವಿರಬೇಕಾಗಿದೆ...ಬಾಣ–ಬಿಲ್ಲುಗಳಿಂದ ನಾನು ಮಾಡಬಹುದಾದ ಎಲ್ಲವನ್ನೂ ನನಗೆ ಕಲಿಸಿದ ಈ ಗುರುವಿನ ಬಗ್ಗೆ!

ಅರ್ಜುನ—(ನಂಬುತ್ತ, ಕುತೂಹಲದಿಂದ) ಆದರೆ ನನಗಿನ್ನೂ ಅರ್ಥವಾಗಿಲ್ಲ. ಆ ಮಣ್ಣು ಮುದ್ದೆ...ಅಲ್ಲ...ಅಂದರೆ...ಈ ನಿನ್ನ ಗುರು...ಇದು... ಅಲ್ಲಲ್ಲ...ಇವರು...ನಿನಗೆ ಹೇಗೆ ಕಲಿಸಿತು...ಅಲ್ಲ...ಕಲಿಸಿದರು ಎಂಬುದು... ಅಂದರೆ...ತನ್ನ ತುಟಿಗಳನ್ನೆ ಬಿಚ್ಚಲು ಬಾರದ ಇದು...ಅಲ್ಲ...ಇವರು...ಹೇಗೆ ...ಅಂದರೆ...?

ಏಕಲವ್ಯ—(ಆನಂದದಿಂದುಬ್ಬುತ್ತ) ಹೌದು. ನನಗೂ ಅದೇ ಆಶ್ಚರ್ಯ ತಿಳಿಯಿತೆ? ಗುರುಗಳು ಒಂದು ಮಾತನ್ನೂ ಆಡುತ್ತಿರಲಿಲ್ಲ...ನಾನು ಮಾತ್ರ ಬೇಗ ಬೇಗ ಕಲಿಯುತ್ತಲೇ ಇದ್ದೆ, ತಿಳಿಯಿತೆ?...ಆದರೆ ನಮ್ಮ ತಾಯಿಗೆ ಮಾತ್ರ ಆಶ್ಚರ್ಯವೂ ಇಲ್ಲ, ಏನೂ ಇಲ್ಲ. ಒಮ್ಮೆ ಕೂಡ, ತಪ್ಪಿ ಕೂಡ ಇಲ್ಲ, ಅಂದೆ. ಆಕೆ ಏನೆಂದಳು ಗೊತ್ತೊ? "ಗುರುವಿನಲ್ಲಿ ನಿನಗಿರುವ ಗಾಢಪ್ರೇಮ, ನಿನಗೆ ಕಲಿಸುವುದರಲ್ಲಿ ಅವರಿಗಿರುವ ಅಪಾರ ಪ್ರೇಮ, ಇವೆರಡೂ ಮಾತನಾಡದ, ಮುಗುಳ್ನಗೆಯ ಆ ತುಟಿಗಳಲ್ಲಿ ನಿಂತು ನೀನು ಕಲಿಯುವಂತೆ ಸಹಾಯಮಾಡಿವೆ" ಎಂದು.

ಅರ್ಜುನ—ಉಹುಂ ... ಇಲ್ಲ ... ನೀನಿಷ್ಟು ವಿವರಿಸಿದರೂ...ನನಗಿನ್ನೂ ಅರ್ಥವಾಗಿಲ್ಲ.

ಏಕಲವ್ಯ—ಇಲ್ಲವೆ? ಹಾಗಾದರೆ ಮುಂದೆ ಕೇಳು (ಪೀಠದಡಿ ಕೈಯಾಡಿಸಿ) ಈ ಪೀಠದಲ್ಲಿ ಒಂದು ತಗ್ಗು ಬಿದ್ದಿದೆ, ಕಾಣುತ್ತದೆಯೆ? ಬರೀ ನನ್ನ ಹಣೆ ಚಚ್ಚಿ ಚಚ್ಚಿ ಈ ತಗ್ಗನ್ನು ಇನ್ನಿಷ್ಟು ಆಳ ಮಾಡಿದುದೊಂದೇ ಗುರುವಿನಿಂದ ಅಸ್ತ್ರವಿದ್ಯೆಯನ್ನು ಕಲಿಯುವಾಗ ನಾನು ಪಟ್ಟ ಶ್ರಮವೆನ್ನ ಬಹುದು. ಮುಂದೆ ನಡೆದುದೆಲ್ಲ ಬಹು ಸುಲಭ! ಏನಾಯಿತು ಗೊತ್ತೋ? ...ಯಾವುದಾದರೂ ಗುರಿಗೆ ಲಕ್ಷ್ಯವಿಟ್ಟು ಬಾಣಬಿಡುವುದು...ಗುರಿ ತಪ್ಪಿದಾಗ, ಗುರುವಿನ ಬಳಿ ಸಾರಿ, ಬೇಡುವುದು...ಕರುಣಿಸೆಂದು. ಮತ್ತೆ ಯತ್ನಿಸುವುದು; ಪುನಃ ಗುರಿತಪ್ಪಿದರೆ, ಕಣ್ಣೀರಿಡುತ್ತ, ಗುರುವಿನ ಪೀಠಕ್ಕೆ ಹಣೆ ಚಚ್ಚಿಕೊಳ್ಳು ವುದು...ಕಾಡುವುದು, ಬೇಡುವುದು ಮತ್ತೆ ಅನುಗ್ರಹಿಸಿಯೆಂದು! ಅನಂತರ ಬಿಟ್ಟ ಬಾಣ, ನೇರ ಗುರಿಗೇ ತಾಕುತ್ತಿತ್ತು...ತಪ್ಪುತ್ತಿರಲೇ ಇಲ್ಲ! ಆಮೇಲೆ ಇನ್ನೂ ಕಷ್ಟದ ಶರ ಸಂಧಾನಗಳಲ್ಲಿ ಯತ್ನ! ಪ್ರತಿ ಸಲ ಸೋತಾಗಲೂ... ಅಳುತ್ತಳುತ್ತ...ಹೆಚ್ಚು ಕಾಡುತ್ತ...ಹೆಚ್ಚು ಬೇಡುತ್ತ...ಈ ತಗ್ಗು ಇನ್ನೂ ಆಳವಾಗುತ್ತಿತ್ತು...ತಲೆ ಚಚ್ಚಿಕೊಂಡು! ಆ ತೋಳ ಹೊಡೆದದ್ದು ಅತ್ಯಾಶ್ಚರ್ಯ ಕರವೆಂದೆಯಲ್ಲ ನೀನು...? ನನ್ನ ನಿಜವಾದ ಶರ ಕೌಶಲವನ್ನಿನ್ನೂ ನೀನು ನೋಡಬೇಕು...ಕಗ್ಗತ್ತಲಿನಲ್ಲಿ ಬಾಣ ಬಿಟ್ಟು ಗುರಿ ಭೇದಿಸಬಲ್ಲೆ. ಕಾಳರಾತ್ರಿ ಗಳಲ್ಲಿ ಇಲ್ಲವೆ ನಡು ಹಗಲಿನಲ್ಲಿ ನನ್ನ ಕಣ್ಣುಮುಚ್ಚಿ, ಬಾಣ ಬಿಡಬಲ್ಲೆ... ಕಣ್ಣಿಟ್ಟು ಹೊಡೆಯುವುದು ಮಾತ್ರವಲ್ಲ...ಕೇವಲ ಶಬ್ದದ ಜಾಡು ಹಿಡಿದು ಕಾಣದ ಗುರಿಯನ್ನೂ ಭೇದಿಸಬಲ್ಲೆ...ಮತ್ತೆ...

ಅರ್ಜುನ—(ಅಡ್ಡಮಾತಾಡಿ) ಓ ... ನೀನೇನೇನು ಮಾಡಬಲ್ಲೆ... ಮಾಡಲೊಲ್ಲೆ...ಇವೆಲ್ಲ ಬೇಕಾಗಿಲ್ಲ ನನಗೆ (ಸರ್ರನೆ ದ್ರೋಣರೆಡೆ ತಿರುಗಿ) ಗುರುಗಳೇ, ನಿಮ್ಮ ವಚನವೇನಾಯಿತು ?

ದ್ರೋಣ—(ಕನಸಿನಿಂದ ಎಚ್ಚೆತ್ತವರಂತೆ) ವ...ವ...ಚನ...ಏನು ವಚನ...ಪಾರ್ಥ?

ಅರ್ಜುನ—ಅಕೋ! ಮರೆತಿರುವಿರಾಗಲೇ? ಈ ಅರಣ್ಯವಾಸಿಯ ಅಸ್ತ್ರ ವಿದ್ಯಾ ಕೌಶಲ್ಯ, ನೀವದನ್ನವನಿಗೆ ಕಲಿಸಿದ ವಿಚಿತ್ರ ವಿಧಾನ, ಇವುಗಳಲ್ಲಿ ಮಗ್ನರಾಗಿ, ಸ್ವಲ್ಪ ಹೊತ್ತಿನ ಮುನ್ನವೇ ನನಗಿತ್ತ ಆಶ್ವಾಸನೆಯನ್ನು ಮರೆತು

ನಿಂತಿದ್ದೀರಲ್ಲ...ಗುರುಗಳೇ ? ...ನಾನಂದುದರ್ಥವಾಯಿತೆ ಗುರುಗಳೆ ... ನೀವು ನನಗಿತ್ತ ವಚನ...ಅಪ್ರತಿಮನನ್ನಾಗಿಸುವೆನೆಂದು...?

ದ್ರೋಣ—ಆದರೆ ಪಾರ್ಥ, ನಡೆದುದನ್ನು ನೋಡಿರುವಿ, ಹೇಳಿದುದನ್ನು ಕೇಳಿರುವಿ. ಇಷ್ಟಾಗಿಯೂ ನಿನಗೆ ಹೊಳೆಯಬಾರದೆ ?

ಅರ್ಜುನ—(ಮೊಂಡನಂತೆ) ಹೊಳೆದಿಲ್ಲ, ಹೊಳೆಯಲಾರದು!...ಹೊಳೆಯುವುದಂತೆ? ಏನದು ? ನನಗೆ ಹೊಳೆದುದು ಇಷ್ಟೆ, ನೀವು ನನ್ನನ್ನು ಅಪ್ರತಿಮ ಧನುರ್ಧಾರಿಯಾಗಿಸುವ ವಚನ ಕೊಟ್ಟಿರಿ, ಅದನ್ನು ಪಾಲಿಸಲಿಲ್ಲ! ಅಷ್ಟೇ ಅಲ್ಲ. ವಚನ ಪಾಲಿಸದಿದ್ದಾಗೆಯೂ ಪಾಲಿಸಿದ್ದೇನೆ ಎಂಬ ಆಶ್ವಾಸನವನ್ನು, ಇಲ್ಲಿಯೇ, ಕೆಲವೇ ಕ್ಷಣ ಮುಂದೆ, ಕೊಟ್ಟಿರಲ್ಲ! ಇದಕ್ಕೂ ಸುಳ್ಳಿಗೂ ಏನು ವ್ಯತ್ಯಾಸ ?

ಏಕಲವ್ಯ—(ಸಿಡಿದೆದ್ದು) ಹಾಂ, ಹಿಂದೆಳೆದುಕೋ ಉದ್ದವಾದ ನಿನ್ನ ನಾಲಗೆಯನ್ನು. ಇಲ್ಲವಾದರೆ ನಿನ್ನ ವಧೆ ಆಯ್ತೆಂದೇ ತಿಳಿ.

ಅರ್ಜುನ—ನಿನ್ನನ್ನು ತಡೆಯದೆ ನಾನು ಸುಮ್ಮನಿದ್ದರೆ ತಾನೆ? ಇಗೋ!

ದ್ರೋಣ—(ಇಬ್ಬರ ಮಧ್ಯೆ ಬಂದು ಬಿಡಿಸಿ ದೂರ ನಿಲ್ಲಿಸಿ) ಏನಿದು ಹುಚ್ಚಾಟ...ಪಾರ್ಥ ?...ಮಗು, ನೀನೂ ಸ್ವಲ್ಪ ಸೈರಿಸಪ್ಪ.

ಅರ್ಜುನ—ನನ್ನನ್ನು ಜಗತ್ತಿನಲ್ಲೆಲ್ಲ ಅನುತ್ತರ ಧನುರ್ಧರನಾಗಿ ಮಾಡುವೆನೆಂದು ನನಗೆ ಮಾತು ಕೊಟ್ಟಿರೋ ಇಲ್ಲವೋ ಹೇಳಿ ಗುರುಗಳೆ.

ದ್ರೋಣ—ಹೌದಪ್ಪ...ವಚನವಿತ್ತೆ...ನಿಜ!

ಏಕಲವ್ಯ—ಹೌದೇ ಹೌದು...ವರ್ಷಗಳ ಹಿಂದೆ ಅವರು ವಚನವಿತ್ತರು, ಅಂದು ನಾನೂ ಅಲ್ಲೇ ಇದ್ದೆ. ಅಂದ ಮಾತ್ರಕ್ಕೆ ಅವರು ಪಾಲಿಸುವದಿಲ್ಲವೆಂದೇನೂ ಅಲ್ಲವಲ್ಲ?

ಅರ್ಜುನ—ಗುರುಗಳೆ, ಈಗ ಕೇಳಿ...ಈ ನಿಷಾದನ ಅಸ್ತ್ರ ವಿದ್ಯಾ ಕೌಶಲ ನೀವು ನೋಡಿಯಾಯಿತು ... ಈಗಲೂ ಹೇಳಬಲ್ಲಿರಾ, ವಚನವನ್ನು ಪಾಲಿಸಿರುವಿರಿ, ಇಲ್ಲವೇ ಪಾಲಿಸಬಲ್ಲಿರಿ, ಎಂದು ?

ದ್ರೋಣ—(ಮೇಲೇರಿಬರುತ್ತಿರುವ ಏಕಲವ್ಯನನ್ನು ತಡೆದು ನಿಲ್ಲಿಸಿ) ಪಾರ್ಥ...ಪಾರ್ಥ...ನಾ ವಚನವಿತ್ತಾಗ ಅದನ್ನು ಪಾಲಿಸಬೇಕೆಂದೇ ಇತ್ತಿದ್ದೆ ಎಂಬುದು ನಿನ್ನ ಹೃದಯಾಂತರಾಳದಲ್ಲಿ ನಂಬುಗೆ ಇಲ್ಲವೆ? ನಿನಗೆ ಭರವಸೆ ಇತ್ತಾಗಂತೂ ನಾನು ನನ್ನ ವಚನವನ್ನು ಪಾಲಿಸಿರುವೆ ಎಂಬ ನಂಬಿಕೆಯಿಂದಲೇ ಹಾಗೆ ನುಡಿದೆ...ಆದರೆ ಅರಿಯದೆ, ಉದ್ದೇಶ ಲೇಶವೂ ಇಲ್ಲದೆ, ಆಡಿದ ಆ ಮಾತು, ಸುಳ್ಳಿನ ಹೊಣೆ ನನ್ನ ಮೇಲೆ ಹೊರಿಸಿ ಅಗೌರವ ತೋರುವಷ್ಟು ಅನೃತವಾಯಿತೇ ಅದು, ಪಾರ್ಥ ?

ಅರ್ಜುನ—(ದೂರುವ ಧ್ವನಿಯಲ್ಲೇ) ಅರಿತೋ ಅರಿಯದೆಯೋ... ಆ ಗೊಡವೆ ನನಗಿಲ್ಲ...ನೀವಿತ್ತ ವಚನ ಉಳಿಸಿಕೊಂಡಿಲ್ಲವೆಂಬುದಷ್ಟೇ ನನಗೆ ಗೊತ್ತು, ಅಷ್ಟೇ ಅಲ್ಲ...ಗುರುಗಳೆ ! ಕ್ಷಣಕ್ಕೆ ಮುಂಚೆ ನೀವಂದಿರಿ...ಅಸ್ತ್ರವಿದ್ಯೆಯಲ್ಲಿ ನನ್ನನ್ನೂ ನಿಮ್ಮನ್ನೂ ಹಿಮ್ಮೆಟ್ಟಿ ತೀರ ಮುಂದೆ ಹೋಗಿದ್ದಾನೆ ಇವನೆಂದು?...ನೀವಿಬ್ಬರೂ ಹೇಳುವಂತೆ, ಅವನು ಕಲಿತಿರುವುದೆಲ್ಲ ನಿಮ್ಮಿಂದಲೇ ಆದರೆ...ನಿಮಗಿಂತ ಹೆಚ್ಚಾಗಿ, ಅತಿಶಯವಾಗಿ ಅವನಾಗುವಷ್ಟು ಕಲಿಯಲು ಹೇಗೆ ಸಾಧ್ಯ ಗುರುಗಳೆ ?

ದ್ರೋಣ—(ಯೋಚಿಸುತ್ತ) ನನಗೂ ಅದು ಒಗಟಾಗಿದೆ, ಪಾರ್ಥ... ಅದನ್ನು ಬಿಡಿಸಲು ಯತ್ನಿಸುತ್ತಿರುವೆ. ಈ ಮಗುವಿಗೆ ಕಲಿಸಿದ್ದೆಲ್ಲ ನಾನೇ, ನನಗೆ ತಿಳಿಯದೆಯೆ ಕಲಿಸಿದೆ, ಎಂಬುದು ನನಗೀಗ ಮನವರಿಕೆಯಾಗಿದೆ. ಆದರೆ ನನ್ನನ್ನೂ ಮೀರಿಸುವ ಧನುರ್ಧರ ಇವನಾಗುವಂತೆ ನಾನು ಹೇಗೆ ಸಹಾಯ ಮಾಡಬಲ್ಲೆನಾದೆ, ಎಂಬುದೇ ಇನ್ನೂ ಬಿಡದ ಒಗಟಾಗಿದೆ.

ಏಕಲವ್ಯ—(ಆನಂದದಿಂದ ನಗುತ್ತ) ಹಾಂ! ಗುರುವೆ! ಪ್ರಾರಂಭದಲ್ಲಿ ನನಗೂ ಅದೇ ಆಶ್ಚರ್ಯಕಾರಕವಾಗಿತ್ತು. ತಾಯಿಯನ್ನು ಪದೇ ಪದೇ ಪ್ರಶ್ನಿಸುತ್ತಿದ್ದೆ. ನನಗೆ ಕಲಿಸುವ ಗುರುವೇ ಇನ್ನೂ ಧನುರ್ಧಾರಿಯಾಗಿ ಜೀವಿಸುತ್ತಿರುವಾಗಲೇ ನಾನು ಧನುರ್ವಿದ್ಯೆಯಲ್ಲಿ ಅಪ್ರತಿಮನಾಗಬೇಕೆಂದಿರುವೆನಲ್ಲ ? ಅದು ಹೇಗೆ ಸಾಧ್ಯ ?...ಎಂದು. ಹಾಗೆ ಕೇಳಿದಾಗೆಲ್ಲ ನನ್ನ ತಾಯಿಯದೊಂದೇ ಉತ್ತರ..."ಶಿಷ್ಯನು ಗುರುವಿಗಿಂತ ಹೆಚ್ಚಿನ ಕೌಶಲವನ್ನು ಗುರುವಿನಿಂದಲೆ ಕಲಿಯಬಲ್ಲನು...ಆ ಗುರುವು ತನ್ನ ಗುರುವಿನಿಂದ ಕಲಿಯುವಾಗಿಟ್ಟುಕೊಂಡ

ಉದ್ದೇಶಕ್ಕಿಂತ, ಈ ಶಿಷ್ಯನ ಉದ್ದೇಶವು ಹೆಚ್ಚು ಉದಾತ್ತವಾಗಿದ್ದಾಗ, ಖಂಡಿತ ಹೆಚ್ಚು ಕಲಿಯಬಲ್ಲನು," ಎಂದು.

ದ್ರೋಣ—ಆಶ್ಚರ್ಯ...ಪರಮಾಶ್ಚರ್ಯ...

ಅರ್ಜುನ—(ಹಂಗಿಸುತ್ತ) ಓಹೊ! ಆಶ್ಚರ್ಯವೆ? ಹಂ—ನಿಮಗೆ ಇದೊಂದು ಆಶ್ಚರ್ಯ, ಪರಮಾಶ್ಚರ್ಯವಾಗಿರಬಹುದು, ಗುರುವೆ. ಈ ಅಚ್ಚರಿಗಿಚ್ಚರಿಯೆಲ್ಲ, ನಿಮಗೊದಗಿರುವ ಅಪಾಯುವನ್ನು ದೂರ ಮಾಡಲಾರದು!

ಏಕಲವ್ಯ—(ನಂಬದೆ) ಅಪಾಯ ?...ನಮ್ಮ ಗುರುವಿಗೆ...ಅಪಾಯ ? (ನಗುತ್ತ) ಎಂಥದದು ?

ಅರ್ಜುನ—ಎಂಥದೇ? ಜಗತ್ತೆಲ್ಲ ಇವರನ್ನು ವಚನಭ್ರಷ್ಟರೆಂದು ಹೀಗಳೆಯುವುದು! ಕಾಡಿನ ನಿಷಾದನಾದ ನಿನಗೆ ಇವೆಲ್ಲ ಅರ್ಥವಾಗದು... ನಿನಗಿದರಿಂದೇನೂ ಆಗದು! ಆದರೆ ಗುರುಗಳು, ಖ್ಯಾತಿಪೆತ್ತ ಆರ್ಯ ಬ್ರಾಹ್ಮಣಶ್ರೇಷ್ಠರು...ಅವರಿಗೀ ನೋವು...ಊ...ಸುಳ್ಳಾಡಿದರೆಂಬ ಅಪವಾದದ ನೋವು...ಊ...ಭರಿಸುವುದು ಕಷ್ಟ.

ಏಕಲವ್ಯ—ಮುಚ್ಚು ಬಾಯಿ...ಇವ ನುಡಿಯುವುದೆಲ್ಲ ನಿಜವೇ ಗುರುವೆ?

ದ್ರೋಣ—ಹೌದು ಮಗು...ಅಕ್ಷರಶಃ ನಿಜ.

ಏಕಲವ್ಯ—(ವ್ಯಥೆಯಿಂದ) ಆದರೆ ಹೀಗಾಗಬಾರದು ಗುರುಗಳೇ... ಹೀಗಾಗಲೇ ಬಾರದು...ಹೇಗೋ...ಎಂತೋ...ನೀವು ಕೊಟ್ಟ ಮಾತು ಉಳಿಸಿ ಕೊಳ್ಳಲೇಬೇಕು...ಗುರುಗಳೇ!

ದ್ರೋಣ—ಅದು ಹೇಗಾದೀತು...ಮಗು? ಅದಕಾಗಿ ನಾನು ಏನು ಮಾಡಬಲ್ಲೆ? ಅದು ಎಷ್ಟು ಕಠಿಣ ಎಂಬುದನ್ನರಿಯದೆ ಅವಿವೇಕದ, ಅಹಂಕಾರದ ಭರದಲ್ಲಿ ಮಾತನ್ನು ಕೊಟ್ಟುದಕ್ಕೆ ಅದು ನನಗೆ ಪ್ರಾಯಶ್ಚಿತ್ತ; ನ್ಯಾಯ, ಧರ್ಮ!

ಏಕಲವ್ಯ—ಆದರೂ ಗುರುಗಳೇ...ಏನಾದರೂ...ಅಂದರೆ–ನೀವಿಷ್ಟು ದೊಡ್ಡವರು...ತಿಳಿದವರು...

ದ್ರೋಣ—(ಸುಯ್ದು) ತಿಳಿದವನೇ?...ಮಗೂ? ಯಾವಾತನೂ ತನ್ನ ಜೀವನದ ಎಲ್ಲ ಗಳಿಗೆಗಳಲ್ಲೂ ತಿಳಿದವನಲ್ಲ...ಎಲ್ಲೋ ಒಮ್ಮೆ ಪ್ರಮಾದ ವಶಾತ್ ನಾನು ಮೈ ಮರೆತೆ...ತಿಳಿಗೇಡಿತನಕ್ಕೆ ಎಡಹಿದೆ...ಅದರ ಫಲ ಅನುಭವಿಸಬೇಕು ಮಗು!

ಏಕಲವ್ಯ—ಹಾಗಲ್ಲ, ಗುರುಗಳೇ! ಮೌನದಿಂದಿದ್ದ ಮೂರ್ತಿಯ ರೂಪದಲ್ಲೇ ನನಗೆ ಇಷ್ಟೊಂದು ಕಲಿಸಿದ ನೀವು, ಸಾಕ್ಷಾತ್ತಾಗಿ ಜೀವಂತಮೂರ್ತಿ ಯಾಗಿದ್ದಾಗ, ನನಗಿಂತ ಹೆಚ್ಚಿನದನ್ನು ಅವನಿಗೆ ಕಲಿಸಬಹುದಲ್ಲ? ನಿಮ್ಮ ವಚನ ಉಳಿಸಿಕೊಳ್ಳಬಹುದಲ್ಲ?

ದ್ರೋಣ—ವತ್ಸಾ! ಕಲಿಯುವುದೂ ಕಲಿಸುವುದೂ ಎರಡೂ ಗುರು ವಿನ ಕೈಯಲ್ಲೇ ಇದ್ದಿದ್ದರೆ...ಅವನನ್ನು ನಿನಗಿಂತ ಅಪ್ರತಿಮನನ್ನಾಗಿ ಮಾಡಬಲ್ಲೆ ನಾಗಿದ್ದೆ! ಆದರೆ ನೀನೇ ತೋರಿಸಿಕೊಟ್ಟೆಯಲ್ಲ? ಶಿಷ್ಯನೂ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸಿಯೇ ತೀರಬೇಕೆಂದು!

ಏಕಲವ್ಯ—ನೀವನ್ನುವುದರ ಅರ್ಥವಾಯಿತು ನನಗೆ, ಗುರುಗಳೇ! ಅವನಲ್ಲಿ ನಿಮಗಾಗಿ ಇರಬೇಕಿದ್ದ ಗೌರವ ಪ್ರೇಮಗಳನ್ನು ಕುರಿತಲ್ಲವೆ ನೀವನ್ನುವುದು? ಧನುರ್ವಿದ್ಯೆಯಲ್ಲಿ ಹೆಚ್ಚಳ ಗಳಿಸಲು ಇಷ್ಟು ಕಾತರನಾಗಿದ್ದಾನೆ ಇವನು?...ಖಂಡಿತ ನಿಮ್ಮಲ್ಲಿ ತುಂಬ ಗೌರವವನ್ನಿಡಬಹುದಲ್ಲ?

ದ್ರೋಣ—ನಿನಗೆ ಪೂರ್ತಿ ತಿಳಿದಿಲ್ಲ ವತ್ಸ! ಗುರುವಿಗಾಗಿ ಪ್ರೇಮ–ಶ್ರದ್ಧೆಗಳಷ್ಟರಿಂದಲೆ ಆಗದು. **ಉದ್ದೇಶ**, ಮುಖ್ಯವಾಗಿ ಕಲಿಯುವ ಶಿಷ್ಯನ **ಉದ್ದೇಶ**, ಅವನ ಯೋಗ್ಯತೆಯನ್ನು ನಿರ್ಣಯಿಸುವುದು. ನೀನೇ ಅದನ್ನು ಈ ಮುಂಚೆ ಹೇಳಿದ್ದೀಯೆ. ಕಲಿಕೆಯ ಅವನ ಉದ್ದೇಶ...ನಿನ್ನದಕ್ಕಿಂತ ತೀರ ಹೀನ ವಾಗಿರುವಾಗ...ಅವನೆಲ್ಲ ಸಾಧನೆಯಾಗಲೀ ನನ್ನ ಪ್ರಯತ್ನವಾಗಲೀ ನಿನ್ನ ಸಮಕ್ಕೆ ಕೂಡ ಅವನನ್ನು ತರುವುದೂ ಅಸಾಧ್ಯವಪ್ಪ...ಅಸಾಧ್ಯ!

ಏಕಲವ್ಯ—ಅವನ ಉದ್ದೇಶವೇನೋ...ಹಾಗಾದರೆ?

ದ್ರೋಣ—ಅವನ ಉದ್ದೇಶ ಮೊದಲಿಂದ ಇಷ್ಟೆ...ಧನುರ್ಧರನೆಂಬ ಕೀರ್ತಿ ಎಂದು ಸಂಪಾದಿಸಿಯೇನು...ಎಲ್ಲ ಕಾಲಕ್ಕೂ ಅಪ್ರತಿಮನೆಂದು ಎಂದು

ಹೊಗಳಿಸಿಕೊಂಡೇನು...ಎಂದಿಷ್ಟೆ. ನೀನಾದರೊ...ಕ್ರೂರ ಮೃಗಗಳ ಹಾವಳಿಯ ಭಯದಿಂದ ಸಾಧುಪ್ರಾಣಿಗಳನ್ನು ಸಂರಕ್ಷಿಸಲು ಮೈ, ಮನಸ್ಸು, ಬುದ್ಧಿ, ಆತ್ಮ ಇವೆಲ್ಲ ಲೀನ ಮಾಡಿಬಿಟ್ಟಿದ್ದೀಯೆ. ಹೀಗಿರುವಲ್ಲಿ ಅವನು ಎಷ್ಟೇ ಕಠೋರ ಯತ್ನಗಳನ್ನು ಮಾಡಿದರೂ ನಿನ್ನ ಸುತ್ತಲಿನ ಸಾವಿರಾರು ಯೋಜನೆಗಳಲ್ಲಿ ಅವನ ನೆರಳು ಕೂಡ ಬೀಳದು. ಆದರಿಂದಾಗಿ ಅವನಿಗೆ ಕೊಟ್ಟ ವಚನವನ್ನು ಪಾಲಿಸು ವುದು ನನ್ನಿಂದಲೂ ಆಗದು...ಆಗದು.

ಏಕಲವ್ಯ—(ದುಃಖ ಸಂತಪ್ತನಾಗಿ ತಲೆ ತಗ್ಗಿಸಿ) ಇಷ್ಟೆಲ್ಲ ಆದುದು ನನ್ನ ನಿಮಿತ್ತವಾಗಿ ಅಲ್ಲವೆ ? ಗುರುಗಳೇ ?

ದ್ರೋಣ—ನಿನ್ನ ನಿಮಿತ್ತವಾಗೇ...ಹೇಗೆ ಮಗು ?

ಏಕಲವ್ಯ—ಅಲ್ಲವೆ, ಗುರುಗಳೆ? ನಾನು ನಿಮ್ಮಲ್ಲಿಗೆ ಬಾರದೆಯೆ ಇದ್ದಿದ್ದರೆ...ನಾನು ಧನುರ್ವಿದ್ಯೆಯ ಅಭ್ಯಾಸವನ್ನೇ ಮಾಡದಿದ್ದಿದ್ದರೆ...ಇವನು ಖಂಡಿತವಾಗಿ ಜಗತ್ತಿನಲ್ಲೆಲ್ಲ ಅಪ್ರತಿಮ ಧನುರ್ಧರನಾಗಬಹುದಿತ್ತು—ಅಲ್ಲವೇ ಗುರುಗಳೇ ?

ದ್ರೋಣ –ಹೌದು...ಆದರೆ...!

ಏಕಲವ್ಯ—ಹಾಂ !...ನೋಡಿದಿರಲ್ಲವೆ ?...ನಾನೇ, ನಾನೇ ಕಾರಣ... **ನೀವು** ವಚನವನ್ನು ಪಾಲಿಸಲಾರದ್ದಕ್ಕೆ !

ದ್ರೋಣ—(ಸಾಂತ್ವನ ದನಿಯಿಂದ) ಅಲ್ಲ, ಅಲ್ಲ ಮಗೂ, ಬುದ್ಧಿ ಪೂರ್ವಕವಾಗಿ ನೀನು ಹಾಗೆ ಮಾಡಲಿಲ್ಲವಲ್ಲ? ತಿಳಿದು ಮಾಡಿದ್ದಲ್ಲವಲ್ಲ ಅದು ?

ಏಕಲವ್ಯ—(ಅರ್ಜುನನಿಗೆ) ಇಕೊ...ಇಲ್ಲಿಯೇ ನಿನಗೆ ವಚನಕೊಡು ತ್ತೇನೆ...ಸತ್ಯವಾಗಿ...ಇನ್ನೆಂದೆಂದಿಗೂ ನಾನು ಬದುಕಿರುವವರೆಗೆ ಬಿಲ್ಲು ಹಿಡಿ ಯುವುದಿಲ್ಲವೆಂದು ! ಇನ್ನಾದರೂ ಜಗತ್ತಿನಲ್ಲೆಲ್ಲ ನೀನೇ ಹೆಚ್ಚಿನ ಧನುರ್ಧರ ನಾದಂತಾಯಿತಲ್ಲ? ನಮ್ಮ ಗುರುಗಳು ಕೊಟ್ಟ ವಚನ ಉಳಿದ ಹಾಗಾಯಿತಲ್ಲ?

ಅರ್ಜುನ—ಹ್ಹ ! ಎಂದಿಗೂ ಇಲ್ಲ ! ನೀನಿನ್ನ ಜೀವನದಲ್ಲಿ ಮುಂದೆ ಎಂದೆಂದೂ ಬಿಲ್ಲು ಹಿಡಿಯದೇ ಹೋದರೂ, ನಾನು ಎಲ್ಲಾದರೂ ಬಿಲ್ಲು ಹಿಡಿದಾಗೆಲ್ಲ...ಎಲ್ಲಿಯೋ ಕಾಡಿನ ಒಂದು ಮೂಲೆಯಲ್ಲಿರುವ ನಿಷಾದನೊಬ್ಬ

'ತನಗೆ ಬೇಕೆಂದರೆ ನನಗಿಂತ ಉತ್ತಮವಾಗಿ ಬಿಲ್ಲು ಬಾಣ ಹಿಡಿಯಬಲ್ಲ'...ಎಂಬ ಅಳುಕು ಕೊರೆದೇ ಕೊರೆಯುವುದು, ನನ್ನ ಅಂತರಾಳದಲ್ಲಿ! ಅದು ನಿಜವಾದ ಅಪ್ರತಿಮತೆಯೆ? ಆ ಅಳುಕು ಇರುವವರೆಗೆ ನಾನೆಂತು ಅಪ್ರತಿಮ ಧನುರ್ಧರ ನೆನಿಸಿಕೊಂಡೇನು? ಆದರಿಂದ ಈ ನಿನ್ನ ವಚನ...ಗುರುಗಳು ಸುಳ್ಳಾಡಿದರೆಂಬ ಅಪಕೀರ್ತಿಯನ್ನು ತೊಡೆಯದು...

ಏಕಲವ್ಯ—(ಅಡ್ಡಮಾತಾಗಿ) ತಡೆ, ಮುಚ್ಚು ಬಾಯಿ!

ಅರ್ಜುನ—(ಹುಚ್ಚೆದ್ದು) ತಡೆ, ಯಾಕೊ? ನಾನು ಯಾಕೆ ಬಾಯನ್ನು ಮುಚ್ಚಲಿ? ನಾನು ಹೇಳಿದ್ದು ಸತ್ಯವಾದ ಮಾತು. ಜಗತ್ತಿಗೆಲ್ಲ ತಿಳಿಯಲಿ ಈ ಸತ್ಯ...ನಿಜವನ್ನಾಡಲು ನಿನಗೆ ಭಯವಿಲ್ಲವೆಂದೆಯಲ್ಲವೆ ನೀನು? ಈಗೇಕೆ ಆದರ ಭಯ ನಿನಗೆ? ನಾನೆಲ್ಲರಿಗೂ ಹೇಳುತ್ತೇನೆ...ಪ್ರತಿಯೊಬ್ಬನಿಗೆ ಸಾರಿ ಸಾರಿ ಹೇಳುತ್ತೇನೆ! ಯಾರೂ ನನ್ನನ್ನು ತಡೆಯಲಾರರು!

ಏಕಲವ್ಯ—(ಹತಾಶನಾಗಿ ಕೈ ಮಸೆಯುತ್ತ) ತ ಡೆ ಯು ವ ರು — ಯಾರಾದರೂ—ಹೇಗಾದರೂ—ಇವನನ್ನು ತಡೆಯಲೇ ಬೇಕು!

ಅರ್ಜುನ—(ಅಸೂಯೆಯಿಂದ ಮೈಮರೆತು) ನನ್ನ ತಡೆಯುವುದೆ? ...ನನ್ನನ್ನ? ಪ್ರಪಂಚಕ್ಕೇ ಈ ಸತ್ಯ ಬಿತ್ತರಿಸುವುದನ್ನ...ಈ ಘನವಂತ ದ್ರೋಣಾಚಾರ್ಯರು ವಚನ ಭ್ರಷ್ಟರಾದರೆಂದು?...ನೋಡುತ್ತೇನೆ...ಯಾರು ನನ್ನನ್ನು ತಡೆಯುತ್ತಾರೋ...ಬರಲಿ ನೋಡುತ್ತೇನೆ?

ಏಕಲವ್ಯ—ತಡೆಯುವರು, ತಡೆಯಬಲ್ಲರು: ಯಾರಾದರೊಬ್ಬರು ನಿನ್ನನ್ನು ತಡೆಯಲೇಬೇಕು! (ಭಾವಾವೇಶನಾಗಿ) ಗುರುಗಳೆ! ಹೇಳಿರೀಗ! ನಾನು ಧನುರ್ವಿದ್ಯೆಯನ್ನು ಕಲಿತಿರದಿದ್ದರೆ ಇವನು ಅಪ್ರತಿಮನಾಗಬಹುದಿತ್ತೆ? ನಿಜವಾಗಿ?

ದ್ರೋಣ—ಹೌದು ವತ್ಸ...ಆದರೇ...

ಏಕಲವ್ಯ—ಆಗ ನೀವು ಕೊಟ್ಟ ಮಾತು ಉಳಿಸಿಕೊಳ್ಳುತ್ತಿದ್ದಿರಲ್ಲವೇ?

ದ್ರೋಣ—ಹೌದು ಮಗೂ...ಆದರೇ...

ಏಕಲವ್ಯ—(ಕಿಡಿಗಾರುತ್ತ ಹಲ್ಲು ಕಚ್ಚಿ ನಿರ್ಧಾರ ಸ್ವರದಿಂದ) ಗುರುಗಳೇ! ನೀವು ವಚನವನ್ನು ಪಾಲಿಸಿಯೇ ಪಾಲಿಸುವಿರಿ! ಅವನ ಬಾಯನ್ನು ಎಂದೆಂದಿಗೂ ನಾನು ಮುಚ್ಚುವೆ!

[ಮೂರ್ತಿಯೆಡೆಗೆ ತೆರಳಿ ಬಲಗೈಯನ್ನು ಪಾದಗಳ ಬಳಿ ಪೀಠದ ಮೇಲಿಟ್ಟು, ಬತ್ತಳಿಕೆಗೆ ಎಡಗೈಚಾಚಿ ಅರ್ಧಚಂದ್ರಾಕಾರದ ಬಾಣವೊಂದಾರಿಸಿ ತೆಗೆದು, ಸ್ಥೈರ್ಯದಿಂದ ಎಡಗೈಯ ಒಂದೇ ಪೆಟ್ಟಿಗೆ ಬಲಗೈ ಹೆಬ್ಬೆರಳು ಕತ್ತರಿಸುವನು. ಚಿಮ್ಮಿದ ರಕ್ತ ಲೆಕ್ಕಿಸದೆ, ಕೊಯ್ದ ಹೆಬ್ಬೆರಳನ್ನೆರಡು ಕೈಗಳಿಂದಲೂ ಎತ್ತಿತಂದು ಗುರುಗಳ ಪಾದಕ್ಕೆ ಸಮರ್ಪಿಸಿ ಮೌನನಾಗಿ ನಿಲ್ಲುವನು. ಏಕಲವ್ಯನ ಈ ಚಲನವಲನಗಳು ಮಿಂಚಿನಂತೆ ನಡೆದು, ಆ ಇಬ್ಬರೂ ಇವನನ್ನು ತಡೆಯಲು ಸಾಧ್ಯವಿಲ್ಲದಂತಿರುವುದು]

ದ್ರೋಣ—(ದಿಗ್ಭ್ರಮೆಗೊಂಡು ನೊಂದು) ಅಯ್ಯೋ...ಏನು ಮಾಡಿದೆ ಮಗು...ಏನು ಮಾಡಿದೆ...ಏನು ಮಾಡಿದೆ?

ಏಕಲವ್ಯ—(ಉಕ್ಕಿ ಬರುತ್ತಿರುವ ಕಣ್ಣೀರನ್ನು ಕಷ್ಟದಿಂದ ತಡೆದು ಹೆಬ್ಬೆರಳ ಕಡೆ ಕೈ ತೋರಿ) ಏನು ಮಾಡಿದೆನೆ ಗುರುವರ್ಯ!...ಏನು ಮಾಡಿದೆನೆ? ನಿಮ್ಮಲ್ಲಿ ನನಗಿರುವ ಭಕ್ತಿ ಪ್ರೇಮ ವಿಶ್ವಾಸಗಳ ಕುರುಹಾಗಿ ಹೆಚ್ಚೇನನ್ನೂ ಮಾಡಿಲ್ಲ ಗುರುವೆ! ನನ್ನ ಗುರುದಕ್ಷಿಣೆ ಮಾತ್ರ ಅರ್ಪಿಸಿದ್ದೇನೆ ಅಷ್ಟೆ...! ವರ್ಷಗಳ ಹಿಂದೆ ಗುರುಗಳೇ! ನಾನು ನಿಮ್ಮಲ್ಲಿಗೆ ಬಂದಾಗ... ಈ ಘನವಂತ ಆರ್ಯ, ಅರಸುಕುವರ, ನನ್ನೆಡೆಗೆ ಕೈ ತೋರಿ ಹೇಳಿದ... "ನೀನೊಬ್ಬ ನಿಷಾದ...ಗುರುದಕ್ಷಿಣೆ ಕೊಡಲಾಗದ ದರಿದ್ರ..." ಎಂದು. (ಅರ್ಜುನನಿಗೆ) ನಾನದೇ ದರಿದ್ರ ನಿಷಾದನೇ ಈಗಲೂ...ಆದರೂ...ಆದರೂ ...ನನ್ನ ಗುರುದಕ್ಷಿಣೆ...ಅಷ್ಟೈಶ್ವರ್ಯವಲ್ಲದಿದ್ದರೂ...ನೀನು...ನಿನ್ನಂಥವರು, ನಮ್ಮ ಗುರುಗಳ ಮಹಿಮೆಗೆ ಕಳಂಕ ತೊಡೆವವರು...ಅವರ ಬಾಯಿ ಮುಚ್ಚಿಸುವಷ್ಟು ಉಚಿತವಾಗಿದೆ...ನಮ್ಮ ಗುರು...ಈ ಈಗ ತಮ್ಮ ಮಾತು ಉಳಿಸಿಕೊಂಡಿದ್ದಾರೆ...ಈಗ ನೀನು ನಿಸ್ಸಂದೇಹವಾಗಿ ಜಗತ್ತಿನಲ್ಲೆಲ್ಲ ಅಪ್ರತಿಮ ಧನುರ್ಧರ...ನಿಶ್ಚಿಂತನಾಗಿರು...(ಕೊಯ್ದ ಕೈ ತೋರಿ) ನೋಡು... (ಬಿಲ್ಲಿಗೆ ಬಾಣ ಹೂಡಲೆತ್ನಿಸಿ ವಿಫಲನಾಗಿ ಬಾಣವನ್ನು ಜಾರಿಬಿಟ್ಟು ಅಳುತ್ತ) ನಾನು

ಬಿಲ್ಲು ಹಿಡಿದು ಬಾಣ ಹೂಡಬೇಕೆಂದರೂ ಆಗದು...ಈಗ ಆಗದು, ಗುರುಗಳೆ! ಈಗ ಆಗದು! (ಅಳುವನ್ನು ಕಷ್ಟದಿಂದ ತಡೆವನು. ದ್ರೋಣರಿಗಂತೂ ದುಃಖ ತಡೆಯದೆ ಬೇರೆಡೆ ಮೊಗದಿರುಹುವರು. ಅರ್ಜುನನಿಗೂ ದುಃಖ ತಟ್ಟಿ ಕರುಣಾಜನಕ ದನಿಯಿಂದ)

ಅರ್ಜುನ—ಎಂಥ ಧೀರವಾದ ಕೆಲಸ ಮಾಡಿದೆ? **ಎಂಥ ಧೀರವಾದ ಕೆಲಸ!** ಇದಕಾಗಿ...ನಿನಗೆ ಪಶ್ಚಾತ್ತಾಪವಿಲ್ಲವಷ್ಟೆ?

ಏಕಲವ್ಯ—ಪಶ್ಚಾತ್ತಾಪ?...ಯಾಕೆ? ಯಾಕಿರಬೇಕು ಪಶ್ಚಾತ್ತಾಪ? ಗುರುಗಳ ಸತ್ಯಸಂಧತೆಯನ್ನು ಉಳಿಸಲು ಮಾಡಿದ ಒಂದು ಕ್ಷುಲ್ಲಕ ಕೃತಿಯಿದು! ...ಅದಕೇಕೆ ಪಶ್ಚಾತ್ತಾಪ?... (ಮುಸಕಿದ್ದ ಮೊಬ್ಬು ಹರಿದು ಏನೋ ಕಂಡಂತೆ ಭೀತನಾಗಿ) ಅಯ್ಯೋ...ನನ್ನ ಜಿಂಕೆಗಳನ್ನೇ ಮರೆತಿದ್ದೆನಲ್ಲ ... ಪಶ್ಚಾತ್ತಾಪ! ಈ ಹುಚ್ಚು ಕೆಲಸ ಮಾಡಿದ್ದಕ್ಕಾಗಿ ಯಾವಜ್ಜೀವವೂ ಕ್ಷಣಕ್ಷಣಕ್ಕೂ, ನನಗೆ ಪಶ್ಚಾತ್ತಾಪ! ಜಿಂಕೆ ನರಳಿದಾಗೊಮ್ಮೆ, ಹುಲ್ಲೆ ಸಾವಿನ ಚೀತ್ಕಾರವನ್ನು ಕಿರಿಚಿದಾಗೊಮ್ಮೆ ನನ್ನ ಮರಣದ ಚೀತ್ಕಾರದಂತೆಯೆ ಪ್ರತಿಧ್ವನಿಸುವುದು ನನ್ನ ಪಶ್ಚಾತ್ತಾಪ! ಹಿಂಸೆಗೊಳಗಾಗಿ ಗಾಯಗೊಂಡು ಛಿನ್ನಭಿನ್ನವಾಗಿ ಬಿದ್ದ ಹುಲ್ಲೆ ಜಿಂಕೆಗಳ ಅವಶೇಷವನ್ನು ನೋಡಿದಾಗೊಮ್ಮೆ ನನ್ನ ಶರೀರದಿಂದ ನನ್ನ ಹೃದಯವನ್ನೇ ಕೀಳುತ್ತಿರುವಂತೆ ವೇದನಾಮಯವಾಗಿ ನಿಲ್ಲುವುದು ನನ್ನ ಪಶ್ಚಾತ್ತಾಪ! ಪಶ್ಚಾತ್ತಾಪ?...ಖಂಡಿತ...ಎಂತಹ ತಿಳಿಗೇಡಿ ಕೆಲಸ ಮಾಡಿದೆ ನಲ್ಲಾ ಎಂದು ಸಾಯುವವರೆಗೆ ನನ್ನನ್ನು ಗೋಳಿಡಿಸುವುದು...ಈ ಪಶ್ಚಾತ್ತಾಪ.

ಅರ್ಜುನ—ಇದಕ್ಕೆ ಕಾರಣನಾದುದಕ್ಕೆ ನನಗೆ ವ್ಯಥೆಯಾಗಿದೆ... ನಿಜವಾಗಿ!

ಏಕಲವ್ಯ—ಅಯ್ಯೋ......ಸಾಕುಮಾಡಿ!......ದಯಮಾಡಿ ನನ್ನಷ್ಟಕ್ಕೆ ನನ್ನನ್ನು ಬಿಡಿ!

ದ್ರೋಣ—(ಅರ್ಜುನನನ್ನು ಹಿಂದೆಳೆದು ಬಲಗಡೆ ತೆರಳಲು ತಳ್ಳುತ್ತ ಹೊರಗೆ ಕಳಿಸಿ, ಏಕಲವ್ಯನ ಕಡೆ ತಿರುಗಿ ಅತ್ಯಂತ ದಯಾರ್ದ್ರದನಿಯಿಂದ) ದೇವರ ದಯೆ ಇರಲಿ, ವತ್ಸಾ, ಹೋಗಿಬರುವೆ.

ಏಕಲವ್ಯ—(ರಕ್ತ ಸಿಕ್ತ ಮೊಗವೆತ್ತಿ ತೀವ್ರ ನೋವು ತೋರಿ, ಹೃದಯ ವಿದ್ರಾವಕ ದನಿಯಲ್ಲಿ) ಗುರುವೆ, ನೀವೇ ಬಲ್ಲಿರಿ, ನಮ್ಮಿಬ್ಬರಲ್ಲಿ ಇನ್ನು ಹೋಗಿಬರುವ ಪ್ರಶ್ನೆಯೇ ಇಲ್ಲ...ಬಿಟ್ಟು ಹೋಗುವಂತಲೇ ಇಲ್ಲದಾಗ, ಹೋಗುವುದು ಹೇಗೆ? ಬರುವುದು ಎಲ್ಲಿಂದ?

[ದ್ರೋಣರು ಹೋಗುವರು. ಏಕಲವ್ಯ ಹೆಬ್ಬೆರಳನ್ನು, ಗಾಯವಾದ ಕೈಯನ್ನು ನೋಡಿ ಬಿಕ್ಕಿ ಬಿಕ್ಕಿ ಅಳುವನು. ಒಮ್ಮೆ ಹಾಗೆಯೇ ಸಾವರಿಸಿ ಹಲ್ಲುಕಚ್ಚಿ ಬಾಣವೊಂದೆಳೆದು ಬಿಲ್ಲಿಗೆ ಹೂಡಿ ಎಳೆಯಲೆತ್ನಿಸುವನು. ಸಾಗದದು. ದುಃಖ ಉಮ್ಮಳಿಸಿ, ಎಡದ ಕೈಯಿಂದ ಬತ್ತಳಿಕೆಯ ಬಾಣಗಳನ್ನೆಲ್ಲ ಒಂದೊಂದಾಗಿ ಎಳೆದು ಈಚೆಗೆಸೆಯುವನು . . .

ಹಠಾತ್ತನೆ ಅನೇಕ ಹುಲ್ಲೆಗಳ ಆಕ್ರಂದನ ಹುಯಿಲು ಕೇಳುವುದು. ಭಯದಿಂದ ಹತಾಶನಾಗಿ]

ಅಯ್ಯೋ! ದೇವರೆ! ನನ್ನ ಹುಲ್ಲೆ-ಜಿಂಕೆಗಳು ವಿಪತ್ತಿನಲ್ಲಿ ಸಿಕ್ಕಿವೆ. ನಾನು...ನಾನು ಏನನ್ನೂ ಮಾಡಲಾರೆನಾಗಿದ್ದೇನೆ. (ಗುರು ಹೋದ ಕಡೆ ನೋಡಿ) ಗುರುವೆ, ಗುರುವೆ, ಕೇಳಿಸಿತೆ ನನ್ನ ಹುಲ್ಲೆ-ಜಿಂಕೆಗಳ ಆಕ್ರಂದ? ಈಗಲಾದರೂ ತಿಳಿಯಿತೆ ನಾನು ಏನು ಮಾಡಿದೆನೆಂಬುದು? ನಿಮ್ಮ ಗುರುದಕ್ಷಿಣೆಗೆ ಕೊಟ್ಟ ಬೆಲೆ ಯಾವುದು ಗುರುವೆ? ವಿಶ್ವಾಸ ಭಂಗ! ಅವುಗಳ ಮೊಗ ಹೇಗೆ, ಹೇಗೆ ನೋಡಲೀಗ ಗುರುವೆ? ಆ ದೀನ ಕಣ್ಣುಗಳು ನನ್ನನ್ನು ನೋಡುತ್ತಿರುವಾಗ ನಾನು ಹೇಗೆ ಎದುರಿಸಲಿ? (ಕೆಲವೊಂದು ಹುಲ್ಲೆ ಮರಿಗಳು ಸಮೀಪಕ್ಕೆ ಬರಲು) ಹಾಂ—ನನ್ನನ್ನು ಮುಟ್ಟಬೇಡಿ. ನಾನು ದೂಷಿತ...ನನ್ನ ಮನಸ್ಸು ದೂಷಿತ, ನನ್ನ ಶರೀರ ದೂಷಿತ. ನಿಮ್ಮನ್ನು ಕೈಯಿಂದ ಮುಟ್ಟುವ, ಕಣ್ಣಿಂದ ನೋಡುವ ಯೋಗ್ಯತೆ ನನಗಿಲ್ಲ...ಈ ವಿಶ್ವಾಸ ಘಾತುಕನಿಗೆ ಇಲ್ಲ. ಒಂದೇ ಒಂದು ಕ್ಷಣ ನಿಮ್ಮನ್ನು ಮರೆತುಬಿಟ್ಟೆನಲ್ಲ! ಅದೊಂದು ಕ್ಷಣ, ನಿಮ್ಮನ್ನು ಪೂರ್ತಿಯಾಗಿ ನನ್ನ ಹೃದಯದಿಂದ ಹೊರ ದೂಡಿದೆನಲ್ಲ? ಹುಚ್ಚೆದ್ದು ನಿಂತ ಗುರುಭಕ್ತಿಯ ಆವೇಶದಲ್ಲಿ ಅವರಿಗೆ ದಕ್ಷಿಣೆಯಾಗಿ ಕೊಟ್ಟೆನಲ್ಲ!...ಏನನ್ನು ಕೊಟ್ಟೆ ಬಲ್ಲಿರಾ? ನನ್ನದಲ್ಲದುದನ್ನು—ನಿಮ್ಮ ಸೊತ್ತಾದುದನ್ನು...ಏನನ್ನು ಕೊಟ್ಟೆ ಬಲ್ಲಿರಾ?...ನನ್ನ ಧನುರ್ವಿದ್ಯೆಯ ಉದ್ದೇಶ

...ಪುರುಷಾರ್ಥ, ಅದನ್ನೇ ಕೊಟ್ಟುಬಿಟ್ಟೆ! ಗುರುಭಕ್ತಿಯಿಂದ ಉನ್ಮತ್ತನಾಗಿ ನಿಮ್ಮನ್ನು ಮರೆತುಬಿಟ್ಟೆ! ನಾನು ಮಾಡುತ್ತಿರುವುದು ನನಗೆ ತಿಳಿಯಲಿಲ್ಲ, ತಿಳಿದಿರಲೇ ಇಲ್ಲ...(ಗುರು ಹೊರಟ ಕಡೆ ನೋಡಿ) ಆದರೆ ಅವರಿಗೆ ಗೊತ್ತಿತ್ತು, ನನ್ನ ಗುರುವಿಗೆ ಗೊತ್ತಿತ್ತು. ಗೊತ್ತಿರಲೇಬೇಕಿತ್ತು. ಗೊತ್ತಿತ್ತು ಅವರಿಗೆ, (ಕೋಪವೇರುತ್ತ) ಅವರು ತಡೆಯಬೇಕಿತ್ತು ನನ್ನನ್ನು! ತಡೆಯಬೇಕಿತ್ತು... ಅವರು...ನನ್ನನ್ನು...ಹಾಂ?

[ಹುಚ್ಚೆದ್ದ ರೋಷದಿಂದ ಮೃಣ್ಮೂರ್ತಿಯ ಹತ್ತಿರ ಹೋಗಿ ಎದುರಿಗೆ ಸೆಟೆದು ನಿಂತು, ಮುಷ್ಟಿಗಳನ್ನು ಬಿಗಿದು ಮೇಲೆತ್ತಿ, ಔಡುಗಚ್ಚಿ ಕಿಡಿಕಾರುತ್ತ ಮೂರ್ತಿಯನ್ನು ಜಜ್ಜಿ ಬಿಡುವಂತೆ ಘರ್ಜಿಸುತ್ತ]

ಗುರುವೆ, ಗುರುವೆ, ನಿಮ್ಮೊಬ್ಬ ಕೊಬ್ಬಿದ ಶಿಷ್ಯನ ಸ್ವಾರ್ಥದ ದುರಾಸೆಯ ಚಿತೆಗೆ...ಜಗತ್ತಿನ ಎಲ್ಲ ಸಾಧುಪ್ರಾಣಿಗಳ ಸುರಕ್ಷಿತತೆಯನ್ನು ಹೇಗೆ ಆಹುತಿ ಮಾಡಿಸಿದಿರಿ ನನ್ನಿಂದ? ನಾನು ಹಾಗೆ ಮಾಡುವಾಗ ನೀವು, ನೀವು, ನಿಷ್ಕ್ರಿಯ ರಾಗಿ ನೋಡುತ್ತ ಹೇಗೆ ನಿಂತಿದ್ದಿರಿ? ಇಂತಹ ಕೆಲಸಕ್ಕೆ ನಿಮಗೆ ಧೈರ್ಯ ವಾದರೂ ಹೇಗೆ ಬಂದಿತು, ಗುರುವೆ! **ಹೇಗೆ, ಹೇಗೆ** ಬಂದಿತೂ ಊಉ?...

[ಇನ್ನೇನು, ಮೂರ್ತಿಯನ್ನು ಕುಟ್ಟಬೇಕೆಂದಿರುವಷ್ಟರಲ್ಲಿ ಮೂರ್ತಿಯ ಮಂದಸ್ಮಿತ ವದನದ ಏನೋ ಒಂದು ಅನಿರ್ವಚನೀಯ ಇವನನ್ನು ತಡೆ ದಂತಾಗಿ, ಮರುಗಳಿಗೆಯಲ್ಲೇ ತಾನೆಸಗಬಹುದಾಗಿದ್ದ ರಾಕ್ಷಸ ಕೃತ್ಯದ ಅರಿವಾಗಿ, ಭಯಭ್ರಾಂತನಾಗಿ]

ಅಯ್ಯೊ......ದೇವರೆ......ಏನು ಮಾಡುತ್ತಿದ್ದೇನೆ ನಾನು?

[ಶರೀರಾದ್ಯಂತ ಸಿಡಿಲೆರಗಿದಂತೆ ನಿಶ್ಚೇಷ್ಟನಾಗಿ ಕಾಲ್ಗಳು ಕುಸಿಸು ಮೂರ್ತಿಯ ಪಾದದಲ್ಲಿ ಬೀಳುವನು. ಹಾಗೇ ಮೆಲ್ಲನೆ ಎದ್ದು ಮೂರ್ತಿ ಯನ್ನು ನಿದಾನವಾಗಿ ತಬ್ಬಿ, ಹಣೆಯನ್ನು ಜಗುಲಿಯ ತಗ್ಗಿನಲ್ಲಿ ಹೊರಳಿ ಸುತ್ತ ತನ್ನಲ್ಲಿ ತಾನೇ ಅಳುವಿನ ಮಧ್ಯೆ ನುಡಿಯುವನು]

ಕ್ಷಮಿಸು ನನ್ನ, ಗುರುವೆ, ನನ್ನ ಎಚ್ಚರ ನನಗಿರಲಿಲ್ಲ...ಇರಲಿಲ್ಲ! ಆದರೆ ನಿಮಗೆ ಏನಾಗಿತ್ತು, ಗುರುವೆ? ನಿಮ್ಮ ಮನಸ್ಸಾದರೂ ಹೇಗೆ ಒಪ್ಪಿತು? ಹೇಗೆ ಒಪ್ಪಿತು ಗುರುವೆ? ಹೇಗೆ? ಹೇಗೆ? (ಸುಯ್ದು ಕುಸಿದು) ಹೇಗೆ...?

— ನಿ ದಾ ನ ವಾ ಗಿ ತೆ ರೆ —

ಮುಗಿಯಿತು

"To EACH his suffering!
All are men condemn'd alike to groan!
The TENDER FOR ANOTHER'S PAIN;
Th' UNFEELING for HIS OWN"

—GRAY

ಜಿ. ಎಸ್. ಆಮೂರ

ಕೈಲಾಸಂರ ಇಂಗ್ಲೀಷ್ ನಾಟಕಗಳು

(ಪುನರ್ವಿಮರ್ಶೆ)

೧

ದಿ. ಟಿ. ಪಿ. ಕೈಲಾಸಂ ಅವರು ಆಧುನಿಕ ಕನ್ನಡ ನಾಟಕದ ಜನಕರೆಂದೇ ಸದಾಕಾಲ ಸ್ಮರಿಸಲ್ಪಡುವರು. ಕನ್ನಡ ರಂಗಭೂಮಿಯನ್ನು ಆಕ್ರಮಿಸಿದ್ದ ಅವಾಸ್ತವಗಳಿಂದ ಅದನ್ನು ಮುಕ್ತಗೊಳಿಸಿ, ವಾಸ್ತವವಾದ ಹಾಗೂ ಆಧುನಿಕತೆಗಳ ಮೂಲಕ ತಮ್ಮ ನಾಟಕಗಳಿಂದ ಒಂದು ಸಾಹಿತ್ಯ–ಕ್ರಾಂತಿಯನ್ನೇ ಉಂಟುಮಾಡಿದ ಪ್ರತಿಭಾವಂತರು ಅವರು. "ಟೊಳ್ಳುಗಟ್ಟಿ", "ಹುತ್ತದಲ್ಲಿ ಹುತ್ತ", "ಸೂಳೆ" ಮುಂತಾದ ನಾಟಕಗಳಲ್ಲಿ—ಸಾಮಾಜಿಕ ಸಮಸ್ಯೆಗಳ ಮೇಲೆ ಸಂಪ್ರದಾಯದ ಬೆಳಕನ್ನು ಚೆಲ್ಲುವಲ್ಲಿ, ಮಾನವನ ಹೋರಾಟದ ಬಗೆಗಿನ ಅಂತಃಕರಣಪೂರಿತ ದೃಷ್ಟಿಯಲ್ಲಿ, ಹೆಚ್ಚು ಕಡಿಮೆ ಷೇಕ್ಸ್‌ಪಿಯರ್‌ನಂತೆ ಸಹಾನುಭೂತಿಯುತ ನಗೆಯನ್ನು ಉಕ್ಕಿಸುವಲ್ಲಿ, ಜನರಾಡುವ ಜೀವಂತ ಭಾಷೆಯ ಮೇಲಿನ ಆಚ್ಚರಿಗೊಳಿಸುವ ಪ್ರಭುತ್ವದಲ್ಲಿ ಹಾಗೂ ನಾಟಕದ ಉದ್ದೇಶಗಳಿಗೆ ಅದನ್ನು ಕಲಾತ್ಮಕವಾಗಿ ಉಪಯೋಗಿಸಿಕೊಳ್ಳುವಲ್ಲಿ—ಕೈಲಾಸಂ ಅಸಾಮಾನ್ಯವಾದ ಶಕ್ತಿಯನ್ನು ತೋರಿಸಿದ್ದಾರೆ. ಆದರೂ ಕೈಲಾಸಂರ ಪ್ರತಿಭೆ ಕನ್ನಡದಲ್ಲಿ ತನ್ನ ಸಂಪೂರ್ಣ ಅಭಿವ್ಯಕ್ತಿಯನ್ನು ಪಡೆಯಲಿಲ್ಲ. ಅವರ ಕೆಲವು ಉತ್ಕೃಷ್ಟ ಕೃತಿಗಳು ಇಂಗ್ಲೀಷಿನಲ್ಲಿವೆ ಹಾಗೂ ಆ ಬಗೆಯ ಕೃತಿಗಳನ್ನು ಅವರು ಕನ್ನಡದಲ್ಲಿ ಬರೆಯಲಿಲ್ಲ. ಈಗ ಪ್ರಕಟವಾಗಿರುವ ಅವರ ಇಂಗ್ಲೀಷ್ ನಾಟಕಗಳು ಐದು: *The Burden* (೧೯೩೩), *Fulfilment* (೧೯೩೩), *The Purpose* (೧೯೪೪), *Karna* (೧೯೪೬) ಮತ್ತು *Keechaka* (೧೯೪೯).* ಅವರು

*ಇವುಗಳಲ್ಲಿ **The Purpose** ನಾಟಕವನ್ನು "ಏಕಲವ್ಯ" ಎಂಬ ಹೆಸರಿನಲ್ಲಿ ಬಿ.ಎಸ್. ರಾಮರಾಯರೂ, **Keechaka** ವನ್ನು ಅದೇ ಹೆಸರಿನಲ್ಲಿ ಜಿ. ಪಿ. ರಾಜರತ್ನಂ ಅವರೂ ಕನ್ನಡಕ್ಕೆ ರೂಪಾಂತರಿಸಿದ್ದಾರೆ.

ಇನ್ನೂ ಅನೇಕ ನಾಟಕಗಳನ್ನು ರಚಿಸಿದ್ದಾಗಿಯೂ, ಕೈಲಾಸಂರ ಸ್ನೇಹಿತರು ಅವರ ಬಾಯಿಂದ ಅವನ್ನು ಕೇಳಿದ್ದಾಗಿಯೂ ತಿಳಿದುಬರುತ್ತದೆ. ಆದರೆ ಈಗ ಆ ನಾಟಕಗಳು ನಮ್ಮ ಪಾಲಿಗೆ ಇಲ್ಲವೆಂದೇ ನಂಬಬಹುದು. ಕೈಲಾಸಂರ ಈ ಇಂಗ್ಲೀಷ್ ನಾಟಕಗಳ ಮಹತ್ವ ಮೂರು ರೀತಿಯದಾಗಿದೆ. ಮೊದಲನೆಯದಾಗಿ, ಶ್ರೀ ಅರವಿಂದ, ಟಾಗೋರ್, ಭಾರತಿ ಸಾರಾಭಾಯಿ ಮತ್ತು ಹರೀಂದ್ರನಾಥ ಚಟ್ಟೋಪಾಧ್ಯಾಯ ಮೊದಲಾದವರ ನಾಟಕಗಳಂತೆ ಕೈಲಾಸಂರ ಇಂಗ್ಲೀಷ್ ನಾಟಕಗಳು ಇಂಗ್ಲೀಷಿನಲ್ಲಿ ರಚಿತವಾದ ಭಾರತೀಯ ನಾಟಕಕ್ಕೆ ತುಂಬ ಬೆಲೆಯುಳ್ಳ ಕಾಣಿಕೆಯಾಗಿವೆ. ಎರಡನೆಯದಾಗಿ, ಕೈಲಾಸಂರ ಜನಪ್ರಿಯ ಕನ್ನಡ ನಾಟಕಗಳಲ್ಲಿ ಕಾಣದ ವಸ್ತುಗಳೂ ಆಸಕ್ತಿಗಳೂ ಇಲ್ಲಿ ಅಭಿವ್ಯಕ್ತಿ ಪಡೆದಿರುವದರಿಂದ ಅವರ ಒಟ್ಟು ಸಾಹಿತ್ಯಕೃಷಿ ಹಾಗೂ ಜೀವನದರ್ಶನಗಳ ದೃಷ್ಟಿಯಿಂದ ಇವು ಬಹಳ ಮಹತ್ವದವಾಗಿವೆ. ಮೂರನೆಯದಾಗಿ, ಭಾಸ ಮೊದಲಾದವರಲ್ಲಿಯಂತೆ ಭಾರತೀಯ ಪುರಾಣ ಕಥೆಗಳ ಸ್ವತಂತ್ರ ಪುನರ್ರಚನೆಯ ದೃಷ್ಟಿಯಿಂದಲೂ ಇವು ಗಮನಾರ್ಹವಾಗಿವೆ.

ಕೈಲಾಸಂ ಇಂಗ್ಲೀಷಿನಲ್ಲಿ ಬರೆದ ಕಾರಣವೇನು ? ಹಾಗೂ ಅವರು ತಮ್ಮ ಕನ್ನಡ ನಾಟಕಗಳಿಗೆಲ್ಲ ಸಮಕಾಲೀನ ಸಾಮಾಜಿಕ ಜೀವನದಿಂದ ವಸ್ತುಗಳನ್ನು ಆರಿಸಿಕೊಂಡಿದ್ದರೆ, ಇಂಗ್ಲೀಷ್ ನಾಟಕಗಳಿಗೆ ಪುರಾಣಕಾವ್ಯಗಳನ್ನು ಆಶ್ರಯಿಸಿದ್ದೇಕೆ ? ಈ ಸಂಬಂಧದಲ್ಲಿ ಕಂದಾಡೆ ಕೃಷ್ಣ ಅಯ್ಯಂಗಾರರು, ಇಂಗ್ಲೀಷಿನಲ್ಲಿ ಬರೆದಷ್ಟು ಚೆನ್ನಾಗಿ ಹಾಗೂ ಸುಂದರವಾಗಿ ಕನ್ನಡದಲ್ಲಿ ತಮಗೆ ಬರೆಯಲಿಕ್ಕಾಗುವದಿಲ್ಲ ಎಂಬ ಭಾವನೆ ಕೈಲಾಸಂ ಅವರಿಗಿತ್ತು, ಎಂದಿದ್ದಾರೆ.* "ಪೂರ್ತಿಯಾಗಿ ಇಂಗ್ಲೀಶದಲ್ಲಿ ನಾಟಕಗಳನ್ನು ಬರೆದ ಈ ಕನ್ನಡ ನಾಟಕಕಾರರು ಪೂರ್ತಿಯಾಗಿ ಕನ್ನಡದಲ್ಲಿ ಮಾತ್ರ ಒಂದೂ ನಾಟಕ ಬರೆಯಲಿಲ್ಲ, ಎಷ್ಟೋ ಸಲ (ಉದಾ: awfully simple–simply awful) ಕನ್ನಡ ನಾಟಕಗಳಲ್ಲಿ ಕೇವಲ ಇಂಗ್ಲೀಶಕ್ಕೆ ಹೊಂದಿಕೊಳ್ಳುವ ಮಾತುಗಳನ್ನು ಹೇಳಿದ್ದಾರೆ" ಎಂದು ಶ್ರೀರಂಗರೂ ಒಂದೆಡೆ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.** ಕೈಲಾಸಂ ತಮ್ಮ ಕನ್ನಡ ನಾಟಕಗಳಿಗೆ ಉಪಯೋಗಿಸಿದ ಭಾಷೆಯನ್ನು 'ಕನ್ನಡಾಂಗ್ಲೊ' ಎಂದು

*"ನಾನು ಕಂಡ ಕೈಲಾಸಂ" ಪುಟ : ೮೦.

**ಬಿ. ಎಸ್. ರಾಮರಾಯರ "ಏಕಲವ್ಯ" ನಾಟಕದ ಮುನ್ನುಡಿ.

ಕರೆದರು; ಮತ್ತು ಅದು ಸುಧಾರಿಸಿದ ಮಧ್ಯಮ ವರ್ಗದವರಾಡುವ ಸಹಜ ಭಾಷೆ ಎಂದು ಸಮರ್ಥಿಸಿಕೊಂಡರು ಎನ್ನುವುದು ನಿಜ. ಆದರೆ ನಾಗತ್ತೆ, ಸಾತು ಮೊದಲಾದ ಕೆಲವು ವಿಶಿಷ್ಟ ಪಾತ್ರಗಳ ಬಾಯಲ್ಲಿ ಕೈಲಾಸಂ ಆಡಿಸಿರುವ ಕನ್ನಡವನ್ನು ಸರಿಯಾಗಿ ನೋಡಿದವರಿಗೆ, ಅವರ ಭಾಷೆಯನ್ನು ಕುರಿತು ಮಾಡ ಲಾಗಿರುವ ಟೀಕೆಗಳು ಅತಿರಂಜಿತವಾದುವೂ ಅನ್ಯಾಯದವೂ ಆಗಿವೆಯೆಂಬುದು ಮೇಲೆಯೇ ಕಾಣುತ್ತದೆ. ನಿಜವಾದ ಸಂಗತಿಯೆಂದರೆ, ತಾವು ಚಿತ್ರಿಸಿದ ಸಾಮಾಜಿಕ ವಸ್ತುಗಳಿಗೆ ಆ ಬಗೆಯ ಕಲಸುಮೇಲೋಗರದ ಭಾಷೆಯೇ ಸರಿ ಯೆಂದು ಕೈಲಾಸಂ ಭಾವಿಸಿದ್ದರೆ, ಪುರಾಣಕಾವ್ಯಗಳ ಮಹಾನ್ ವಸ್ತುಗಳಿಗೆ ಇಂಗ್ಲೀಷಿನ ಮೂಲಕ ಮಾತ್ರವೇ ನ್ಯಾಯಬಗೆಯುವದು ಸಾಧ್ಯವೆಂದು ಅವರು ಯೋಚಿಸಿದ್ದರು. ಕೈಲಾಸಂ ಆರು ವರ್ಷ ಕಾಲ ಇಂಗ್ಲಂಡಿನಲ್ಲಿ ಇದ್ದವರು; ಹಾಗೂ ಇಂಗ್ಲೀಷಿನಲ್ಲಿಯ ವೈವಿಧ್ಯಪೂರ್ಣವಾದ ನಾಟಕಗಳ ಪರಿಚಯ ಹೊಂದಿದವರು ಎಂಬುದನ್ನು ಈ ಸಂದರ್ಭದಲ್ಲಿ ಗಮನಿಸಬಹುದು. ಇನ್ನೂ ಒಂದು ಸಂಗತಿಯೆಂದರೆ–ತತ್ಕಾಲೀನ ಸಾಮಾಜಿಕ ಸಮಸ್ಯೆಗಳಿಗೆ ಸಂಬಂಧಿಸಿದ ಹಾಗೂ ಎಷ್ಟೋ ಸಲ ಒಡೆದು ಕಾಣುವಷ್ಟು ನೀತಿಬೋಧಕವಾಗಿದ್ದ ಕನ್ನಡ ನಾಟಕಗಳು ಕನ್ನಡ ಪ್ರೇಕ್ಷಕರಿಗಷ್ಟೇ ಸಾಕು; ಆದರೆ ಸರ್ವಕಾಲೀನ ಹಾಗೂ ವಿಶ್ವವ್ಯಾಪಿ ಪರಿಣಾಮವನ್ನುಳ್ಳ ಭಾರತೀಯ ಮಹಾ ಪುರಾಣ ಕಥೆಗಳ ತಮ್ಮ ಪುನಃಸೃಷ್ಟಿ ಹೆಚ್ಚು ವಿಶಾಲವಾದ ಪ್ರೇಕ್ಷಕವರ್ಗಕ್ಕೆ ಮುಟ್ಟಬೇಕು ಎಂಬುದೂ ಅವರ ಆಶಯವಾಗಿರಬಹುದು.

ಕೈಲಾಸಂ ಚಿಕ್ಕಂದಿನಿಂದಲೂ "ರಾಮಾಯಣ", "ಮಹಾಭಾರತ"ಗಳ ವಾತಾವರಣದಲ್ಲಿ ಬೆಳೆದವರು. ಅವುಗಳ ಜೀವಂತ ಅಸ್ತಿತ್ವ ಅವರ ಕಣ್ಣಿಗೆ ಕಟ್ಟಿ ದಂತಿತ್ತು:

> "These scenes and words you'll see and hear
> I've seen and heard before;
> As king or priest, poltroon or peer,
> Somewhere...somewhen of yore"*

ವಿ. ಕೃ. ಗೋಕಾಕರು ಕೈಲಾಸಂ ಜೊತೆಗಿನ ತಮ್ಮದೊಂದು ಭೇಟಿಯ

*The Purpose ನಾಟಕದ ಆರಂಭದಲ್ಲಿ

ಬಗೆಗೆ ಹೇಳುತ್ತ, 'ಅಲ್ಲಿ ನೋಡಿ!' ಎಂದು ಕೈಲಾಸಂ ಒಮ್ಮೆಲೆ ಕುಳಿತ ಕುರ್ಚಿಯಿಂದೆದ್ದು ಭರತನು ಕೈಕೆಯಿಗೆ ಭೆಟ್ಟಿಯಾದ ದೃಶ್ಯವನ್ನು ಆಡಿ ತೋರಿಸಿದ ಪ್ರಸಂಗವನ್ನು ಸ್ಮರಿಸಿದ್ದಾರೆ.* ಒಂದು ಸಲ ಕೈಲಾಸಂ ತಮ್ಮ ಗೆಳೆಯರಿಗೆ ಹೇಳಿದರಂತೆ: "ಅವರು (ಪುರಾಣಕಾವ್ಯಗಳ ಕರ್ತೃಗಳು) ಹೇಗೆ ರಚಿಸಿದರೆಂಬುದು ನನಗೆ ತಿಳಿಯದು. ನನ್ನ ಕಣ್ಣಿಗೆ ಕಟ್ಟಿದ್ದನ್ನು ಹಾಗೆಯೇ ಹೇಳುತ್ತಿದ್ದೇನೆ. ನನ್ನ ಸ್ವಂತರಚನೆ ಮಾಡುವಷ್ಟು ನನಗೆ ಬುದ್ಧಿಯೂ ಇಲ್ಲ, ಶಕ್ತಿಯೂ ಇಲ್ಲ. ಅವು ನಡೆದಂತೆ ಇತರರಿಗೆ ಹೇಳುವ ಶಕ್ತಿಯನ್ನು ಮಾತ್ರ ನನ್ನ ಈ ಜನ್ಮ ಸಂಪಾದಿಸಿಕೊಂಡಂತಿದೆ."** ಕೈಲಾಸಂರಿಗೆ ಪುರಾಣಕಾವ್ಯಗಳಲ್ಲಿದ್ದ ಆಸಕ್ತಿಗೆ ಮಾನವ ಜಗತ್ತಿನಲ್ಲಿ ಮಹತ್ತನ್ನು ಹುಡುಕಲು ಅವರು ಜೀವಮಾನದುದ್ದಕ್ಕೂ ನಡೆಸಿದ ಪ್ರಯತ್ನವೇ ಕಾರಣವಾಗಿತ್ತು. "ಮನುಷ್ಯ ಸ್ವಭಾವದಲ್ಲಿ ಮಹಾಗುಣವನ್ನರಸುವ ಪ್ರವೃತ್ತಿ ಕೈಲಾಸಮಿಗೆ ಸಹಜವಾಗಿತ್ತು... ಭೀಷ್ಮ, ದ್ರೋಣ, ಏಕಲವ್ಯ, ಕರ್ಣ ಇಂಥ ಮಹಾವೀರರ ಅಂತಸ್ಸತ್ತ್ವವನ್ನು ಕಂಡುಕೊಳ್ಳಬೇಕೆಂಬುದು ಆತನಿಗಿದ್ದ ಹಂಬಲ. ಹಾಗೆಯೇ 'ತಾವರೆಕೆರೆ'ಯ ಕಥಾವಳಿಯಲ್ಲಿ ಆತನು ಸಾಮಾನ್ಯ ಬಡಜನದಲ್ಲಡಗಿರುವ ದೊಡ್ಡತನಗಳನ್ನು ಕಂಡುಕೊಂಡಿದ್ದಾರೆ" ಎಂದಿದ್ದಾರೆ ಡಿ.ವಿ.ಗುಂಡಪ್ಪನವರು.*** ಶುದ್ಧವಾದುದನ್ನು, ಚೆಲುವಾದುದನ್ನು ಹೆಚ್ಚು ಚೆನ್ನಾಗಿ ನೋಡಲೆಂದೇ ಕೈಲಾಸಂ ಅನೇಕ ಸಲ ಬೇಕಂತಲೇ ತಮ್ಮ ಸುತ್ತ ಹೊಲಸಾದ, ಅಸಹ್ಯವಾದ ವಾತಾವರಣವನ್ನು ನಿರ್ಮಿಸಿಕೊಳ್ಳುತ್ತಿದ್ದರು. "ಮನುಷ್ಯ ಗಟಾರದ ದಂಡೆಯುಗುಂಟ ಓಡಾಡುವ ಜೀವಿಯಾಗಬೇಕು. ಅಲ್ಲೇ ಕುಳಿತು ಆಕಾಶವನ್ನು, ಸೂರ್ಯನನ್ನು, ಸುತ್ತಲಿನ ಜಗತ್ತನ್ನು ಕಣ್ಣು ತೆರೆದು ನೋಡಬೇಕು" ಎಂಬುದು ಅವರ ಅಭಿಪ್ರಾಯವಾಗಿತ್ತು.****

ಕೈಲಾಸಂ ಅವರಿಗೆ "ಮಹಾಭಾರತ"ದಷ್ಟೇ "ರಾಮಾಯಣ"ದ್ದೂ ಆತ್ಮೀಯ ಪರಿಚಯವಿತ್ತು. ಆದರೆ ಅವರ ಪ್ರಕಟಿತ ನಾಟಕಗಳೆಲ್ಲ—*The Burden*

---

*"ಕೈಲಾಸಂ ದರ್ಶನ," ಸಂ: ಕೆ. ವಿ. ಸುಬ್ಬಣ್ಣ, ೧೯೫೦, ಪುಟ: ೧೦೭, ಸು. ರಂ. ಎಕ್ಕುಂಡಿಯವರು ಉಲ್ಲೇಖಿಸಿದ್ದು.

**ಅದೇ, ಪುಟ: ೨೨, ಬಿ. ಎಸ್. ರಾಮರಾಯರಿಂದ ಉಲ್ಲೇಖಿತ.

***"ಶ್ರೀ ಕೈಲಾಸಂ ಅವರ ಸ್ಮರಣೆ", ಕೆ.ವಿ.ಅಯ್ಯರ, ೧೯೫೨, ಪುಟ: XII

****ಅದೆ, ಪುಟ: ೭೨.

ಒಂದನ್ನು ಬಿಟ್ಟು—ಮಹಾಭಾರತದಿಂದಲೇ ಸ್ಫೂರ್ತವಾಗಿವೆ. ಈ ವಿಶೇಷ ಪ್ರಾಶಸ್ತ್ಯಕ್ಕೆ ಕೈಲಾಸಂರೇ ಒಂದೆಡೆ ವಿವರಣೆ ಕೊಟ್ಟಿದ್ದಾರೆ: "ಮಹಾಭಾರತದ ವ್ಯಕ್ತಿಗಳೆಲ್ಲಾ ಮಾನವ ವ್ಯಕ್ತಿಗಳು. ನಮ್ಮ ರಾಗ, ದ್ವೇಷ, ಗುಣ ಇವೆಲ್ಲವೂ ಅವರಲ್ಲೂ ಇವೆ. ಆದುದರಿಂದ ಅವರನ್ನು ರೇಖಿಸುವುದು ಸಾಧ್ಯ. ಆದರೆ ರಾಮಾಯಣದ ವ್ಯಕ್ತಿಗಳೆಲ್ಲಾ ಆಧ್ಯಾತ್ಮಿಕ ರೂಪಿಗಳು. ಎಲ್ಲರೂ ಆತ್ಮಜ್ಞಾನವನ್ನು ಸಾಧಿಸಿರುವವರು. ಶಬರಿ, ರಾವಣ, ವಾಲಿ, ಇಂದ್ರಜಿತ್, ರಾಮ, ಲಕ್ಷ್ಮಣ, ಕೈಕೇಯಿ: ಇವರೆಲ್ಲರೂ ಆತ್ಮಜ್ಞಾನಿಗಳು. ಹಾಗಾಗಿ ಅಲ್ಲಿ ಇಲ್ಲಿ ಕನಸು ಕಂಡ ಒಂದು ಶಬರಿ, ಒಂದು ಭರತನ ದೃಶ್ಯವನ್ನು ಚಿತ್ರಿಸಬಲ್ಲೆ. ನಾನಿನ್ನೂ ಪರಿಶುದ್ಧನಾಗಿ, ಆತ್ಮಜ್ಞಾನವನ್ನು ಸಂಪಾದಿಸಿದಾಗ, ಈ ವ್ಯಕ್ತಿಗಳನ್ನು ಮುಟ್ಟಬಹುದು. ಅಲ್ಲಿನತನಕ ರಾಮಾಯಣ ನನ್ನ ಬಾಬ್ತು ಅಲ್ಲ."*

೨

ಎಷ್ಟರಮಟ್ಟಿಗೆ ಕಲಾವಿದ ಅಪ್ರತಿಮ ವ್ಯಕ್ತಿಗಳನ್ನು ಸೃಷ್ಟಿಸುತ್ತಾನೆಂಬುದರ ಮೇಲೆ ಕಲೆಯ ಮಹತ್ತು ಅವಲಂಬಿಸಿದೆ ಎಂದಿದ್ದಾರೆ ಕೈಲಾಸಂ.** ಅವರ ಪ್ರತಿಯೊಂದು ಇಂಗ್ಲೀಷ್ ನಾಟಕದ ಕೇಂದ್ರವಾಗಿ ಒಬ್ಬೊಬ್ಬ ಪೌರಾಣಿಕ ಧೀಮಂತ ನಾಯಕನಿದ್ದಾನೆ. ಈ ನಾಯಕರು ಮೂಲ ಪುರಾಣ ಕಲ್ಪನೆಗಿಂತಲೂ ಹೆಚ್ಚು ಪರಿಶುದ್ಧರಾಗಿ, ಹೆಚ್ಚು ಶ್ರೇಷ್ಠರಾಗಿ ಮಾರ್ಪಟ್ಟಿದ್ದಾರೆ. *The Purpose* ಏಕಲವ್ಯನನ್ನು ಕುರಿತ ಎರಡಂಕಗಳ ನಾಟಕ. ಉದಾತ್ತನಾದ ನಿಷಾದ ಯುವಕನೊಬ್ಬನ ಕಥೆಯಿದು. ಏಕಲವ್ಯನಿಗೆ ತನ್ನ ಗುರುವಾದ ದ್ರೋಣನ ಬಗ್ಗೆ ಇರುವ ಗುರುಭಕ್ತಿ ಎಷ್ಟು ಗಾಢವಾದುದೋ, ತೋಳಗಳಿಂದ ಭಯವಿಹ್ವಲವಾಗಿರುವ ಕಾಡಿನಲ್ಲಿ ಜಿಂಕೆಗಳನ್ನು ಕಾಪಾಡಬೇಕೆಂಬ ಕರುಣೆಯೂ ಅಷ್ಟೇ ಗಾಢವಾಗಿದೆ. ಏಕಲವ್ಯನ ದುರಂತವಿರುವದು ಈ ಎರಡು ವಿಧೇಯತೆಗಳ ನಡುವೆ ನಡೆಯುವ ದ್ವಂದ್ವದಲ್ಲಿ. ತನ್ನ ಗುರುವಿನ ಗೌರವವನ್ನುಳಿಸಲು ಏಕಲವ್ಯ ತನ್ನ ಕೈಬೆರಳನ್ನೇ ಬಲಿಗೊಡಬೇಕಾಗುತ್ತದೆ. ಈ ಮಹಾತ್ಯಾಗದಿಂದಾಗಿ ಕಾಡು ಪ್ರಾಣಿಗಳ ಮುಂದೆ ಅವನು ನಿರ್ಬಲನಾಗಿ ತೋಳಗಳ ನಿರ್ಮೂಲನ ಮಾಡ

*"ಕೈಲಾಸಂ ದರ್ಶನ", ಪುಟ: ೧೦. ಡಾ. ಶಿವರಾಮುರಿಂದ ಉಲ್ಲೇಖಿತ.

**೧೯೪೫ರಲ್ಲಿ ಮದ್ರಾಸಿನಲ್ಲಿ ನಡೆದ ಕನ್ನಡ ಸಾಹಿತ್ಯಸಮ್ಮೇಳನದ ಅಧ್ಯಕ್ಷ ಭಾಷಣ

ಬೇಕೆಂಬ ತನ್ನ ಜೀವನದ 'ಉದ್ದೇಶ' (Purpose) ಕ್ಕೆ ತಾನೇ ದ್ರೋಹಬಗೆಯು ತ್ತಾನೆ. ಇದಕ್ಕಿಂತಲೂ ಹೆಚ್ಚು ಮಹತ್ವಾಕಾಂಕ್ಷೆಯ ಐದಂಕಿನ ನಾಟಕ *Karna* ಮಹಾಭಾರತದ ಅತ್ಯಂತ ದುರಂತ ಪಾತ್ರವನ್ನು ನಮ್ಮೆದುರು ಇಡುತ್ತದೆ. ಈ ನಾಟಕ ಪರಶುರಾಮನ ಉಗ್ರಶಾಪದಿಂದ ಆರಂಭವಾಗಿ, ಕರ್ಣನು ಮಹತ್ವದ ಪಾತ್ರವಹಿಸುವ ಮಹಾಭಾರತದ ಮುಖ್ಯ ಘಟನೆಗಳ ಮೂಲಕ ಹಾಯ್ದು, ಅರ್ಜುನ–ಕೃಷ್ಣರ ಕೈಯಲ್ಲಿ ಕರುಣಾಜನಕ ರೀತಿಯಲ್ಲಿ ಕೊನೆಗೊಳ್ಳುವವರೆಗಿನ ಕರ್ಣನ ಕಥೆ ಹೇಳುತ್ತದೆ. ಕರ್ಣನದು, ದೈವದ ಜೊತೆಗಿನ ಸೆಣಸಾಟದ ಸ್ವಂತದ ಅಂತಸ್ಸತ್ವ ಯಾವ ಉಪಯೋಗಕ್ಕೂ ಬಾರದೇ ಹೋದ ಮನುಷ್ಯನ ದುರಂತ. *The Burden* ರಾಮಾಯಣದಿಂದ ಎತ್ತಿಕೊಂಡ ಶಕ್ತಿಪೂರ್ಣವಾದ ಮನಕರಗಿಸುವ ಒಂದು ದೃಶ್ಯ. (ಬಹುಶಃ ಭಾಸನ ಸುಪ್ರಸಿದ್ಧ "ಪ್ರತಿಮಾ" ನಾಟಕದ ನಾಲ್ಕನೆಯ ಅಂಕದಿಂದ ಸ್ಫೂರ್ತವಾದುದು) ರಾಮನ ವನವಾಸ ನಿರ್ಗಮನ ಹಾಗೂ ದಶರಥನ ಸಾವಿನ ನಂತರ ಭರತ ಅಯೋಧ್ಯೆಗೆ ಹಿಂದಿರುಗಿದ ಮೇಲೆ ಆರಂಭವಾಗುವ ಈ ಕಥೆ ಭರತ ನಿಧಾನವಾಗಿ ತನ್ನ ಮೇಲಿನ ಹೊಣೆಯನ್ನರಿತು ಕೊಳ್ಳುವದನ್ನು ನಾಟ್ಯೀಕರಿಸುತ್ತದೆ. *Fulfilment* ಒಂದು ಸಣ್ಣ ನಾಟಕ. ಇದು ಏಕಲವ್ಯನ ಸಾವಿನ ವಿಷಯವನ್ನು ಕುರಿತದ್ದಾದರೂ, ನಿಜವಾಗಿ ಕೃಷ್ಣನೇ ಇಲ್ಲಿನ ಮುಖ್ಯ ಪಾತ್ರ. ಏಕಲವ್ಯನನ್ನು ಕೊಲ್ಲುವಾಗ, ಅವನ ಸಾವಿನ ಸುದ್ದಿಯಿಂದ ಏಕಲವ್ಯನ ತಾಯಿಗೆ ಒಂದು ಕ್ಷಣವೂ ನೋವಾಗದಂತೆ ನೋಡಿ ಕೊಳ್ಳುವದಾಗಿ ಕೃಷ್ಣ ಕೊಟ್ಟಿದ್ದ ಆಶ್ವಾಸನ ನೆರವೇರಿದ ಘೋರ ಕಥೆ ಇದು. ಈ ನಾಟಕದ ವಸ್ತು ಯುಗಗಳಷ್ಟು ಹಳೆಯದಾದ ಗುರಿ ಹಾಗೂ ಗಮ್ಯಗಳ ನಡುವಿನ ಸಂಬಂಧವನ್ನು ವಿವೇಚಿಸುತ್ತದೆ. ಹೆಚ್ಚಿನ ಅರ್ಥದಲ್ಲಿ, ಎಂದರೆ ದೈವೇಚ್ಛೆ ಕೆಲಸ ಮಾಡುವ ಮಟ್ಟದಲ್ಲಿ, ಗಮ್ಯಕ್ಕಿಂತಲೂ ಗುರಿಯೇ ಮುಖ್ಯ ವಾದುದೆಂದು ನಾಟಕ ಒತ್ತಿಹೇಳುತ್ತದೆ. *Keechaka* ಮೊದಲು ಚಿತ್ರನಾಟಕ ವಾಗಿ ರೂಪಿತವಾದ ಕೃತಿ. ಇದು ಮಹಾಭಾರತದ ವಿರಾಟಪರ್ವದಲ್ಲಿ ಬರುವ, ಕೀಚಕ ಸೈರಂಧ್ರಿಯ ಮೇಲೆ ಆಶೆಪಟ್ಟು ಭೀಮನ ಕೈಯಲ್ಲಿ ಹತನಾದ ಕಥೆಯ ಅತ್ಯಂತ ಸ್ವತಂತ್ರವಾದ ಕಲ್ಪನೆಯ ಪ್ರತಿಸೃಷ್ಟಿ; ಪ್ರೇಮದ ಮಹತ್ವನ್ನು ಕುರಿತಾದ ಕೈಲಾಸಂರವರ ಕೊನೆಯ ಮಾತು.

ಈ ಎಲ್ಲ ಕೃತಿಗಳ ಹಿಂದೆಯೂ ಸಾಮಾನ್ಯವಾಗಿ ಇರುವ ಸ್ಫೂರ್ತಿ—

ಮನುಷ್ಯನ ದೊಡ್ಡತನ. ಏಕಲವ್ಯ, ಕರ್ಣ, ಕೃಷ್ಣ, ಭರತ, ಕೀಚಕ ಎಲ್ಲರೂ ಈ ಹಿರಿಮೆಯ ನಿದರ್ಶನಗಳು. ಕೈಲಾಸಂರ ಕಲ್ಪಕತೆ ಹಾಗೂ ಪರಿಪೂರ್ಣತೆಯ ಒತ್ತಾಸೆಯಿಂದಾಗಿ ಇವರಲ್ಲಿ ಕೆಲವರು ನಾಯಕರು ಮೂಲ ಪುರಾಣಕಾವ್ಯಗಳಲ್ಲಿಗಿಂತಲೂ ಹೆಚ್ಚು ಉದಾತ್ತವಾಗಿ ಕಾಣುತ್ತಾರೆ. ನಾಟಕಕಾರ ತಾನು ಅತ್ಯಂತ ಗೌರವದಿಂದ ಒಪ್ಪಿಕೊಳ್ಳುವ ತತ್ವ ಹಾಗೂ ಮೌಲ್ಯಗಳನ್ನು ಈ ನಾಯಕರಿಗೆ ಅನ್ವಯಿಸಿದ್ದರಿಂದಾಗಿ ಏಕಲವ್ಯ, ಕರ್ಣ, ಕೀಚಕರಂತೂ ಸಂಪೂರ್ಣವಾಗಿ ಹೊಸ ಕಲ್ಪನೆಗಳಾಗಿ ಪರಿಣಮಿಸಿದ್ದಾರೆ. ಏಕಲವ್ಯನ "ಇಡಿಯ ಜಗತ್ತಿನ ಎಲ್ಲ ಅರಣ್ಯಗಳನ್ನೂ ಹಿಂಸ್ರ ತೋಳಗಳಿಂದ ಮುಕ್ತಗೊಳಿಸಬೇಕೆಂಬ ನಿರ್ಧಾರ", ಕೆಲವು ಸಲ ಇಂಥ ತೋಳಗಳ ಬಗೆಗೂ ಉಕ್ಕುವ ಅವನ ಅಪಾರ ಕರುಣೆ ("ಬಹುಶಃ ನಿನಗೂ ಮನೆಯಲ್ಲಿ ದಾರಿ ಕಾಯುವ ಪುಟ್ಟ ಮರಿಗಳಿದ್ದಿರಬಹುದು"), ಅವನು ಗುರುವಿಗಾಗಿ ಮಾಡುವ ಮಹಾ ತ್ಯಾಗವನ್ನೂ ಪಾಪವನ್ನಾಗಿ ಪರಿವರ್ತಿಸುವ ಅವನ 'ಉದ್ದೇಶ', ತಾಯಿಯ ಬಗ್ಗೆ ಅವನಿಗಿರುವ ಗಾಢವಾದ ಪ್ರೇಮ–ಇವೆಲ್ಲವೂ ಅವನ ಪಾತ್ರಕ್ಕೆ ವೈಶಿಷ್ಟ್ಯವನ್ನೂ ವೈಯಕ್ತಿಕತೆಯನ್ನೂ ತಂದುಕೊಟ್ಟಿವೆ. ಈ ವಿವರಗಳಿಗೆಲ್ಲ ಮೂಲಕಾವ್ಯದಲ್ಲಿ ಹೆಚ್ಚಾದರೆ ಕೆಲವು ಅಸ್ಪಷ್ಟ ಸೂಚನೆಗಳು ಮಾತ್ರ ಸಿಗಬಹುದು. ಕರ್ಣನ ಪಾತ್ರದಲ್ಲಿ ಕೈಲಾಸಂ ಮಾಡಿಕೊಂಡಿರುವ ಬದಲಾವಣೆ ಇದಕ್ಕೂ ಹೆಚ್ಚು ಒಡೆದು ಕಾಣುವಂತಿವೆ. ಕರ್ಣ ಇಲ್ಲಿ "ಅಕಳಂಕಿತ ಪೌರುಷ"ದ ಮೂರ್ತರೂಪವಾಗಿದ್ದಾನೆ. ತಮ್ಮ ನಾಯಕನ ನಿಷ್ಕಳಂಕ ಮೂರ್ತಿಯನ್ನು ನಿರ್ಮಿಸುವದಕ್ಕಾಗಿ ಕೈಲಾಸಂ ಮೂಲದ ಕೆಲವು ಸಂಗತಿಗಳನ್ನು ಹತ್ತಿಕ್ಕಿದ್ದಾರೆ; ಜೊತೆಗೆ ಹೊಸ ಸಂಗತಿಗಳನ್ನು ಹುಟ್ಟಿಸಿಕೊಂಡಿದ್ದಾರೆ. ಮಹಾಭಾರತದಲ್ಲಿ ದುರ್ಯೋಧನ ಪಾಂಡವರ ಜೊತೆಗಿನ ತನ್ನ ಜಗಳದಲ್ಲಿ ಕರ್ಣನ ಸಾಮರ್ಥ್ಯದ ಮೇಲೆ ನೆಚ್ಚಿಕೊಂಡಿದ್ದಾನೆ. ನಕುಲ ಹೇಳುವಂತೆ "ಎಲ್ಲ ವೈರ–ಯುದ್ಧಗಳಿಗೆ ಕರ್ಣನೇ ಮೂಲ"ವಾಗಿದ್ದಾನೆ. ಸಭೆಯಲ್ಲಿ ದ್ರೌಪದಿಯ ಮಾನಭಂಗದ ಕಾಲಕ್ಕೆ ಕರ್ಣನೇ ಎಲ್ಲರಿಗಿಂತಲೂ ಕಠೋರ ಮಾತುಗಳನ್ನಾಡುತ್ತಾನೆ. ("ಧಿಕ್ ಪಾಂಡವಾನ್, ಅಪತಿಸ್ತ್ವಂ ಹಿ ಕೃಷ್ಣೇ"; "ದಾಸಭಾರ್ಯಾಸಿ"; "ಸ್ವಯಂ ದಾಸೀ" ಇತ್ಯಾದಿ) ಇಂಥ ಸಂಗತಿಗಳನ್ನು ಕೈಲಾಸಂರ ಕರ್ಣನಲ್ಲಿ ನಾವು ಕಾಣುವದಿಲ್ಲ. ಬದಲಾಗಿ ಕರ್ಣನ ಪ್ರತಿಯೊಂದು ಕೃತಿಯಲ್ಲೂ ಪೌರುಷದ ಲೇಪವಿದೆ. ದ್ರೌಪದಿಯ ಮಾನಭಂಗದ ಕಾಲಕ್ಕೆ ಸಭೆಯಲ್ಲಿ ನೆರೆದಿದ್ದ

ಪ್ರಮುಖರಲ್ಲಿ ಅರಸನಿಗೆ ವಿರುದ್ಧವಾಗಿ ನಿಂತು ದ್ರೌಪದಿಯ ಮಾನರಕ್ಷಣೆಗೆ ಮುಂದೆ ಬಂದವರು ಕರ್ಣ ಮತ್ತು ಇನ್ನೂ ಚಿಕ್ಕವನಾದ ಯುಯುತ್ಸು: "...ಯಾರೇ ಆಗಲಿ,–ವಿಧಿಯೇ ಗಂಡಿನ ವೇಷತೊಟ್ಟು ಬಂದರೂ—ಅಸಹಾಯು ಳಾದ ದ್ರುಪದನಂದಿನಿಯ ಮೈಗೆ ಕೈಹಚ್ಚುವ ಸಾಹಸ ಮಾಡಿದರೆ, ನಾನು ಭಾರ್ಗವನ ಉಗ್ರಾಸ್ತ್ರವನ್ನು ಎತ್ತಲೂ ಹಿಂಜರಿಯುವದಿಲ್ಲ" ಎನ್ನುತ್ತಾನೆ ಕರ್ಣ.

ಕೈಲಾಸಂರ ಕೀಚಕ ಅತ್ಯಂತ ಯಶಸ್ವಿಯಾಗಿ ಮೂರ್ತವಾಗಿ ಹೊಮ್ಮಿದ ಪಾತ್ರ; ಅವರ ಸ್ವತಂತ್ರ ಕಲ್ಪನೆಯ ನಿರ್ಮಾಣಗಳಲ್ಲೆಲ್ಲ ಅತ್ಯಂತ ಹೆಚ್ಚಿನದು. ಭಾಸನ "ಪಂಚರಾತ್ರ"ದ ಸೃಷ್ಟಿಯೊಂದಿಗೆ ತಮ್ಮ ಕೀಚಕ ಸರಿಯಾಗಿ ಹೋದಿ ಕೊಳ್ಳುತ್ತದೆಂದು ಕೈಲಾಸಂ ಸ್ವತಃ ನಂಬಿದ್ದರು.* ಮೂಲದಲ್ಲಿದ್ದ ಸಂಗತಿಗಳ ಬಾಹ್ಯ ರಚನೆಯನ್ನು ಕೈಲಾಸಂ ಇಲ್ಲಿ ಉಳಿಸಿಕೊಂಡಿದ್ದಾರೆ. ಆದರೆ ಅದರ ಮೂಲಕ ವ್ಯಕ್ತವಾಗಿರುವ ಅರ್ಥದ ಬಂಧ ಮಾತ್ರ ಸಂಪೂರ್ಣವಾಗಿ ಅವರ ಸ್ವಂತದ್ದು. ಮಹಾಭಾರತದ ಕೀಚಕ ತನ್ನ ಕಾಮುಕತೆಗೆ ತಾನೇ ಬಲಿಯಾದವನು. ಆದರೆ ಕೈಲಾಸಂರ ನಾಯಕ ಪೌರುಷಶಾಲಿ, ಆತ್ಮಸಂಯಮಿ, ತಾನು ಪ್ರಾಮಾಣಿಕವಾಗಿ ನಂಬಿದಂತೆ ತನ್ನ ದೇಶದ ಘನತೆ–ಗೌರವಗಳ ಸಲುವಾಗಿ ಹೋರಾಡಿ ಸತ್ತ ಧೀರ. ತನ್ನ ಅವಿಚ್ಛಿನ್ನ ವಿಜಯಗಳಿಗೆ ಬೇಸತ್ತು, ದ್ರೌಪದಿಯ ಮೇಲಿನ ಪ್ರೇಮದಲ್ಲಿ ಯೌವನದಲ್ಲಿಯೇ ಹತಾಶನಾಗಿ ಕೀಚಕ ಮರಣಕ್ಕಾಗಿ ಹಾತೊರೆಯುತ್ತಾನೆ. ಭೀಮನಂಥ ಸಮಾನಸ್ಕಂಧ ವೀರನಿಂದ ಮರಣ ಬಂದಾಗ ಅದನ್ನು ಸ್ವಾಗತಿಸುತ್ತಾನೆ. ಕೀಚಕನ ದೊಡ್ಡತನವಿರುವದು ಅವನ ಗೌರವ ಪ್ರಜ್ಞೆಯಲ್ಲಲ್ಲ, ದ್ರೌಪದಿಯ ಮೇಲಿನ ಅವಿಚಲಿತ ಪ್ರೇಮದಲ್ಲಿ.

ಮಾನವ ಜೀವನದಲ್ಲಿ ದೊಡ್ಡತನವನ್ನು ಹುಡುಕುವ ಕೈಲಾಸಂರ ಯತ್ನ ಕೇವಲ ಕೇಂದ್ರಪಾತ್ರಗಳಿಗಷ್ಟೇ ಸೀಮಿತವಾಗಿಲ್ಲ. *The Purpose*ದ ಭೀಷ್ಮ, *Karna*ದ ದುರ್ಯೋಧನ, *The Burden*ದ ಅಂಗ ಮೊದಲಾದವರಂತೆ ಮಹಾನುಭಾವರಾದ ಉನ್ನತ ಪಾತ್ರಗಳು ಅವರ ನಾಟಕಗಳ ತುಂಬಾ ಇವೆ. ಅವರ ಅತ್ಯಂತ ಸ್ಮರಣೀಯವಾದ ಕೆಲವು ಪಾತ್ರಗಳು ಸ್ತ್ರೀಯರವು. ಉದಾ ಹರಣೆಗೆ *Karna* ದಲ್ಲಿಯ ದ್ರೌಪದಿ–ರಾಧೆಯರ ಪಾತ್ರಗಳನ್ನು ನೋಡಬಹುದು.

---

*"ಕೀಚಕ", ಜಿ. ಪಿ. ರಾಜರತ್ನಂರ ಕನ್ನಡ ಅನುವಾದ, ಪುಟ: ೧೧೪

ಅದರಲ್ಲೂ ವಿಶೇಷವಾಗಿ ದ್ರೌಪದಿಯ ಪಾತ್ರದ ಅಭ್ಯಾಸವಂತೂ ಗಹನ ಮನೋವೈಜ್ಞಾನಿಕ ಅಂತರ್ದೃಷ್ಟಿಯ ಫಲವಾಗಿದೆ. ಪಾಂಡವರ ಹೆಮ್ಮೆಯ ರಾಣಿಯಾದ ದ್ರೌಪದಿ ಕರ್ಣನೊಬ್ಬನೇ ತನ್ನ ಮಾನವುಳಿಸಲು ಮುಂದೆ ಬರಬೇಕಾದ ಪ್ರಸಂಗದ ವ್ಯಂಗ್ಯದಿಂದ ಸಿಡಿದೇಳುತ್ತಾಳೆ. "ಹಿಂದೊಮ್ಮೆ ಹೆಣ್ಣಾಗಿದ್ದ ನಾನು ಈಗ ಹೆಣ್ಣಲ್ಲ. ಎಚ್ಚರ! ನಾನೀಗ ಅಗ್ನಿಜ್ವಾಲೆ!" ಎನ್ನುವ ಅವಳ ಸಿಡಿಲಿನ ನುಡಿಗಳಲ್ಲಿ ಒಂದು ಬಗೆಯ ಸೊಫೋಕ್ಲೀಸನ ನಾಟಕಗಳಲ್ಲಿಯ ಆವೇಶವಿದೆ, ಕಿವಿಯಲ್ಲಿ ಗುಂಯ್‌ಗುಡುವ ಶಕ್ತಿಯಿದೆ (*Karna* ನಾಟಕವನ್ನು ಕೈಲಾಸಂ "*an impression of Sophocles*" ಎಂದು ಕರೆದಿರುವದನ್ನು ಇಲ್ಲಿ ಗಮನಿಸಬಹುದು). ನಾಟಕದಲ್ಲಿ ರಾಧೆ ಕಾಣಿಸುವದು ಕೇವಲ ಸ್ವಲ್ಪಹೊತ್ತು ಮಾತ್ರ–ಕೊನೆಯ ಅಂಕದ ಕೊನೆಯ ದೃಶ್ಯದಲ್ಲಿ, ತಾನು ಸೂತಕುಲ ಸಂಜಾತನೆಂಬ ಅಪಕೀರ್ತಿಯಿಂದ ಪಾರಾಗುವ ಸ್ವಾರ್ಥದ ಆತುರದಲ್ಲಿ ತನ್ನ ದೊರೆಗೆ ದ್ರೋಹ ಬಗೆದ ತನ್ನ 'ಮಗ' ಕರ್ಣನನ್ನು ಬಯ್ಯುವದಕ್ಕಾಗಿ. ಆದರೂ ಈ ಸಣ್ಣ ಅವಕಾಶದಲ್ಲೇ ಅವಳ ಮನಸ್ಸಿನ ದೊಡ್ಡತನವನ್ನು ತೋರಿಸುವಲ್ಲಿ ಕೈಲಾಸಂ ಸಂಪೂರ್ಣ ಯಶಸ್ವಿಯಾಗಿದ್ದಾರೆ.

"...thy mind and heart made numb, inert
By fetters forged of thine unmanly shame
Of lowly birth and vanity of bowmanship"

ಎಂದು ನಿಷ್ಠುರವಾಗಿ ಕರ್ಣನ ದೌರ್ಬಲ್ಯವನ್ನು ಎತ್ತಿ ಆಡುವ ರೀತಿ ಅತ್ಯಂತ ಘನವಂತ ಆರ್ಯ ಸ್ತ್ರೀಗೂ ಕೀರ್ತಿ ತರುವಂಥದು.

ತಮ್ಮ ನಾಯಕರು ಜೀವನದ ಮಹಾ ಮೌಲ್ಯಗಳನ್ನು ಪ್ರತಿನಿಧಿಸುವಂತೆ ಮಾಡಿರುವ ಕೈಲಾಸಂರ ವಿಧಾನ (ಇದು ಮನುಷ್ಯನ ದೊಡ್ಡತನವನ್ನು ಎತ್ತಿ ತೋರಿಸುವ ಅವರ ನಿರಂತರ ಯತ್ನದಿಂದ ಪ್ರೇರಿತವಾದದ್ದು) ಏಕಲವ್ಯನ ಪಾತ್ರ ಚಿತ್ರಣದಲ್ಲಿ ಕೆಲವು ಉತ್ಕೃಷ್ಟ ಫಲಗಳನ್ನು ಕೊಟ್ಟಿದೆ. ಮೂಲದಿಂದ ಬದಲಾವಣೆಗಳನ್ನು ಕಲ್ಪಿಸಿಕೊಂಡು ಅವುಗಳನ್ನು ಮೂರ್ತರೂಪಕ್ಕೆ ತರುವದರಲ್ಲಿ ಕೈಲಾಸಂ ತಮ್ಮ ಅಸಾಮಾನ್ಯ ಕಲ್ಪಕತೆಯನ್ನು ಮೆರೆದಿದ್ದಾರೆ. ಮೂಲದಲ್ಲಿ ದ್ರೋಣ ಏಕಲವ್ಯನ ಬೆರಳನ್ನು ಗುರುದಕ್ಷಿಣೆಯಾಗಿ ಕೊಡಬೇಕೆಂದು ಆಜ್ಞಾಪಿಸುವ ಉಪಾಯಕ್ಕಿಂತ, ಏಕಲವ್ಯ ಗುರುವಿನ ಗೌರವವನ್ನು ಕಾಯಲು

ತಾನಾಗಿಯೇ ಬೆರಳನ್ನು ಅರ್ಪಿಸುತ್ತಾನೆಂದು ಕಲ್ಪಿಸಿರುವದು ಹೆಚ್ಚು ಸಂಭಾವ್ಯವೂ, ಒಪ್ಪತಕ್ಕಂಥದೂ ಆಗಿದೆ. ಆದರೆ ಕರ್ಣ ಹಾಗೂ ಕೀಚಕರ ವಿಷಯದಲ್ಲಿ ಇದೇ ಮಾತನ್ನು ನಿಸ್ಸಂದೇಹವಾಗಿ ಹೇಳಲಿಕ್ಕಾಗುವದಿಲ್ಲ. ಈ ಪಾತ್ರಗಳ ಸಂಪೂರ್ಣ ಆದರ್ಶೀಕರಣ ಅವುಗಳ ಮನುಷ್ಯ ಸಹಜತೆಯನ್ನೇ ತೊಡೆದುಹಾಕಿ ಕೇವಲ ಗುಣ–ಕಲ್ಪನೆಗಳ ಅಮೂರ್ತರೂಪವಾಗಿ ಪರಿಣಮಿಸಿರುವಂತೆ ಕಾಣುತ್ತದೆ. ಕೈಲಾಸಂ ಮಹಾಭಾರತದ ಪಾತ್ರಗಳ ಕಡೆಗೆ ಆಕರ್ಷಿತರಾದದ್ದು ಅವುಗಳ ಮೂಲಭೂತ ಮನುಷ್ಯಸಹಜತೆಗಾಗಿ. ಆದರೆ ಸ್ವತಃ ಅವುಗಳ ಪುನರ್ನಿರ್ಮಾಣದಲ್ಲಿ ತೊಡಗಿದಾಗ ಅವುಗಳ ಸ್ವಭಾವ ಹಾಗೂ ಸನ್ನಿವೇಶಗಳಲ್ಲಿ ಆಳವಾಗಿ ನೆಲೆಸಿದ್ದ ದೌರ್ಬಲ್ಯ–ದೋಷಗಳನ್ನು ಸೋಸಿ ತೆಗೆದು ಹೆಚ್ಚು ಕಡಿಮೆ ದೇವತ್ವಕ್ಕೇ ಏರಿಸಿಬಿಟ್ಟರು. ಕೈಲಾಸಂ ಹೀಗೆ ಬದಲಾವಣೆ ಮಾಡಿಕೊಂಡಾಗಲೆಲ್ಲ ಅವರ ಕಲ್ಪಕತೆಯ ಗುಣ ಹಾಗೂ ಸಾಮರ್ಥ್ಯಗಳ ಬಗ್ಗೆ ನಮಗೆ ಗೌರವ ಹುಟ್ಟುವದು ನಿಜ. ಆದರೆ ಮಹಾಭಾರತದ ಪಾತ್ರಗಳು ಆಳವಾಗಿ ಮನುಷ್ಯಸಹಜತೆಯನ್ನು ಅಳವಡಿಸಿಕೊಂಡಂಥವು; ಮೂಲಭೂತವಾಗಿ ಸ್ಥಳ–ಕಾಲಗಳಿಂದ ನಿರ್ಮಿಸಲ್ಪಟ್ಟವು; ಹೀಗಾಗಿ, ಅವುಗಳಲ್ಲಿ ದೌರ್ಬಲ್ಯ ಸಾಮರ್ಥ್ಯಗಳೆರಡನ್ನೂ ಕಾಣಬಹುದು. ಆದರೆ, ಕೈಲಾಸಂ ಅವುಗಳನ್ನು ಬದಲಾಯಿಸಿಕೊಂಡು ಬೇರೆ ರೂಪದಲ್ಲಿ ಮುಂದಿರಿಸಿದಾಗ ಏನೋ ಬೆಲೆಯುಳ್ಳುದನ್ನು ಕಳೆದುಕೊಂಡ ಅನುಭವವಾಗಿ, ಓದುಗ ಮತ್ತೆ ಮತ್ತೆ ಮಹಾಭಾರತದ ಮೂಲ ಪಾತ್ರಗಳ ಕಡೆಗೇ ಹೊರಳಿ ನೋಡುವಂತಾಗುತ್ತದೆ. ಉದಾಹರಣೆಗೆ, ಮಹಾಭಾರತದ ಕರ್ಣ ಕೈಲಾಸಂರ ಕರ್ಣನಷ್ಟೇ ಮಹಾ ಪರಾಕ್ರಮಿ; ಆದರೆ ಭೀಮ ದುಶ್ಶಾಸನನನ್ನು ಕೊಂದು ರಕ್ತ ಹೀರುವ ಭೀಕರ ದೃಶ್ಯವನ್ನು ಕಂಡು ಬೆದರುವಷ್ಟು, ಯುದ್ಧರಂಗದ ಮೇಲೆ ನಿಂತು ಹೋರಾಡುವಂತೆ ಅವನಲ್ಲಿ ಉತ್ಸಾಹ ತುಂಬಲು ಶಲ್ಯ ತನ್ನ ಸಾಮರ್ಥ್ಯವನ್ನೆಲ್ಲ ಉಪಯೋಗಿಸಬೇಕಾದ ಸಂದರ್ಭ ಒದಗುವಷ್ಟು ಮನುಷ್ಯಸಹಜತೆ ಅವನಿಗಿದೆ. ಹಾಗೆಯೇ ಮಹಾಭಾರತದ ಕೀಚಕನೂ ಮಹಾ ವಿಜಯಶಾಲಿ; 'ಪುಣ್ಯಕರ್ಮಾ', 'ನೀತಿಮಾನ್' ಎಂಬ ಕೀರ್ತಿಯುಳ್ಳವನು; ಆದರೆ ತನ್ನ ಆಶೆ ಕೈಗೂಡದಾಗ ಅಸಹಾಯ ಪಾಂಚಾಲಿಯನ್ನು ವಿರಾಟನ ಸಭೆಯವರೆಗೂ ಬೆನ್ನಟ್ಟಿ ಬಂದು ಹೊಡೆದು ಉರುಳಿಸುವಷ್ಟು ಅಸಭ್ಯನೂ ಹೌದು.

ಕೈಲಾಸಂರ ಈ ವಿಧಾನದಲ್ಲಿ, ಇಷ್ಟೇ ಗಂಭೀರವಾದ ಇನ್ನೊಂದು ಆಂತರಿಕ ಪರಿಮಿತಿಯಿದೆ. ಕರ್ಣ, ಕೀಚಕರಂಥ ಕೇಂದ್ರಪಾತ್ರಗಳು ಪಡೆದುಕೊಂಡಿರುವ ಪರಿಶುದ್ಧತೆಯ ತೀವ್ರತೆ, ತುಂಬುತನಗಳ ಪ್ರಮಾಣದಲ್ಲಿ ಅವರ ಎದುರಾಳಿಗಳಾದ ಅರ್ಜುನ, ಭೀಮರು ತಮ್ಮ ಮೂಲದ ಪರಂಪರಾಗತ ಪರಿಣಾಮವನ್ನು ಕಳೆದು ಕೊಂಡು ಗಾತ್ರದಲ್ಲೂ ಬಡಕಲಾಗಿದ್ದಾರೆ. ಕೀಚಕನ ಪರಾಕ್ರಮಕ್ಕಾಗಲಿ, ಆತ್ಮೋನ್ನತಿಗಾಗಲಿ ಸಮಾನವಾಗದೆ ಮಂಕಾಗಿ ಪರಿಣಮಿಸಿರುವ *Keechaka* ನಾಟಕದ ಭೀಮ ಇದಕ್ಕೊಂದು ಒಳ್ಳೆಯ ಉದಾಹರಣೆ.

೩

"ಕಲೆ ವ್ಯಾವಹಾರಿಕವಾದುದನ್ನು ವಾದಿಸಿ ಸಾಧಿಸಲು ಕಂಕಣ ಕಟ್ಟುವುದಿಲ್ಲ. ಉಪದೇಶ, ಸಮಾಜ ಸುಧಾರಣೆ, ರಾಜಕೀಯ ಪ್ರಚಾರ—ಯಾವುದೂ ಅದರ ನಿಮಿತ್ತವಲ್ಲ...ಅಂತಃಕರಣವನ್ನು ಅಲುಗಾಡಿಸುವದು, ಇದೇ ಕಲೆಯ ಕೆಲಸ" ಎಂದಿದ್ದಾರೆ ಕೈಲಾಸಂ.* ಆದರೂ ಅವರು ತಮ್ಮ ನಾಟಕಗಳಲ್ಲಿ ನೈತಿಕ ಸಮಸ್ಯೆ ಗಳಿಗೆ ಬಹಳ ಮಹತ್ವ ಕೊಟ್ಟಿದ್ದಾರೆ. ಈ ಸಮಸ್ಯೆಗಳು ಕೇವಲ ಪೌರಾಣಿಕ ವ್ಯಕ್ತಿಗಳಿಗೆ ಸಂಬಂಧಿಸಿದುವಾಗಿರದೆ ಇಂದಿನ ಜೀವನಕ್ಕೂ ಅನ್ವಯಿಸುವಂಥವು. ಇವುಗಳ ಮೂಲಕ ಕೈಲಾಸಂರ ವೈಯಕ್ತಿಕ ಮೌಲ್ಯಗಳ ತಕ್ಕಡಿಯನ್ನೂ ನಾವು ಕಾಣಬಹುದು. ಅವರ ನಾಟಕಗಳಲ್ಲಿ ಪುನಃ ಪುನಃ ಬರುವ ಸಮಸ್ಯೆಯೆಂದರೆ ಗುರಿಗೂ ಗಮ್ಯಗಳಿಗೂ ಇರುವ ಸಂಬಂಧ. ಈ ಸಂದರ್ಭದಲ್ಲಿಯೇ ಕೈಲಾಸಂ 'ಉದ್ದೇಶ' (Purpose) ಎಂಬ ಶಬ್ದವನ್ನು ಬಳಸುತ್ತಾರೆ. ಉದ್ದೇಶ ಮತ್ತು ಉದ್ದೇಶದ ಸರಿಯಾದ ಕಲ್ಪನೆ ಕೈಲಾಸಂರಿಗೆ ಆತ್ಯಂತಿಕ ಮಹತ್ವದವು. ಏಕೆಂದರೆ ಜ್ಞಾನಿಯಾದ ಭೀಷ್ಮ ಹೇಳುವಂತೆ "ಆತನ (ಪರಮಾತ್ಮನ) ಉದ್ದಿಶ್ಯ ತಿಳಿದರೆ ಆತನನ್ನೇ ತಿಳಿದಂತೆ". ಹೀಗೆ *The Purpose* ನಾಟಕದ ಶಿಲ್ಪದ ಕೇಂದ್ರತತ್ವ ಎರಡು ಬಗೆಯ ಉದ್ದೇಶಗಳ ಹೋಲಿಕೆಯಾಗಿದೆ. ಏಕಲವ್ಯ ಸಾತ್ವಿಕ ಉದ್ದೇಶದ ಸಂಕೇತವಾಗಿದ್ದರೆ ("ಕರ್ಮಣಾ ಪರಾರ್ಥಃ"), ಪಾರ್ಥ ವೈಯಕ್ತಿಕ ಮಹಾತ್ವಾ ಕಾಂಕ್ಷೆಯ ಸಂಕೇತವಾಗಿದ್ದಾನೆ (ಕಾರ್ಮಿ–ಅಧಮಾರ್ಥದಲ್ಲಿ). ಉದ್ದೇಶದ ಪ್ರಶ್ನೆ *Karna* ದಲ್ಲೂ ದೊಡ್ಡದಾಗಿ ನಿಲ್ಲುತ್ತದೆ. ನಾಟಕದ ಮೊದಲ ದೃಶ್ಯದಲ್ಲಿಯೇ, ಪರಶುರಾಮ ಮುಂದೆ ಕರ್ಣನ ಜೀವಿತಕ್ಕೆ ಮಾರ್ಗದರ್ಶಕವಾಗಬೇಕಾದ, ಜಗತ್ತಿನ

*ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ.

ದುಃಖಜೀವಿಗಳಿಗೆ ನೆರವಾಗುವ ಪವಿತ್ರ ಉದ್ದೇಶವನ್ನು ವಿಧಿಸುವದನ್ನು ಕಾಣುತ್ತೇವೆ. ಸ್ವತಃ ಕರ್ಣನೇ ತನ್ನ ದೊರೆಗೆ ತಾನು ಸಲ್ಲಿಸಬೇಕಾದ ಕರ್ತವ್ಯ ಹಾಗೂ ವಿಧೇಯತೆಗಳನ್ನು ಎಲ್ಲಕ್ಕೂ ಹೆಚ್ಚಿಂದು ಗಣಿಸುತ್ತಾನೆ; ಆದರೆ ತಾನು ಹೋರಾಡುತ್ತಿರುವ ಯುದ್ಧ 'ನಿಷ್ಕಾರಣ, ನಿರುಪಯೋಗಿ' ಎಂಬುದನ್ನು ಅವನೂ ಬಲ್ಲ. ಕರ್ಣನ ಈ ಬೌದ್ಧಿಕ ದೌರ್ಬಲ್ಯಕ್ಕೆ ಪರಶುರಾಮನ ಶಾಪ ಎಷ್ಟು ಕಾರಣವೋ, ಅವನ ಬದುಕಿಗೆ ಮಹತ್ತರ ಉದ್ದೇಶವಿಲ್ಲದುದೂ ಅಷ್ಟೇ ಕಾರಣವಾಗಿದೆ. ಆರ್ತಳಾದ ದ್ರೌಪದಿಯ ರಕ್ಷಣೆಗೆ ಕರ್ಣ ಪೌರುಷದಿಂದ ಮುಂದೆ ಬಂದುದು ನಾಟಕದ ಒಂದು ಮಹತ್ತರ ಕ್ಷಣ; ಯಾಕಂದರೆ ಒಮ್ಮೆ ಯಾದರೂ ಕರ್ಣ ತನ್ನ ಗುರು ವಿಧಿಸಿದಂತೆ, ಜೀವನದ ಮಹತ್ತರ ಉದ್ದೇಶವನ್ನು ಕಂಡುಕೊಳ್ಳುತ್ತಾನೆ. ನಾಟಕದ ಕೊನೆಗೆ ಅರ್ಜುನ 'ನಿರಸ್ತ್ರನಾದವನನ್ನು ಕೊಲ್ಲುವದು' 'ಮಹಾ ಅನ್ಯಾಯ' ಎಂದು ಪ್ರತಿಭಟಿಸಿದಾಗ ಈ ಸಮಸ್ಯೆ ಮತ್ತೆ ಏಳುತ್ತದೆ. "ಕೊಲ್ಲುವದರ ಉದ್ದೇಶವೇ ಅದರ ನ್ಯಾಯಾನ್ಯಾಯಗಳನ್ನು ನಿರ್ಣಯಿಸುತ್ತದೆಯೇ ಹೊರತು, ಅದರ ರೀತಿಯಲ್ಲ"—ಎನ್ನುತ್ತಾನೆ ಕೃಷ್ಣ.

ಈ ತತ್ವಗಳು ಸ್ವತಃ ಕೃಷ್ಣನ ನಡವಳಿಕೆಗೆ ಸಂಪೂರ್ಣವಾಗಿ ಹೊಂದಿ ಕೊಳ್ಳುತ್ತವೆ. *Fulfilment* ದಲ್ಲಿ ಕೃಷ್ಣ ತನ್ನ ಉದ್ದೇಶಪೂರ್ತಿಗಾಗಿ–ತೋಳ ಗಳನ್ನು ಕೊಲ್ಲುವವನು ತಾನೇ ತೋಳವಾಗಿಬಿಟ್ಟುದರಿಂದ ಏಕಲವ್ಯನನ್ನೂ, ಮರಣೋನ್ಮುಖನಾಗಿದ್ದ ಏಕಲವ್ಯನಿಗೆ ಕೊಟ್ಟ ಮಾತನ್ನು ನಡೆಸಿಕೊಡಲು ಅವನ ತಾಯಿಯನ್ನೂ ವಿಶ್ವಾಸಘಾತದಿಂದ ಕೊಲ್ಲುವದನ್ನು ನೋಡಬಹುದು. ಕೃಷ್ಣನ ಅಭಿಪ್ರಾಯದಲ್ಲಿ, 'ನಿಸ್ವಾರ್ಥ ಕರ್ಮ' ಅದನ್ನು ಸಾಧಿಸಲು ಬಳಸಿಕೊಂಡ ಗಮ್ಯಗಳ ಜವಾಬ್ದಾರಿಯಿಂದ ಕರ್ಮಿಯನ್ನು ಮುಕ್ತಗೊಳಿಸುತ್ತದೆ. ಇದು ಕೈಲಾಸಂರ ನಂಬಿಕೆಯೂ ಆಗಿದ್ದಂತೆ ತೋರುತ್ತದೆ. ಯಾಕಂದರೆ ಪರಶುರಾಮನೂ ಕೂಡ ಈ ದೃಷ್ಟಿಯಿಂದ 'ಹಿಂಸೆ'ಯನ್ನು ಸಮರ್ಥಿಸುವದನ್ನು ನಾವು ನೋಡು ತ್ತೇವೆ: "ಅಹಿಂಸೆ ವಿಶ್ವಮಾನ್ಯ ಸತ್ಯವನ್ನು ಸಾರುತ್ತದೆ. ಆದರೂ ದ್ವಂದ್ವ ಮಯವಾದ ಈ ಜಗತ್ತಿನಲ್ಲಿ, ಸ್ವತ್ವವನ್ನುಳಿಸಿಕೊಳ್ಳಲು ನಡೆಸಬೇಕಾದ ಅದರ ವಿಚಿತ್ರ ಹೋರಾಟಗಳಲ್ಲಿ, ಅಹಿಂಸೆಯಲ್ಲಿ ಹಿಂಸೆಯಿದೆ, ಹಿಂಸೆಯಲ್ಲಿ ಅಹಿಂಸೆಯಿದೆ."

ಕೈಲಾಸಂ ಅತ್ಯಂತ ಗೌರವದಿಂದ ಕಾಣುವ ಉಚ್ಚ ಮೌಲ್ಯಗಳಲ್ಲಿ 'ಪೌರುಷ' ಒಂದಾಗಿದೆ. ಕರ್ಣನನ್ನು ಬೀಳ್ಕೊಡುತ್ತ ಪರಶುರಾಮ ಹರಸುತ್ತಾನೆ:

"ಈ ಬ್ರಾಹ್ಮಣನ ಶಾಪ ನಿನ್ನನ್ನು ಸುತ್ತಿಕೊಂಡಿದ್ದರೂ, ಪರಮಾತ್ಮ ನಿನ್ನ ಮುಂದಿನ ಉಗ್ರ ಜೀವನವನ್ನು ಎದುರಿಸಿ ಗೆಲ್ಲುವ ಮನೋಬಲವನ್ನೂ ಆತ್ಮ ಬಲವನ್ನೂ ಅಕಳಂಕಿತ ಪೌರುಷವನ್ನೂ ನಿನಗೆ ಕರುಣಿಸಲಿ." ಸಭೆಯಲ್ಲಿ ವಿದುರ ಎಲ್ಲಕ್ಕಿಂತ ಹೆಚ್ಚಾಗಿ ಸುಯೋಧನನ ಪೌರುಷವನ್ನು ತಾಕಿ ಮಾತಾಡುತ್ತಾನೆ: "ಸುಯೋಧನ, ನಿನ್ನ ಸರ್ವಸ್ವ ಹೋದರೂ ಹೋಗಲಿ! ರಾಜ್ಯ, ಸಿಂಹಾಸನ, ಅಧಿಕಾರ, ಸಂಪತ್ತು, ತಂದೆ–ತಾಯಿ, ಬಂಧು–ಬಳಗ ಏನು ಹೋದರೂ ಹೋಗಲಿ; ನೀನು ಕಳೆದುಕೊಂಡದ್ದು ಯಃಕಶ್ಚಿತವೆಂದು ಪರಿಗಣಿಸಿ ಮರೆತು ಬಿಡು. ಆದರೆ, ನಿನ್ನ ಅನ್ನವನ್ನುಂಡು ತಿರುಗುತ್ತಿರುವ ನಿನ್ನ ಹೊಗಳು ಭಟರು ನಿನ್ನಲ್ಲಿ ಇನ್ನೂ ಬಿಟ್ಟಿರುವ ಅಲ್ಪಸ್ವಲ್ಪವಾದರೂ ಅಮೂಲ್ಯವಾದ ಪೌರುಷದ ತುಣುಕುಗಳನ್ನು ಒಟ್ಟುಗೂಡಿಸಿಕೋ." ಕೈಲಾಸಂ ಭಾವಿಸಿಕೊಂಡಂತೆ, ಪೌರುಷ ಒಂದು ವ್ಯಾಪಕ ಆದರ್ಶ; ಆದರೆ ಅದರ ಮೂಲಸತ್ವ ಕರುಣೆ. ಕರ್ಣ ಯುಯುತ್ಸುವಿಗೆ ಹೇಳುವಂತೆ, "ಪವಿತ್ರ ಕರುಣೆಯ ಕೆಲವು ಹನಿಗಳನ್ನುದುರಿಸುವದೇ ಪೌರುಷದ ನಿಜವಾದ ಲಕ್ಷಣ." ಇನ್ನೊಂದು ಸಂದರ್ಭದಲ್ಲಿ "ಪವಿತ್ರ ಕರುಣೆಗಾಗಿ ಹೆಣ್ಣಿನಂತೆ ವರ್ತಿಸಬೇಕಾಗಿ ಬಂದಾಗ ಹಾಗೆ ಮಾಡಲು ಅಂಜಬೇಡ. ಅಂದರೆ **ಗಂ**ಡಿನಂತೆ ವರ್ತಿಸಲೂ ನೀನು ಅಂಜುವದಿಲ್ಲ" ಎನ್ನುತ್ತಾನೆ ಕರ್ಣ ಭೀಮನಿಗೆ.

ಅನೇಕ ರೀತಿಯಿಂದ ಕೈಲಾಸಂ ಸಂಪ್ರದಾಯವಾದಿಗಳಾಗಿದ್ದರು. ಆದರೆ ವರ್ಗ–ವರ್ಣಗಳ ಮೇಲೆ ಉತ್ತಮಿಕೆಯನ್ನು ನಿರ್ಣಯಿಸುವದನ್ನು ಸಂಪೂರ್ಣವಾಗಿ ನಿರಾಕರಿಸುವಲ್ಲಿ ಅವರು ನಿಶ್ಚಿತವಾಗಿ ಆಧುನಿಕರಾಗಿದ್ದರು. ನಿಷಾದನಾದ ಏಕಲವ್ಯ, ಸೂತಪುತ್ರನೆಂದು ಭಾವಿಸಲ್ಪಟ್ಟಿದ್ದ ಕರ್ಣ ಇವರಲ್ಲಿ ಅವರಿಗಿದ್ದ ಪಕ್ಷಪಾತದಲ್ಲಿ ಈ ಮಾತಿನ ನಿದರ್ಶನವನ್ನು ನೋಡಬಹುದು. ಒಳಿತನ್ನು ಮಾಡುವ ಶಕ್ತಿಗಿಂತ ಜಾತಿಯ ಮೇಲೆ ಅಭಿಮಾನಪಟ್ಟುಕೊಳ್ಳುವದನ್ನು ಏಕಲವ್ಯ ಖಂಡಿಸುತ್ತಾನೆ. 'ಆಂತರಿಕ ಯೋಗ್ಯತೆ'ಯ ಮೇಲೆ ಕರ್ಣ ತನ್ನೆಲ್ಲ ನಂಬಿಕೆಯನ್ನು ಕೇಂದ್ರೀಕರಿಸುತ್ತಾನೆ. "ಭೂಮಿತಾಯಿಗೆ ತಕ್ಕವನಾಗಿ ಬಾಳುವ ಮನುಷ್ಯನ ಯೋಗ್ಯತೆಯನ್ನಳೆಯುವದು ಆಕಸ್ಮಿಕ ಜನನವಲ್ಲ, ಆಂತರಿಕ ಯೋಗ್ಯತೆ" ಎನ್ನುತ್ತಾನೆ ಕರ್ಣ. *Karna* ನಾಟಕದಲ್ಲಿ ಕೈಲಾಸಂರ ಆಶಯವನ್ನು ಸಂಪೂರ್ಣ ತಪ್ಪಾಗಿ ಅರ್ಥಮಾಡಿಕೊಂಡಿರುವ ಅ. ನ. ಕೃಷ್ಣರಾಯರು

ಈ ನಾಟಕ 'ಬ್ರಾಹ್ಮಣ್ಯದ ಹಿರಿಮೆ'ಯನ್ನು ಎತ್ತಿಹಿಡಿಯುತ್ತದೆಂದು ಪ್ರತಿಪಾದಿಸಿದ್ದಾರೆ.* ಕೈಲಾಸಂ ಎತ್ತಿಹಿಡಿಯಬೇಕೆಂದಿರುವದು ಬ್ರಾಹ್ಮಣ್ಯದ ಹಿರಿಮೆಯನ್ನಲ್ಲ, ದೈವಶಕ್ತಿಯನ್ನು; ಈ ದೈವಶಕ್ತಿಯ ಕೈಯಲ್ಲಿ ಬ್ರಾಹ್ಮಣನಾದ ಪರಶುರಾಮ ಒಂದು ಸಾಧನ ಮಾತ್ರ. ಪರಶುರಾಮನಿಗೂ ಅದರ ತಿಳುವಳಿಕೆಯಿದೆ. "ದೈವ ನಿನ್ನ ಜೀವನ–ಮರಣಗಳನ್ನು ದುರಂತದ ಎಳೆಗಳಿಂದ ನೆಯ್ದಿದೆ" ಎನ್ನುತ್ತಾನೆ ಕರ್ಣನಿಗೆ. ಕಾಳಿದಾಸನ ಶಾಕುಂತಲದಲ್ಲಿಯಂತೆ, ಇಲ್ಲಿಯು ಹಿಂತೆಗೆದುಕೊಳ್ಳಲಾಗದ ಶಾಪ ಹಿಂತೆಗೆದುಕೊಳ್ಳಲಾಗದ ದೈವೇಚ್ಛೆಯನ್ನು ಸೂಚಿಸುತ್ತದೆ. ಭೀಷ್ಮ ಸುಯೋಧನನಿಗೆ ನೀಡುವ ಉಪದೇಶದಲ್ಲಿ ಸೂಚಿಸುವಂತೆ, ದೈವವನ್ನು ಎದುರಿಸಿ ನಿಲ್ಲಲು ಒಪ್ಪದಿರುವದೇ ಜಾಣತನದ ಲಕ್ಷಣ. ಭೀಷ್ಮ ಸುಯೋಧನನಿಗೆ "ಮುಕುಟ, ರಾಜ್ಯಭಾರ, ಅಧಿಕಾರ, ಸಂಪತ್ತು ಮೊದಲಾದುವೆಲ್ಲ ದೈವ ಮನುಷ್ಯನ ಮಾನವೀಯತೆಯನ್ನು ಪರೀಕ್ಷಿಸಲು ಒಡ್ಡಿದ ಆಮಿಷಗಳು; ಈಗ ನೀನೊಬ್ಬನೇ ದೈವದ ಕೂಡ ನಿನ್ನ ಲೆಕ್ಕವನ್ನು ಬಗೆಹರಿಸಿಕೊಳ್ಳಬೇಕು ಮಗು" ಎನ್ನುತ್ತಾನೆ.

ಆದಾಗ್ಯೂ, ಕೈಲಾಸಂ ಜಾತಿ ಮತ್ತು ಜನನಗಳನ್ನು ಚಿತ್ರಿಸಿರುವ ರೀತಿ ಅಸ್ಪಷ್ಟತೆಯಿಂದ ಸಂಪೂರ್ಣ ಮುಕ್ತವಾಗಿದೆಯೆಂದು ಹೇಳಲಿಕ್ಕಾಗುವದಿಲ್ಲ. ಯಾಕಂದರೆ ಇವುಗಳ ಬಗೆಗೆ ಇಪ್ಪತ್ತನೆಯ ಶತಮಾನದ ಲೇಖಕ ಸಂಪೂರ್ಣವಾಗಿ ಆಧುನಿಕವಾದ ದೃಷ್ಟಿಕೋನವನ್ನು ತಳೆಯುವದು ಸಾಧ್ಯವಾದರೂ, ಪುರಾಣಕಾವ್ಯದ ಪಾತ್ರ ಹಾಗೆ ಮಾಡುವದು ಸಾಧ್ಯವಿಲ್ಲ. ಆರ್ಯರಿಗೆ ವಿಶಿಷ್ಟವಾದ "ಕೀಳು ಕುಲದಲ್ಲಿ ಹುಟ್ಟಿದ ನೈಚ್ಯಾನುಭಾವ" ಕರ್ಣನಲ್ಲೂ ಇದೆ. "ಈ ಸಂದೇಹ ಜೀವಮಾನದುದ್ದಕ್ಕೂ ನನ್ನ ಆತ್ಮವನ್ನು ಹುಳುವಿನಂತೆ ಕೊರೆಯುತ್ತಿದೆ, ಕಿತ್ತು ತಿನ್ನುತ್ತಿದೆ" ಎಂದು ಕರ್ಣ ಚಡಪಡಿಸುತ್ತಾನೆ. ಹಾಗೆಯೇ ಕೀಚಕನೂ ಸಾವಿಗಂಜುವದಿಲ್ಲ; ಆದರೆ ಕಡಿಮೆ ಕುಲದವನ ಕೈಯಲ್ಲಿ ಸೋಲೊಪ್ಪಲು ಅಂಜುತ್ತಾನೆ. ಕೊನೆಗೆ ತನ್ನನ್ನು ಕೊಂದವನು ಹುಟ್ಟಿನಲ್ಲಿ ತನಗೆ ಸರಿಸಮಾನನಾದ ಭೀಮನೆಂದು ತಿಳಿದಾಗ ಶಾಂತಿಯಿಂದ ಸಾಯುತ್ತಾನೆ.

ಇವಕ್ಕಿಂತ ಹೆಚ್ಚು ವ್ಯಾವಹಾರಿಕವಾದ ಕೈಲಾಸಂರ ಆಸಕ್ತಿಗಳಲ್ಲಿ 'ಶಿಕ್ಷಣ'ವೂ ಒಂದು. ಹೆಚ್ಚು ಜನಪ್ರಿಯವಾಗಿರುವ ತಮ್ಮ "ಟೊಳ್ಳು–ಗಟ್ಟಿ"

*"ಕೈಲಾಸಂ", ಪುಟ: ೧೫೭.

ಮತ್ತು "ಪೋಲಿ ಕಿಟ್ಟಿ"ಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಕೆಲವು ಸಮಸ್ಯೆಗಳನ್ನು ಅವರು ಚಿತ್ರಿಸಿದ್ದಾರೆ. ಈ ವಿಷಯದಲ್ಲಿ ಅವರಿಗಿದ್ದ ನಿರಂತರ ಆಸಕ್ತಿಯನ್ನು ಅವರ ಇಂಗ್ಲೀಷ್ ನಾಟಕಗಳಲ್ಲೂ ಕಾಣಬಹುದು. *The Purpose* ದಲ್ಲಿ ಶಿಕ್ಷಣ ಕ್ರಮದಲ್ಲಿ ಅಗತ್ಯವಾದ ಐದು ಸೂತ್ರಗಳನ್ನು ಕೈಲಾಸಂ ಕ್ರೋಢೀಕರಿಸಿದ್ದಾರೆ: (೧) ಏಕಾಗ್ರಚಿತ್ತ ("ಏಕಾಗ್ರಚಿತ್ತವನ್ನು ಸಾಧಿಸುವದು ಹೇಗೆಂದು ನಿನಗೆ ಕಲಿಸಿದ್ದೇನೆ"—ಪರಶುರಾಮ) ; (೨) ಅಗಾಧವಾದ, ಶ್ರದ್ಧಾನ್ವಿತವಾದ ಗುರು ಭಕ್ತಿ (ಕೀಚಕನ ಕೈಯಲ್ಲಿ ನಿಶ್ಚಿತವಾಗಿ ಸೋಲನ್ನಪ್ಪಿಕೊಳ್ಳುವ ಸ್ಥಿತಿಯಲ್ಲಿ ಭೀಮ ಗುರುವನ್ನು ಸ್ಮರಿಸಿಕೊಂಡು ತನ್ನ ಸಾಮರ್ಥ್ಯವನ್ನು ಮತ್ತೆ ಹುರಿದುಂಬಿಸಿ ಕೊಳ್ಳುತ್ತಾನೆ. ಕೀಚಕ ತನಗೆ ತಿಳಿಯದೆ ತನ್ನ ಗುರುವನ್ನು ನಿಂದಿಸಿದ್ದೇ ತನ್ನ ಸೋಲಿಗೆ ಕಾರಣವೆಂದು ಭಾವಿಸುತ್ತಾನೆ.) ; (೩) ಶಿಷ್ಯನಿಗೆ ವಿದ್ಯಾದಾನ ಮಾಡಲು ಗುರುವಿನಲ್ಲಿ ಮನಃಪೂರ್ವಕವಾದ ಸಂಕಲ್ಪ (ದ್ರೋಣ ತನ್ನನ್ನು ಶಿಷ್ಯನೆಂದು ಸ್ವೀಕರಿಸದಿದ್ದರೂ ತನಗೆ ವಿದ್ಯಾದಾನ ಮಾಡಲು ಅವನಿಗಿದ್ದ ಮನಃಪೂರ್ವಕ ಸಂಕಲ್ಪವನ್ನು ಏಕಲವ್ಯ ಖಾತ್ರಿಮಾಡಿಕೊಳ್ಳುತ್ತಾನೆ.) ; (೪) ವಿದ್ಯೆಯ ಮೂಲತತ್ವಗಳ ಜ್ಞಾನ ; ಹಾಗೂ (೫) ಸತತಾಭ್ಯಾಸ ಇವೇ ಆ ಐದು ಸೂತ್ರಗಳು. ಇದರ ಜೊತೆಗೆ, ಕಲಿಯುವ 'ಉದ್ದೇಶ'ದ ಮೇಲೂ ಕೈಲಾಸಂ ಒತ್ತುಕೊಟ್ಟಿದ್ದಾರೆ. *The Purpose* ದ ದ್ರೋಣ "ಗುರು ತಾನು ಕಲಿಯುವಾಗ ಯಾವ ಉದ್ದೇಶದಿಂದ ಕಲಿತನೋ, ಅದಕ್ಕಿಂತ ಶಿಷ್ಯನ ಉದ್ದೇಶ ಹೆಚ್ಚು ಉದಾತ್ತವಾಗಿದ್ದರೆ, ಶಿಷ್ಯ ಗುರುವನ್ನೂ ಮೀರಿಸಬಲ್ಲ" ಎನ್ನುತ್ತಾನೆ. ಧನುರ್ವಿದ್ಯೆಯಲ್ಲಿ ಏಕಲವ್ಯ ದ್ರೋಣನನ್ನೂ ಮೀರಿಸಿದ್ದು ಈ ಕಾರಣದಿಂದ. ಹಾಗೆಯೇ ವ್ಯಕ್ತಿತ್ವ ನಿರ್ಮಾಣದಲ್ಲಿ ತಾಯಿಯ ಸಂಸ್ಕಾರದ ಪ್ರಭಾವ ಹೇಗೆ ಮಹತ್ವದ್ದಾಗಬಲ್ಲದೆಂಬುದನ್ನು ಕೈಲಾಸಂ ಏಕಲವ್ಯ ಹಾಗೂ ಕರ್ಣರ ವಿಷಯದಲ್ಲಿ ತೋರಿಸಿದ್ದಾರೆ.

೪

ಕೈಲಾಸಂ ಅವರಿಗೆ ನಿಜವಾದ ನಾಟ್ಯಪ್ರತಿಭೆಯಿತ್ತು, ನಾಟಕದಲ್ಲಿ ಪ್ರೀತಿ ಯಿತ್ತು. ಇಂಗ್ಲಂಡಿನಲ್ಲಿ ಅಭ್ಯಾಸ ಮಾಡಿ ಬಂದ ಮೇಲೆ ಭೂಗರ್ಭಶಾಸ್ತ್ರ ಇಲಾಖೆಯಲ್ಲಿ ದೊರೆತಿದ್ದ ದೊಡ್ಡ ಹುದ್ದೆಯನ್ನು ಅದಕ್ಕಾಗಿಯೇ ಅವರು ಬಿಟ್ಟು ಕೊಟ್ಟರು. ವಿಲಾಸಿ ಹಾಗೂ ವೃತ್ತಿ ರಂಗಭೂಮಿಯ ಮೇಲೆ ಉತ್ತಮ

ನಟರಾಗಿ ಅಭಿನಯಿಸಿದ ಕೈಲಾಸಂ ನಾಟಕದ ಬರವಣಿಗೆಯಲ್ಲಿ ರಂಗಭೂಮಿಯ ಬಗೆಗೆ ತಮಗಿದ್ದ ಆತ್ಮೀಯ ಜ್ಞಾನವನ್ನು ಬಳಸಿಕೊಂಡರು. ಅದಕ್ಕಾಗಿಯೇ ಅವರ ಕನ್ನಡ ಹಾಗೂ ಇಂಗ್ಲಿಷ್ ನಾಟಕಗಳಲ್ಲಿ ಒಂದೇ ಮಟ್ಟದ ತಾಂತ್ರಿಕ ಪರಿಣತಿಯನ್ನು ಕಾಣಬಹುದು. ಸರ್ ಸಿ. ಆರ್. ರೆಡ್ಡಿಯವರು "ನನಗೆ ಗೊತ್ತಿರುವ ಯಾವುದೇ ನಾಟಕಕಾರನಿಗಿಂತಲೂ ನಾಟಕ ತಂತ್ರದಲ್ಲಿ ಕೈಲಾಸಂ ಬಲ್ಲಿದರು" ಎಂದಿದ್ದಾರೆ.* ಅವರ ಈ ಪ್ರಶಂಸೆಯನ್ನು ಅನೇಕ ಜನ ಒಪ್ಪುತ್ತಾರೆ. ಪಾತ್ರ ಹಾಗೂ ಸನ್ನಿವೇಶಗಳ ನಾಟ್ಯಾಯಮಾನತೆಯನ್ನು ಅವರು ಸುಲಭವಾಗಿ ಗ್ರಹಿಸಬಲ್ಲವರಾಗಿದ್ದರು. ಅವರ "ಸ್ವಲ್ಪೇ ಅವಧಿಯಲ್ಲಿ ಕಣ್ಣುಕಟ್ಟುವಂತಹ ಚಿತ್ರವನ್ನು ವಾಚಕರ (ಪ್ರೇಕ್ಷಕರ) ಎದುರು ನಿಲ್ಲಿಸುವಂತಹ ಭಾಷಾಪ್ರಭುತ್ವ, ಕುಶಲ ಕೈಗಾರಿಕೆ"ಗಳನ್ನು ಶ್ರೀರಂಗರು ಒಂದೆಡೆ ಎತ್ತಿತೋರಿಸಿದ್ದಾರೆ.** *The Purpose* ಕೆಲವು ಸಲ—ಅದರಲ್ಲೂ ವಿಶೇಷವಾಗಿ ಮೊದಲನೆಯ ಅಂಕದಲ್ಲಿ—ತೀರಾ ಚರ್ಚೆಯ ಮಟ್ಟಕ್ಕಿಳಿಯುತ್ತದೆ. ಅವರ ನಾಟಕಗಳಲ್ಲೇ ಇದು ಅತ್ಯಂತ ಕಡಿಮೆ ನಾಟ್ಯಾಯಮಾನವಾದುದು. ಆದರೆ ಉದ್ದೇಶ ಹಾಗೂ ವೈಯಕ್ತಿಕ ಮಹತ್ವಾಕಾಂಕ್ಷೆಗಳ ಯಾಂತ್ರಿಕ ವೈದೃಶ್ಯವನ್ನು ಮುರಿದು ಏಕಲವ್ಯನ ದುರಂತವನ್ನು ಸಂಪೂರ್ಣವಾಗಿ ನಾಟ್ಯೀಕರಿಸುವ ಈ ನಾಟಕದ ಮುಕ್ತಾಯ ಕೈಲಾಸಂ ರಚಿಸಿದ ಅತ್ಯಂತ ಪರಿಣಾಮಕಾರಿ ದೃಶ್ಯಗಳಲ್ಲಿ ಒಂದಾಗಿದೆ. ಕೈಲಾಸಂ "*an impression of Sophocles*" ಎಂದು ವರ್ಣಿಸಿರುವ *Karna* ದಲ್ಲಿ ಸೊಫೋಕ್ಲೀಸ್‌ನ ಮೇರುಕೃತಿಗಳಲ್ಲಿ ಕಂಡುಬರುವ ಆಂತರಿಕ ಅನಿವಾರ್ಯತೆಯಾಗಲೀ ಐಕ್ಯತೆಯಾಗಲೀ ಎಷ್ಟೂ ಇಲ್ಲ. ಆದರೆ ಈ ನಾಟಕದಲ್ಲಿ ಸವಿವರವಾಗಿ ರಚಿತವಾಗಿರುವ ಸನ್ನಿವೇಶಗಳು–ಸಭಾದೃಶ್ಯದಲ್ಲಿಯಂತೆ ವೈವಿಧ್ಯಪೂರ್ಣವಾದ ಪಾತ್ರ, ಧ್ವನಿಭೇದ, ಭಾವ ಮೊದಲಾದವುಗಳ ಕಲ್ಪನಾಸೌಂದರ್ಯದಿಂದ ಕಣ್ಣು ಕುಕ್ಕಿಸುತ್ತವೆ. *Keechaka* ಮತ್ತು *The Burden* ಈ ಎರಡೂ ನಾಟಕಗಳು ನಾಟ್ಯವ್ಯಂಗ್ಯವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡಿವೆ. ಡಾ. ಕೆ. ಆರ್. ಎಸ್. ಅಯ್ಯಂಗಾರರು "ಕೈಲಾಸಂರ ನಾಟ್ಯಕಲೆಯ ಕಿರೀಟ" ಎಂದು

---

*"ಟೊಳ್ಳುಗಟ್ಟಿ"ಗೆ ಬರೆದ ಇಂಗ್ಲೀಷ್ ಮುನ್ನುಡಿ.

**"ಏಕಲವ್ಯ"ದ ಮುನ್ನುಡಿ.

ವರ್ಣಿಸಿರುವ* *The Fulfilment* ನಾಟ್ಯಶಿಲ್ಪದ ದೃಷ್ಟಿಯಿಂದ—ಗಾತ್ರದಲ್ಲಿ ಸಣ್ಣದಾದರೂ—ಒಂದು ಶ್ರೇಷ್ಠ ಕೃತಿ.

ಸರಳರಗಳೆಯಲ್ಲಿ ಬರೆದಿರುವ *Karna* ಒಂದನ್ನು ಬಿಟ್ಟರೆ, ತಮ್ಮ ಉಳಿದ ನಾಟಕಗಳಿಗೆ ಕೈಲಾಸಂ ಗದ್ಯವನ್ನೇ ಉಪಯೋಗಿಸಿಕೊಂಡಿದ್ದಾರೆ. ದುರಂತ ನಾಟಕಗಳಲ್ಲಿ–ಅದರಲ್ಲೂ *The Burden* ಹಾಗೂ *Fulfilment* ಗಳಲ್ಲಿ ಗದ್ಯವನ್ನು ದುರಂತ ವಸ್ತುವಿನ್ಯಾಸಕ್ಕೆ ಹದವಾದ ಮಾಧ್ಯಮವಾಗಿ ಮಾಡಿಕೊಳ್ಳುವಲ್ಲಿ ಕೈಲಾಸಂ ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆಂದು ಡಾ. ಅಯ್ಯಂಗಾರರ ಅಭಿಪ್ರಾಯ. ಆದರೆ ಕೈಲಾಸಂ ತಮ್ಮ ಭಾಷೆಯ ಸಮಸ್ಯೆಗಳನ್ನು ಇಂಗ್ಲೀಷಿನ ಮಟ್ಟಿಗೆ ಸರಿಯಾಗಿ ಬಿಡಿಸಲಿಲ್ಲವೆಂದೇ ಹೇಳಬೇಕಾಗುತ್ತದೆ. *Karna* ದಲ್ಲಿ ಕೈಲಾಸಂ ಬಳಸಿರುವ ಭಾಷೆಯ ಪರಿಮಿತಿಗಳನ್ನು ಸುಲಭವಾಗಿ ಗುರುತಿಸಬಹುದು. ಇಲ್ಲಿಯ ಸರಳರಗಳೆಯ ಭಾಷೆ ಅನೇಕ ಸಲ ಆರ್ಷ ಪ್ರಯೋಗಗಳನ್ನು ಬಳಸಿಕೊಂಡಿದೆ ("Ergo, Karna, stop now"), ಒಟ್ಟಿನಲ್ಲಿ ಸಾಮಾನ್ಯವಾಗಿದೆ. ಕೈಲಾಸಂ ತಮ್ಮ ಕನ್ನಡ ನಾಟಕಗಳಲ್ಲಿ ಜನಸಾಮಾನ್ಯರ ಆಡುಮಾತಿನ 'ಕನ್ನಡಾಂಗ್ಲೊ' ಶೈಲಿಯನ್ನು ಬಳಸಿಕೊಂಡು, ವಾಸ್ತವತೆಯ ಕಾರಣಗಳಿಗಾಗಿ ಅದನ್ನು ಸಮರ್ಥಿಸಿಕೊಂಡರು. ಆದರೆ ಅವರೇ ತಮ್ಮ ಇಂಗ್ಲೀಷ್ ನಾಟಕಗಳಲ್ಲಿ *Karna* ದಲ್ಲಿಯಂತೆ ಆಧುನಿಕ ಬಳಕೆಯ ಮಾತಿಗೆ ದೂರವಾದ ಭಾಷೆಯನ್ನು ಉಪಯೋಗಿಸಿದ್ದು ಸೋಜಿಗವಾಗಿದೆ. ಕೈಲಾಸಂರಿಗೆ ಷೇಕ್ಸ್‌ಪಿಯರ್‌ನ ನಾಟಕಗಳ ಬಗ್ಗೆ ಇನ್ನಿಲ್ಲದ ಗೌರವವಿತ್ತು, ಪ್ರೀತಿಯಿತ್ತು. ಬಹುಶಃ ಅದಕ್ಕಾಗಿಯೇ ಅವರ ಇಂಗ್ಲೀಷ್ ನಾಟಕಗಳ ಭಾಷೆ ಷೇಕ್ಸ್‌ಪಿಯರ್‌ನಿಂದ ಪ್ರಭಾವಿತವಾದಂತೆ ತೋರುತ್ತದೆ. ಅವರ ನಾಟಕಗಳ ತುಂಬ ಷೇಕ್ಸ್‌ಪಿಯರ್‌ನ ಪ್ರತಿಧ್ವನಿಗಳನ್ನು ಕೇಳಬಹುದು. *The Burden* ದ "I've heard tell brother..." ಎಂದು ಆರಂಭವಾಗುವ ಮಾತುಗಳ ಮೇಲೆ (ಪುಟ ೫೩) *Hamlet*, ಸಭೆಯಲ್ಲಿ ಕರ್ಣ ಆಡುವ ಮಾತುಗಳ ಮೇಲೆ *Julius Cæsar* ನಾಟಕಗಳ ಪ್ರಭಾವ ಸ್ಪಷ್ಟವಾಗಿದೆ. ಪ್ರಾಚೀನ ಪುರಾಣಗಳನ್ನು ಆಧುನಿಕ ದರ್ಶನ–ಭಾಷೆಗಳ ಮೂಲಕ ಪುನರ್ನಿರ್ಮಿಸುವ ರಹಸ್ಯವನ್ನು ತೋರಬಹು

*Indian writing in English. ೧೯೬೨, ಪುಟ : ೧೯೭.

ದಾಗಿದ್ದ ಅನ್ವಿಯು *Antigone* ಯಂಥ ನಾಟಕಗಳು ಕೈಲಾಸಂರ ಎದುರಿಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎನಿಸುತ್ತದೆ.

ಕೈಲಾಸಂರ ಭಾಷೆಯ ಅಸಹಜತೆ ಅವರ ಶೈಲಿಯ ಕೆಲವು ವೈಶಿಷ್ಟ್ಯಗಳಿಂದಾಗಿ ಇನ್ನೂ ಎದ್ದು ಕಾಣುವಂತಾಗಿದೆ. ಉದಾಹರಣೆಗೆ—ಶ್ಲೇಷೆಗಳು ಹಾಗೂ ಹಿಡಿತವಿಲ್ಲದೆ ನುಗ್ಗುವ ಪ್ರಾಸಪ್ರಿಯತೆ. ತಮ್ಮ ಕನ್ನಡ ಸಾಮಾಜಿಕ ನಾಟಕಗಳಲ್ಲಿ ವಿಡಂಬನೆಗೆ ಹಾಗೂ ಹಾಸ್ಯಕ್ಕೆ ಕೈಲಾಸಂ ಇವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡಿದ್ದಾರೆ. ಆದರೆ ಗಂಭೀರವಾಗಿರುವ ಇಂಗ್ಲೀಷ್ ನಾಟಕಗಳಲ್ಲಿ ಇವುಗಳ ಪರಿಣಾಮ ಅನಿಷ್ಟಕರವಾಗಿದೆ. *Purpose* ದ ಭೀಷ್ಮ ಅರ್ಜುನನಿಗೆ ಹೇಳುವ ಈ ಮಾತುಗಳನ್ನು ನೋಡಿ: "Blessings, my budding bowman, But you will never bloom into a better until you better the bearing of your body whilst at bowcraft."

ಇಷ್ಟೆಲ್ಲ ಪರಿಮಿತಿಗಳಿದ್ದಾಗ್ಯೂ, ಕೈಲಾಸಂರ ನಾಟಕಗಳಲ್ಲಿ ಭಾಷೆಯ ಉತ್ತಮ ಉಪಯೋಗಕ್ಕೂ ನಿದರ್ಶನಗಳನ್ನು ಕಾಣಬಹುದಾಗಿದೆ. "You're not my mother. Yet you are" ಎಂದು ಕರ್ಣ ರಾಧೆಗೆ ಹೇಳುವ ಮಾತುಗಳ ಸರಳ ಸೌಂದರ್ಯ, "One never attains perfection. One becomes perfection itself" ಎಂದು ಅರ್ಜುನನಿಗೆ ಭೀಷ್ಮ ನೀಡುವ ಉಪದೇಶದಲ್ಲಿ ಕಾಣುವ ಅಭಿವ್ಯಕ್ತಿಯ ನಾಜೂಕು, "A strong sun-beam to light our gloomy·cot" ಎಂದು ರಾಧೆ ಕರ್ಣನನ್ನು ಬಣ್ಣಿಸುವ ಔಚಿತ್ಯ—ಮೆಚ್ಚಿಸಲಸಾಧ್ಯವಾದ ಅಭಿರುಚಿಯ ಜನರನ್ನೂ ತಣಿಸಬಲ್ಲವು. ಕೈಲಾಸಂರ ಶೈಲಿ ಶ್ರೀ ಅರವಿಂದರ ಶೈಲಿಯಂತೆ ಕಾವ್ಯಮಯವಾದದ್ದಲ್ಲ. ಅದಕ್ಕೆ ಪ್ರತಿಮಾಸೌಂದರ್ಯದ ಉಜ್ವಲತೆಯಿಲ್ಲ. ಆದರೂ ಆಗಾಗ ಅವರು ಅಲಂಕಾರವನ್ನು ಸೊಗಸಾಗಿ ಬಳಸಬಲ್ಲರು. ಧನುರ್ಧಾರಿಯ ಹೆದೆಯೇರಿಸುವ ಕ್ರಮವನ್ನು ಸರೋವರದ ಮೇಲಿಂದ ಬಿಸುಸುಯ್ಯುವ ಗಾಳಿಯ ಪ್ರತಿಯುಸಿರಿಗೂ ಸಹಾನುಭೂತಿಯಿಂದ ತಲೆಯಾಡಿಸುವ ಕಮಲಕ್ಕೆ ಹೋಲಿಸಲಾಗಿದೆ. ಮಧ್ಯರಾತ್ರಿಯಲ್ಲಿ ಕುಂತಿಯ ಭೇಟಿ—ಮುದಿಯ ಎರಳೆಯೊಂದು ತನ್ನ ದುರ್ಬಲ ಕಣ್ಣುಗಳಿಂದ ಮೋಸಹೋಗಿ ಬೇಟೆಗಾರನ ಗುಡಿಸಲಲ್ಲೇ ಸುಳಿದಾಡಿದಂತಾಯಿ

ತಂತೆ. ಪ್ರತಿಮೆಯನ್ನು ಬಳಸಿಕೊಂಡಾಗ ಕೈಲಾಸಂ ಔಚಿತ್ಯಪೂರ್ಣವಾಗಿ, ಅರ್ಥಪೂರ್ಣವಾಗಿ ಬಳಸಿಕೊಳ್ಳಬಲ್ಲರು. ಸುಯೋಧನನಿಗೆ ಗಾಂಧಾರ ನೀಡುವ ಈ ಉಪದೇಶವನ್ನು ನೋಡಿ:

"Strength of jaw, it is my liege, doth mark
All kings, be they the kings of man or beasts !
It is but braying donkey's guis'd in lion's hide
—Insulted or derided—puts out, not
Its gnashing, crunching jaw and teeth, but
Its ugly, long, long ears.....to glean and garner all
The senile quibblings......"

ಈ ಸಾಲುಗಳಲ್ಲಿಯ ಪ್ರತಿಮಾಸಂವಿಧಾನ ಅವುಗಳನ್ನಾಡುವವನ ಗ್ರಾಮ್ಯತೆಯನ್ನೂ ಸಣ್ಣತನವನ್ನೂ ಸಂಪೂರ್ಣವಾಗಿ ಪ್ರತಿಬಿಂಬಿಸುತ್ತದೆ. ಗದಾ, ಖಡ್ಗ, ವ್ಯಾಯಾಮಶಾಲಾ, ಚತುರ್ಥಿ, ಪೂರ್ಣಿಮಾ, ಘಟಿಕಾ, ಪರೀಕ್ಷಾ, ಯೋಜನ—ಮುಂತಾದ ಸಂಸ್ಕೃತ ಶಬ್ದಗಳನ್ನು ಧೈರ್ಯವಾಗಿ ಬಳಸಿಕೊಂಡಿರುವ ರೀತಿಯಂತೂ ತುಂಬಾ ಸಮರ್ಥವಾಗಿದೆ, ಔಚಿತ್ಯಪೂರ್ಣವಾಗಿದೆ. ಇಂಥ ಶಬ್ದಗಳಿಂದ, ಪರಕೀಯ ಭಾಷೆಯ ಮಾಧ್ಯಮದ ಮೂಲಕ ಪುರಾಣಕಾವ್ಯಗಳ ನೈಜ ವಾತಾವರಣವನ್ನು ನಿರ್ಮಿಸುವ ಗುರುತರ ಕೆಲಸದಲ್ಲಿ ಬಹಳಷ್ಟು ಸಹಾಯವಾಗಿದೆ.

೫

ಶ್ರೇಷ್ಠ ದರ್ಜೆಯ ಕಲ್ಪಕತೆ, ಪಾತ್ರ–ಸನ್ನಿವೇಶಗಳ ನಾಟ್ಯಾಯಮಾನತೆಯ ಗ್ರಹಣಶಕ್ತಿ, ರಂಗಭೂಮಿಯ ಆತ್ಮೀಯ ತಿಳುವಳಿಕೆ, ಅಭಿಜಾತವಾಗಿದ್ದರೂ ಅತ್ಯಂತ ವೈಯಕ್ತಿಕವಾಗಿದ್ದ ಜಾಗತಿಕ ದರ್ಶನ—ಮೊದಲಾದ ಶ್ರೇಷ್ಠ ನಾಟಕಕಾರನಿಗಿರಬೇಕಾದ ಎಲ್ಲ ಗುಣಗಳೂ ಕೈಲಾಸಂರಲ್ಲಿ ನಿಸ್ಸಂದೇಹವಾಗಿ ಇದ್ದವು. ಡಾ. ಅಯ್ಯಂಗಾರರು "...ತಮ್ಮ ಬರವಣಿಗೆಯಲ್ಲಿ ನಿರ್ದಿಷ್ಟವಾಗಿ ಏನು ಹೇಳಬಯಸುತ್ತಾರೆಂಬುದರ ಬಗ್ಗೆ ಕೈಲಾಸಂ ಏನೂ ತಿಳಿಸುವದಿಲ್ಲ. ಕೈಲಾಸಂರ ನಾಟಕಗಳಿಂದ ಓದುಗರೂ, ಪ್ರೇಕ್ಷಕರೂ ತಾವೇ ತಮಗೆ ತಿಳಿದಂತೆ

ಅರ್ಥಮಾಡಿಕೊಳ್ಳಬೇಕು" ಎಂದಿದ್ದಾರೆ.* ಅಯ್ಯಂಗಾರರ ಈ ಮಾತಿನ ಅರ್ಥ ಮಾಡಿಕೊಳ್ಳುವದೇ ಕಠಿಣವಾಗಿದೆ. ಯಾಕಂದರೆ ಕೈಲಾಸಂರ ನಾಟಕಗಳು ಅರ್ಥನಿವೇದನೆಯ ಅಭಾವದಿಂದ ಬಳಲುವದಿಲ್ಲ. ಆದರೂ, ಕೈಲಾಸಂ ತಮ್ಮ ಕಲೆಯನ್ನು ಸಂಪೂರ್ಣವಾಗಿ ಕರಗತಮಾಡಿಕೊಳ್ಳಲಿಲ್ಲ. ಅವರ ನಾಟಕಗಳನ್ನು ಭಾರತೀಯ ಇಂಗ್ಲೀಷ್ ಸಾಹಿತ್ಯದ ಉತ್ತಮ ಕೃತಿಗಳಲ್ಲಿ ಗಣಿಸಬಹುದಾದರೂ, ಅವು ಶ್ರೇಷ್ಠ ದರ್ಜೆಯ ನಾಟಕಗಳಾಗಿಲ್ಲ. ತಮ್ಮ ವಸ್ತು-ಸಂವೇದನೆಗಳಿಗೆ ಸೂಕ್ತವಾದ ಬರವಣಿಗೆಯ ಶೈಲಿಯನ್ನು ರೂಪಿಸಿಕೊಳ್ಳಲು ಕೈಲಾಸಂ ಅಸಮರ್ಥರಾದದ್ದೇ ಇದಕ್ಕೆ ಕಾರಣ. ಈ ನಾಟಕಗಳನ್ನು ನಿಜವಾದ ವಿಮರ್ಶೆಯ ಪರೀಕ್ಷೆಗೊಡ್ಡಿ ತೋರಿಸಬಹುದಾಗಿದ್ದ ಜೀವಂತ ರಂಗಭೂಮಿಯ ಅಭಾವ ದಿಂದಾಗಿ ತಮ್ಮ ನ್ಯೂನತೆಗಳನ್ನು ಅರ್ಥಮಾಡಿಕೊಳ್ಳುವದು ಅವರಿಗೆ ಸಾಧ್ಯ ವಾಗಲಿಲ್ಲ. ಬಹುಶಃ ಕೈಲಾಸಂ ತಮ್ಮ ಇಂಗ್ಲೀಷ್ ನಾಟಕಗಳು ಸಾಹಿತ್ಯ ಕ್ಷೇತ್ರಕ್ಕೆ ತಾವು ಸಲ್ಲಿಸಿದ ಬಹುಕಾಲ ಬಾಳುವ ಕಾಣಿಕೆಯೆಂದು ಭಾವಿಸಿದ್ದರು. ಈ ಅಭಿಪ್ರಾಯವನ್ನೊಪ್ಪುವ ಕೆಲವು ವಿಮರ್ಶಕರೂ ಇದ್ದಾರೆ.** ಆದರೆ ಅವರು ನಿಸ್ಸಂದೇಹವಾಗಿ ತಮ್ಮ ಕನ್ನಡ ನಾಟಕಗಳಲ್ಲೇ ಸ್ವೋಪಜ್ಞತೆಯನ್ನೂ ಶ್ರೇಷ್ಠತೆ ಯನ್ನೂ ಸಾಧಿಸಿದ್ದು. ಯುಗನಿರ್ಮಾಣ ಮಾಡಿದ ಈ ಕನ್ನಡ ನಾಟಕಗಳಿಂದಲೇ ಅವರ ಹೆಸರು ಚಿರಕಾಲ ಉಳಿಯಬಲ್ಲದು. ಇದರಲ್ಲಿ, ಇಂಗ್ಲೀಷಿನಲ್ಲಿ ಸೃಜನ ಶೀಲ ಅಭಿವ್ಯಕ್ತಿಗೆ ಹೆಣಗುತ್ತಿರುವ ಭಾರತೀಯ ಲೇಖಕರಿಗೆ ಒಂದು ಪಾಠವಿದೆ ಎನ್ನುವದಾದರೆ, ಇದು ನಿಜವಾಗಿಯೂ ಬೆಲೆಯುಳ್ಳ ಪಾಠ ಎನ್ನಬಹುದು.

---

*The Indian Contribution to English Literature, ೧೯೪೫, ಪುಟ : ೧೬೮

**"ಕೈಲಾಸಂ ದರ್ಶನ", ತ. ಸು. ಶಾಮರಾವ್, ಪುಟ: ೮೩.

ಸ್ನೇಹದ ಕಾಣಿಕೆ

ದಿವಂಗತ ಟಿ. ಪಿ. ಕೈಲಾಸಂ ಅವರು ಇಂಗ್ಲಿಶದಲ್ಲಿ "Purpose" ನಾಟಕವನ್ನು ಬರೆದರು; ಅವರ ಸಹಚರ ಶ್ರೇಷ್ಠರಲ್ಲಿ ಒಬ್ಬರಾದ ಶ್ರೀ ಬಿ. ಎಸ್. ರಾಮರಾವ ಅವರು ಅದನ್ನು ಕನ್ನಡಿಸಿದರು. ಈ ಸಂದರ್ಭದಲ್ಲಿ ನಡುವೆ ನುಗ್ಗಿ ನಾಲ್ಕು ಮಾತುಗಳನ್ನು ಬರೆಯಲು ನನಗೆ ಯಾವ ಅಧಿಕಾರವಿದೆ ಎಂದು ಕೆಲವರು ಕೇಳಬಹುದಾಗಿದೆ. ಅದಕ್ಕಾಗಿ ಮುಂಚೆ ಸಮಾಧಾನವನ್ನು ಹೇಳುವುದು ಅಗತ್ಯ.

ಕೈಲಾಸಂ ಮತ್ತು ನಾನು 1931ರಿಂದ ಪರಸ್ಪರ ಪರಿಚಿತರಾಗಿ, ಸಲುಗೆಯ ಸ್ನೇಹಿತರಾಗಿ ಇದ್ದೆವು. ಎಷ್ಟೊ ಸಲ ಅವರು ನನ್ನ ಅತಿಥಿಗಳಾಗಿ ಧಾರವಾಡದಲ್ಲಿ ಕಾಲವನ್ನು ಕಳೆದರು. ನಾವಿಬ್ಬರೆ ಕುಳಿತಾಗ ತಾಸು-ತಾಸು ಗಟ್ಟಲೆ–ನಗೆಯು ಇಲ್ಲವೆ ನಗಿಸುವ ಒಂದೂ ಮಾತಿಲ್ಲದೆ–ನಾಟಕ, ರಂಗಭೂಮಿ, ತತ್ತ್ವಜ್ಞಾನ, ಸಮಾಜದ ಟೀಕೆ ಇವನ್ನೆಲ್ಲ ಹರಟುತ್ತಿದ್ದೆವು. ಈ ಹರಟೆಯಲ್ಲಿ ಅವರ ನಾಟಕಗಳೂ ನನ್ನ ನಾಟಕಗಳೂ ಪರಸ್ಪರ (ಹೆಚ್ಚಾಗಿ) ಟೀಕೆ, (ಆಗಾಗ) ಪ್ರಶಂಸೆಯ ವಿಷಯಗಳಾಗುತ್ತಿದ್ದುವು. Purposeಊ ಎಷ್ಟೋ ಸಲ ಆ ವಿಷಯಗಳಲ್ಲಿ ಒಂದಾದುದು. ನನಗೆ ಅವರು 'Kai' (ಕೈ), ಅವರಿಗೆ ನಾನು 'J' (ಜೆ); ಅದಕಾಗಿ, ಒಂದು ತರದ ಆತ್ಮೀಯತೆಯ ಅಧಿಕಾರದಿಂದಲೆ ಈ ಮಾತುಗಳನ್ನು ಬರೆಯುತ್ತಲಿದ್ದೇನೆ.

ಎರಡನೆಯದಾಗಿ, ಶ್ರೀ ಬಿ. ಎಸ್. ರಾಮರಾವ ಅವರು (ಇಂಗ್ಲಿಶ ಮೂಲವನ್ನು ದೇಶದ ತುಂಬ ಓದಿ ತೋರಿಸಿ ಕನ್ನಡ ನಾಟಕಕಾರನ ಕೀರ್ತಿ ಪಸರಿಸಿದವರಾದ್ದರಿಂದ) ರಾಷ್ಟ್ರೀಯ ನಾಟಕ ಪ್ರಸಾರದ ಸಂದರ್ಭದಲ್ಲಿ ಇಲ್ಲವೆ ನಿಮಿತ್ತವಾಗಿ ಇದನ್ನು ಕನ್ನಡಿಸಬೇಕೆಂದು ಹಟತೊಟ್ಟವನು ನಾನು. ಅವರು ಅಷ್ಟೆ ಹಟದಿಂದ ನಿರಾಕರಿಸಿದರು. ಕೊನೆಗೆ, ಅವರ ಅನುವಾದಕ್ಕೆ ನಾನೂ ಕೈ ಹಚ್ಚಲು ಒಪ್ಪಿದರೆ ತಾವು ಮಾಡುವುದಾಗಿ ಹೇಳಿದರು. ಕೈ ಹಚ್ಚಿದ್ದೇನೆ; ಗುರುಶಿಷ್ಯರ ಸಂಬಂಧ ಎಂಬುದನ್ನರಿತು ಕೈಯನ್ನು ಹೆಚ್ಚಾಗಿ ಬಿಗಿಹಿಡಿದಿದ್ದೇನೆ.

ಮೂರನೆಯದಾಗಿ, ಈ ನಾಟಕದ ಅನುವಾದವು ಮರಾಠಿಯಲ್ಲಿ ಈ ಮೊದಲೆ ಪ್ರಕಟವಾಗಿದೆ. ಅದರ ಶೈಲಿ ಮೊದಲಾದುವುಗಳನ್ನು ತಿಳಿದುಕೊಳ್ಳಲು ನನಗೆ ಸುಲಭವಾಗಿತ್ತು, ಆ ಭಾಷೆಯ ಪರಿಚಯದಿಂದ. ಆ ಕಾರಣಕ್ಕಾಗಿಯೂ ಈ ಕೆಲಸಕ್ಕೆ ನನ್ನ ಸಂಬಂಧವಿದೆ.

ಕೊನೆಯದಾಗಿ, ಈ ನಾಟಕದ ರೇಡಿಯೊ ಪ್ರಸಾರಕ್ಕೆ ನನ್ನ ಸಂಬಂಧ ಬಂದುದರಿಂದ ನಾನು ಇದನ್ನು ಪೂರ್ತಿಯಾಗಿ ಓದಬೇಕಾಯಿತು (ರೇಡಿಯೊಕ್ಕಾಗಿ ಕೆಲವು ವ್ಯತ್ಯಾಸಗಳನ್ನು ಮಾಡಿಕೊಂಡುದು ಅನೇಕರಿಗೆ ತಿಳಿಯಬಹುದಾಗಿದೆ). ಹೀಗಾಗಿ ಕೆಲಮಟ್ಟಿಗೆ ಪರಸ್ಪರ ಸಹಕಾರವೂ ಅನಿವಾರ್ಯವಾಯಿತು.

ನನ್ನ ಅಧಿಕಾರವನ್ನು ಸಾಧಿಸಿಕೊಳ್ಳುವುದೆ ಇಲ್ಲಿ ಬರೆಯುವುದರ ಉದ್ದೇಶವಾಗಿಲ್ಲ. ಈ ನಾಟಕದ ಬಗ್ಗೆ ನಾನೂ Kai ಅವರೂ ಅನೇಕ ಸಲ ಮಾತಾಡಿದ್ದರಿಂದ ಕೆಲವು ಮಾತುಗಳನ್ನು ಇಲ್ಲಿ ಬರೆಯಲೇಬೇಕೆಂದು ನನಗೆನ್ನಿಸಿ ನಾನು ಬರೆಯುತ್ತಿದ್ದೇನೆ.

ಕೈಲಾಸಂ ಅವರು ಕನ್ನಡದಲ್ಲಿ ಮತ್ತು ಇಂಗ್ಲಿಶದಲ್ಲಿ ನಾಟಕಗಳನ್ನು ಬರೆದರು. ಕನ್ನಡ ನಾಟಕಗಳಲ್ಲಿ ತೀರ ಹೆಚ್ಚಾಗಿ ನಾಟಕಗಳು ವಿಷಯದಲ್ಲಿ ಸಾಮಾಜಿಕ, ತರಹದಲ್ಲಿ ಪ್ರಹಸನಾತ್ಮಕ. ಇಂಗ್ಲಿಶ ನಾಟಕಗಳಲ್ಲಿ ಸಾಮಾನ್ಯ ಎಲ್ಲವೂ ವಿಷಯಗಳಲ್ಲಿ ರಾಮಾಯಣ–ಮಹಾಭಾರತಗಳ ಕತೆ, ಶೈಲಿಯಲ್ಲಿ ಪದ್ಯಾತ್ಮಕ (ಗದ್ಯವಂತೂ ಅಲ್ಲವೇ ಅಲ್ಲ). ಈ ವೈಶಿಷ್ಟ್ಯಕ್ಕೆ ಕಾರಣವಿದೆಯೆ, ಇಲ್ಲವೆ ಇದೊಂದು ಆಕಸ್ಮಿಕ ಸಂಗತಿಯೆ? ನನ್ನ ಅಭಿಪ್ರಾಯದಲ್ಲಿ ಈ ವೈಶಿಷ್ಟ್ಯಕ್ಕೆ ಒಂದು ನಿಶ್ಚಿತ ಕಾರಣವಿದೆ. ಕನ್ನಡ ನಾಟಕಗಳಲ್ಲಿ ಇವರು ಮಾನವ ಪ್ರಾಣಿಯನ್ನು ದಯಾರ್ದ್ರದೃಷ್ಟಿಯಿಂದಲೆ ನೋಡುತ್ತಾರೆ; ಇಂಗ್ಲಿಶ ನಾಟಕಗಳಲ್ಲಿ ಮಾನವನನ್ನು ಭಯ-ಭಕ್ತಿ-ಗೌರವಗಳಿಂದ ಕಾಣುತ್ತಾರೆ. "Kai, ನೀವು ಗೊಡ್ಡು coservative. ನಿಮಗೆ ಹಿಂದಿನದಷ್ಟೆ ಒಳ್ಳೆಯದಾಗಿ ಕಾಣುತ್ತದೆ" ಎಂದು ನಾನು ಹೇಳಿದರೆ, "ಮಗೂ, J, ಇಂದಿನದನ್ನು ಕಂಡು ನಾನು ಅಳುತ್ತೇನೆ; ನೀನು ಆರ್ಭಟಿಸುತ್ತೀಯೆ. ಇಷ್ಟೆ ವ್ಯತ್ಯಾಸ" ಎನ್ನುತ್ತಿದ್ದರು. "ನಾಯಕರೆಂದರೆ ರಾಮಾಯಣ-ಮಹಾಭಾರತಗಳಲ್ಲಿಯೆ ಇದ್ದಾರೆಯೆ?" ಎಂದು ನಾನು ಕೇಳಿದಾಗ, "ತಾಳು, J, ನಿನ್ನ ನಾಯಕ ಹರಿಜನ್ಯಾರದಲ್ಲಿಯೊ ಪುಲಿಕೇಶಿಯಲ್ಲಿಯೊ?" (ನಾನೂ ಅದೇ ಆ ನಾಟಕವನ್ನು ಮುಗಿಸುತ್ತಲಿದ್ದೆ) ಎಂದು ನನ್ನನ್ನು ನಿರುತ್ತರ

ನನ್ನಾಗಿ ಮಾಡಿದರು. ಆದರೆ ಅದೇ ಪ್ರಶ್ನವನ್ನು ಈಗಲೂ ನಾನು ಕೇಳುತ್ತಿದ್ದೇನೆ. ಕೈಲಾಸಂ ಅವರಿಗೆ ರಾಮಾಯಣ-ಮಹಾಭಾರತಗಳಲ್ಲಿ ಕಾಣುವ ಗಂಡಸು ಸುತ್ತಲಿನ ಸಮಾಜದಲ್ಲಿ ಕಾಣುತ್ತಿದ್ದಿಲ್ಲ. ಯಾಕೆ? ಅದರ ಅರ್ಥವೇನು? ಇಲ್ಲವೆ ಅದರ ಮೂಲಕಾರಣವೇನು?

ಮೂಲಕಾರಣ ಅವರ ವ್ಯಕ್ತಿತ್ವದಲ್ಲಿಯೇ ಅಡಕವಾಗಿತ್ತು ಎಂದು ಹೇಳಬಹುದು. ಅವರ ಪ್ರತಿಭೆ, ಅವರ ಬುದ್ಧಿವಂತಿಕೆ, ಅವರ ತೀವ್ರ ಸಹೃದಯತೆ ಈ ಸಂಪತ್ತನ್ನು ಕಟ್ಟಿಕೊಂಡು ಅವರು ಸಮಾಜಬಾಹಿರರಾದರು. ತಮ್ಮ ಸುತ್ತಲಿನವರನ್ನು ನೋಡಿದಾಗ ಹಿರಿಯನೊಬ್ಬನು ಚಿಕ್ಕ ಮಕ್ಕಳನ್ನು ನೋಡಿದಂತಾಗುತ್ತಿತ್ತು (ಪ್ರತಿಭಾವಂತನಿಗೆ ಅನಿವಾರ್ಯವಾದ ಅನುಭವ ಇದು). ಮಕ್ಕಳನ್ನು ರಂಜಿಸಿ, ಸುಲಭ ಮಾತಿನಲ್ಲಿ ಕತೆಯನ್ನು ಹೇಳುವ ಅಜ್ಜನಂತೆ ಕನ್ನಡ ನಾಟಕಗಳನ್ನು ಬರೆದರು. ಅಷ್ಟೊಂದು ವಿವಿಧವಾದ, ವಿಶಾಲವಾದ, ಆಳವಾದ ಅನುಭವದ ಅಜ್ಜನಿಗೆ ತನ್ನ ಸರಿ ಜೋಡಿಯವರೊಡನೆ ಜೀವನದ ಸಮಸ್ಯೆಗಳನ್ನು ಕುರಿತು ಚರ್ಚಿಸಬೇಕೆಂದು ಒಮ್ಮೊಮ್ಮೆ ಎನ್ನಿಸಿದರೆ ಆಶ್ಚರ್ಯವೇನು? ಆ ಚರ್ಚೆಗಳೆ ಇಂಗ್ಲಿಶ ನಾಟಕಗಳು. ಬರೆಯುವ ಅವಸರದಲ್ಲಿ 'ಅಜ್ಜ' ಎಂದು ಹೇಳಿದೆನಲ್ಲವೆ? ಹೊರದೃಷ್ಟಿಯಿಂದ ಅವಸರವೆನ್ನಿಸಿದ್ದು ಅಂತರಂಗದಲ್ಲಿ ಅಷ್ಟು ವರ್ಷಗಳ ಸಾಹಚರ್ಯದ ಅನುಭವದ ಅನಿವಾರ್ಯ ಸಾರವೆ ಹೊರಹೊಮ್ಮಿದೆ ಏನೊ? ಅವರು ತಮ್ಮನ್ನು ತಾವೇ "ಕರ್ನಾಟಕ-ಪ್ರಹಸನ-**ಪ್ರಪಿತಾಮಹ**" ಎಂದೇ ಹೇಳಿಕೊಂಡಿದ್ದಾರಲ್ಲ? ಇದಕಾಗಿ ನನ್ನ ಊಹೆ ಎಷ್ಟು ಸ್ವಯಂ-ಸ್ಫುರಿತ, ಅಷ್ಟೆ ತರ್ಕಬದ್ಧವೂ ಆಗಿದೆ ಎಂದು ಹೆಮ್ಮೆಪಡಲೆ?

ಕನ್ನಡವಾಗಲಿ ಇಂಗ್ಲಿಶವಾಗಲಿ ಕೈಲಾಸಂ ಅವರ ನಾಟಕ ತಂತ್ರದಲ್ಲಿ ಒಂದು ಸಂಗತಿ ಮೆಚ್ಚುವಂತಿದೆ. ಅದೇಂದರೆ, ಸ್ವಲ್ಪೇ ಅವಧಿಯಲ್ಲಿ ಕಣ್ಣು ಕಟ್ಟುವಂತಹ ಚಿತ್ರವನ್ನು ವಾಚಕರ (ಮತ್ತು ಪ್ರೇಕ್ಷಕರ) ಎದುರು ನಿಲ್ಲಿಸುವಂತಹ ಭಾಷಾಪ್ರಭುತ್ವ, ಕುಶಲ ಕಲೆಗಾರಿಕೆ. ಅವರ ನಾಟಕಗಳಲ್ಲಿ ಒಂದೊಂದು ವ್ಯಕ್ತಿಯ ಮಾತುಗಳನ್ನು ಕೇಳುತ್ತ ಹೋದಂತೆ ಒಂದು ಕಾಲ್ಪನಿಕ ಮೂರ್ತಿ ನಮ್ಮೆದುರು ಮೂಡಿ ನಿಲ್ಲುವುದು. ಇದರಂತೆ ಇನ್ನೊಂದು ವೈಶಿಷ್ಟ್ಯವಿದೆ ಅವರ ತಂತ್ರದಲ್ಲಿ. ಅದೆಂದರೆ, ಪರಸ್ಪರ ವಿರುದ್ಧ ಶಕ್ತಿಗಳನ್ನಾಗಲಿ ವ್ಯಕ್ತಿ

ಗಳನ್ನಾಗಲಿ ಆಯ್ದುಕೊಳ್ಳುವುದು: ಟೊಳ್ಳು, ಗಟ್ಟಿ; ಅತ್ತೆ, ಸೊಸೆ; ಅರ್ಜುನ, ಏಕಲವ್ಯ—ಹೀಗೆ ಅವರ ಉತ್ತಮ ನಾಟಕಗಳಿಂದ ದೃಷ್ಟಾಂತಗಳನ್ನು ತೋರಿಸಬಹುದು. ಮೂರನೆಯದಾಗಿ, ಅವರ ಪ್ರಾಸ-ಪ್ರಿಯತೆ (ಅವರ ತರುವಾಯ ಹಗೆಡಿಸುವಂತೆ ಇದನ್ನು ಅನುಕರಿಸಿದವರು ಅವರಿಗೆ ಅನಿಷ್ಟವನ್ನು ಮಾಡಿದ್ದಾರೆನ್ನಬಹುದು). ಇನ್ನೊಬ್ಬ ಲೇಖಕನಲ್ಲಿ 'ಅದೇ ಅದೇ ಅದೇ' ಎಂದು ತಲೆ ಕೀಸರಾಗಬಹುದಾದ ಪ್ರಾಸಪ್ರಿಯತೆ ಇವರ ಲೇಖನದಲ್ಲಿ ಮನಮುಟ್ಟು ವಂತಹ ವಾಗ್ವೈಖರಿ ಎನ್ನಿಸುವುದು ಹೆಚ್ಚು ಸಂದರ್ಭಗಳಲ್ಲಿ. ಅದಕ್ಕೊಂದು ಕಾರಣವಿದೆ. ಅನ್ಯರಿಗೆ ಸುಲಭವಲ್ಲದ, ಪ್ರೇಕ್ಷಕರಿಗೆ ಹೊಳೆಯದ ಶಬ್ದಗಳು ಇವರ ಪ್ರತಿಭೆಯಿಂದ ಬೆಳಗಿ ನಿಲ್ಲುತ್ತಿದ್ದುವು. ಕೊನೆಯದಾಗಿ, ಒಂದು ಸಂಗತಿ ಸೋಜಿಗದ್ದೆನ್ನಿಸುವುದು. ಪೂರ್ತಿಯಾಗಿ ಇಂಗ್ಲಿಶದಲ್ಲಿ ನಾಟಕಗಳನ್ನು ಬರೆದ ಈ ಕನ್ನಡ ನಾಟಕಕಾರರು ಪೂರ್ತಿಯಾಗಿ ಕನ್ನಡದಲ್ಲಿ ಮಾತ್ರ ಒಂದೂ ನಾಟಕ ವನ್ನು ಬರೆಯಲಿಲ್ಲ! ಎಷ್ಟೋ ಸಲ (ಉದಾ: awfully simple - simply awful) ಕನ್ನಡ ನಾಟಕಗಳಲ್ಲಿ ಕೇವಲ ಇಂಗ್ಲಿಶಕ್ಕೇ ಹೊಂದಿಕೊಳ್ಳುವ ಮಾತು ಗಳನ್ನು ಹೇಳಿದ್ದಾರೆ. ಇದು ಸೋಜಿಗವೂ ಅಹುದು, ಸಹಜವೂ ಅಹುದು. 'ಅನ್ಯರಿಗೆ' ಅರ್ಥವಾಗದಂತೆ ಬರೆದರು ಏಕೆ—ಎಂಬುದು ಸೋಜಿಗ: ಬರೆಯು ವಾಗ 'ಅನ್ಯರಿಗಾಗಿ' ಎಂಬುದರ ಎಚ್ಚರವಿಲ್ಲದಿರುವುದು, ಸಹಜ. ಈ ಸಹಜತೆ ಇಲ್ಲಿ ಇದ್ದುದರಿಂದಲೆ ಕೈಲಾಸಂ ಇವರು ಶ್ರೇಷ್ಠ ನಾಟಕಕಾರರಾಗಿದ್ದಾರೆ. ಇದು ವರೆಗೆ ಕನ್ನಡ ನಾಟಕಕಾರ ಎಂದು ಖ್ಯಾತಿವೆತ್ತವರು ಈಗ ಶ್ರೇಷ್ಠ ಭಾರತೀಯ ನಾಟಕಕಾರರೆನ್ನಿಸಿಕೊಳ್ಳುತ್ತಲಿದ್ದಾರೆ, ಇಂದಿಲ್ಲ ನಾಳೆ ಜಗತ್ತಿನ ಶ್ರೇಷ್ಠ ನಾಟಕ ಕಾರರಲ್ಲಿ ಒಬ್ಬರಾಗುತ್ತಾರೆ.

ಬೆಂಗಳೂರು

೧-೯-೧೯೫೬ ಶ್ರೀರಂಗ

ಉಪಚಾರ

ಸುಮಾರು ಮೂವತ್ತೈದು ವರ್ಷಗಳ ಹಿಂದಿನ ಮಾತು...ಇಂಗ್ಲೆಂಡ್ ರಿಟರ್ನ್‌ಡ್ (with thanks ಅಲ್ಲ!) ಕೈಲಾಸಂ, ತಮಗಂಟಿಕೊಂಡಿದ್ದ ಬಿ.ಎ., ಎ.ಆರ್.ಸಿ.ಎಸ್‌ಸಿ. (ಲಂಡನ್), ಎಫ್.ಆರ್.ಜಿ.ಎಸ್. (ಇಂಗ್ಲೆಂಡ್) ಪದವಿಗಳನ್ನು ಸುಲಿದೊಗೆದು, ಆ ಪದವಿಗಳಿಂದಾಗಿ 'ಪ್ರೊಬೇಷನರೀ ಜಿಯಾಲಜಿಸ್ಟ್' ಆಗಿ ಐದು ವರ್ಷ ಸರ್ಕಾರೀ ಕೆಲಸ ನಡೆಸಿ ಅದನ್ನೂ ಕಿತ್ತೆಸೆದು, "ಕರ್ನಾಟಕ ಪ್ರಹಸನ ಪ್ರಪಿತಾಮಹ ರುಂಡಮುಂಡೋತ್ಪನ್ನ ಗುಂಡೂ" ಆಗಿ ಅವತರಿಸಿದ್ದರು. ಚೊಚ್ಚಲ ಸಾಮಾಜಿಕ 'ಟೊಳ್ಳುಗಟ್ಟಿ'ಯ ಪ್ರಸವವೂ ಆಗಿ, ಆಗ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಅಮೆಚ್ಯೂರು ನಾಟಕ ಸಂಘದ ಸದಸ್ಯರಿಂದ ಅದರ ಪ್ರದರ್ಶನವೂ ಆಗಿ, ಕೈಲಾಸಂ ಹೆಸರು, 'ಜೋಕುಗಳು'—ಮನೆಮಾತಾಗಿತ್ತು. ಕೈಲಾಸಂ ಅದೇ ಸಮಯಕ್ಕೆ ಹುಟ್ಟಿ ಬೆಳೆದ ಮನೆ ಬಿಟ್ಟು, ನಾಟಕದ ಬಯಲಿಗಿಳಿದು, ವಿಶ್ವ ಕುಟುಂಬಿಯಾಗಿದ್ದರು. ನಾಲ್ಕು ಜನ ನಾನು ಹೇಳಿದಂತೆ ಕೇಳುವ ನಾಟಕೋಪಜೀವಿಗಳು ಕೈಗೆ ಸಿಕ್ಕರೆ ಒಂದು 'ಕೈ' ತೋರಿಸಬಲ್ಲೆ ಎಂದು "ಕೈ" ಅಂದುಕೊಳ್ಳುತ್ತಿದ್ದ ಸಮಯಕ್ಕೆ ಸರಿಯಾಗಿ ನಾಟಕ ಶಿರೋಮಣಿ ಎ. ವಿ. ವರದಾಚಾರ್ಯರೇ ಸ್ವಯಂ ಕೈಲಾಸಂರನ್ನು ಕರೆದು ತಮ್ಮ ರತ್ನಾವಳಿ ಥಿಯೇಟ್ರಿಕಲ್ ಕಂಪೆನಿಯನ್ನು ಕೈರವರ ಕೈಗಿಟ್ಟು ನಡೆಸೆಂದರು. ಬಯಸಿದ್ದು ಹಾಗ, ಒದಗಿದ್ದು ಮುಪ್ಪಾಗವಾಗಿ, ಕಂಪೆನಿಯವರು ಆಡುತ್ತಿದ್ದ ಬಹುಪಾಲು ಪೌರಾಣಿಕ, ಕೆಲವು ಐತಿಹಾಸಿಕ, ಒಂದೋ ಎರಡೋ ಸಾಮಾಜಿಕ ನಾಟಕಗಳ ಜೊತೆಗೆ ಟೊಳ್ಳುಗಟ್ಟಿ, ಹೋಂ ರೂಲು, ವಿವಿಧ ವಿನೋದಾವಳಿಗಳು ಆರಂಭವಾಗಿ, ಕೈಲಾಸಂ ಬೀದಿ ಮಾತಿಗೂ ವಸ್ತುವಾದರು.

ಸುಮಾರು ೧೯೨೮ರಲ್ಲಿ 'ಅಮ್ಮಾವ್ರ ಗಂಡ' ಅವತರಿಸಿತು. ಇದರಲ್ಲಿ ಕಾಲು ಕನ್ನಡ, ಮುಕ್ಕಾಲು ಇಂಗ್ಲಿಷು. ಹಸ್ತಪ್ರತಿಗಿಳಿಸಿದವರು ಇಬ್ಬರು: 'ಅಮ್ಮಾವ್ರ' ಪಾತ್ರವನ್ನು 'ಇನ್ನಿಂತಿಲ್ಲ'ವೆಂದು ಅಭಿನಯಿಸಿದ ಶ್ರೀ ಆರ್.ನಾಗೇಂದ್ರ ರಾಯರು; 'ಕಮಲೂ' ಪಾತ್ರದಿಂದ ನಾಟಕದಲ್ಲಿ ಮೆಚ್ಚಿಗೆಯೆಲ್ಲ ಸೂರೆಗೊಂಡ ಶ್ರೀ ಎಂ. ಜಿ. ಮರಿರಾಯರು. ಒಬ್ಬರು ಮಿಡಲ್‌ಸ್ಕೂಲು ಗ್ರಾಜುಯೇಟು, ಇನ್ನೊಬ್ಬರು ಪ್ರೈಮರಿಸ್ಕೂಲು ಗ್ರಾಜುಯೇಟು. ಜೊತೆಗೇ 'ಬೆಂಡೋಲೆ ಘಾಡು'

ಎಂಬ ನಾಟಕವೂ ಮತ್ತೊಂದು ಹಸ್ತಪ್ರತಿಗಿಳಿಯಿತು. ಎರಡೂ ಹಸರು ಶಾಯಿಯಲ್ಲಿ, ಎರಡೂ ಮುದ್ದಾದ ಅಕ್ಷರಗಳಲ್ಲಿ, ಎರಡೂ ಎಕ್ಸರ್ಸೈಸ್ ಬುಕ್ಕುಗಳಲ್ಲಿ, ಎರಡೂ ಇಂಗ್ಲಿಷ್ ಬಾರದವರಿಂದ! ಈ ಇಬ್ಬರೂ ಒಂದು ದಿನ ಹೋಟಲಿಗೆ ಹೋಗಿದ್ದು ಕಾಫಿ ಕುಡಿದರು. ಹೊರಬಿದ್ದಾಗ ಅಲ್ಲೇ ಮರೆತು ಬಂದರು. ಆ ಪ್ರತಿಗಳು ಪುನಃ ಸಿಗಲಿಲ್ಲ. ನಾಟಕ ನೋಡಿದ್ದು ಜ್ಞಾಪಕವಿದ್ದು ಬರೆಯಲಾಯಿತು.

ಬರೆಯುವುದಕ್ಕೆ ಒಬ್ಬಿಬ್ಬರು ಸಿಕ್ಕಲೆಂದೇ ಕಾದಿದ್ದರು ಕೈಲಾಸಂ. ಅದರಲ್ಲೂ ಕಲಿಯದಿದ್ದ ಇಂಗ್ಲಿಷಿನಲ್ಲಿ! ಆಗಿನ ಪೌರಾಣಿಕ ನಾಟಕಗಳನ್ನು ನೋಡಿ ನೋಡಿ "ಇದು ಹೀಗಲ್ಲ—ಬೇರೆ ರೀತಿಯಿದೆ,–ಅದನ್ನು ಎಂದು ಚಿತ್ರಿಸಿಯೇನು," ಎಂದು ಹಾತೊರೆಯುತ್ತಿದ್ದ ಕೈಲಾಸಂಗೆ ಹೀಗೆ ಬರೆಯುವವರು ಸಿಕ್ಕರೆ ಬಿಟ್ಟಾರೆ? ಕೂರಿಸಿಕೊಂಡರು...ಅವರ ಹೈಸ್ಕೂಲಿನಿಂದ ಅವರ ಗುರುಗಳಾಗಿದ್ದ ಕೀರ್ತಿಶೇಷ (ರೈಟ್ ಆನರಬಲ್) ವಿ. ಎಸ್. ಶ್ರೀನಿವಾಸಶಾಸ್ತ್ರಿಗಳಂಥ ಇಂಗ್ಲಿಷ್ ಭಾಷಾ ಪಂಡಿತವರ್ಯರಿಂದಲೂ, 'ಭಲೆ' ಎನ್ನಿಸಿಕೊಂಡ ಕೃತಿರತ್ನ "ಪರ್ಪಸ್" ನಾಟಕವನ್ನು ಅಂದು ಮೊದಲು ಆ ಇಬ್ಬರ ಕೈಯಿಂದ ಹಸರು ಶಾಯಿಯಲ್ಲಿ ಬರೆಸಿದರು. (ಜಪ್ಪಯ್ಯ ಎಂದರೂ ತಾನು ಬರೆಯುತ್ತಿರಲಿಲ್ಲ!) ಆನಂತರ ತಾವೇ ಒಂದು ಟೈಪ್‌ರೈಟರ್ ಹುಡುಕಿ ತಂದಿಟ್ಟುಕೊಂಡು "see and touch" system ಎಂಬ ತಮ್ಮದೇ ಆದ ವಿಚಿತ್ರ ಪದ್ಧತಿಯ ರೀತ್ಯಾ ಒಂದೊಂದೇ ಹಾಳೆಯಾಗಿ ಒಂದು ವರ್ಷ ಕಾಲ ಟೈಪು ಮಾಡಿದರು – ತಾವೇ! ಇದು ಮಾತ್ರ ತಾವೇ ಮಾಡುತ್ತಿದ್ದರು–ಇತರರಿಗೆ ಕೊಟ್ಟರೆ ತಪ್ಪು ಹೊಡೆದಾರೆಂದು! (ಕನ್ನಡದಲ್ಲಿಯೂ ಟೈಪ್‌ರೈಟರ್ ಇದ್ದಿದ್ದರೆ ಅವರು ರಚಿಸಿದ ಐವತ್ತಾರು ನಾಟಕಗಳೂ ನಮಗೆ ದೊರೆಯುತ್ತಿದ್ದುವೇನೋ! ಆ ಭಾಗ್ಯವಿಲ್ಲವಾಯಿತು). ಹೀಗೆ 'ಟೈಪು' ಆದುದೂ ಒಂದನೆಯ ಅಂಕ ಮಾತ್ರ. ಆನಂತರ, ಸಿಕ್ಕಿದ ಸ್ನೇಹಿತರನ್ನು ಸಿಕ್ಕ ಸಿಕ್ಕಿದ ಕಡೆ ನಿಲ್ಲಿಸಿಕೊಂಡು ಅವರಿಗೆ ಅದನ್ನು ಅಲ್ಲಲ್ಲೇ ಸುಲಾಯಿಸುತ್ತಿದ್ದರು.

ಮೊದಲ ಸತ್ಯಾಗ್ರಹ ಸಮರ ಮುಗಿಸಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದ ಗಾಂಧೀಜಿ ಬೆಂಗಳೂರಿನ ಕುಮಾರಾಪಾರ್ಕಿಗೆ ಬಂದಿದ್ದಾಗ ಅವರ ಸಮಕ್ಷಮ 'ಪರ್ಪಸ್' ವಾಚನ ಏರ್ಪಾಡಾಗಿತ್ತು. ಮಹಡಿಯ ಮೇಲಿನ ವೆರಾಂಡಾದಲ್ಲಿ ಗಾಂಧೀಜಿ ನೂಲುತ್ತಕುಳಿತಿದ್ದರು. ಪೋಲೆಂಡಿನ ಬ್ರೂನೋಸೋದರಿಯರು ಅವರ ವರ್ಣ ಚಿತ್ರವನ್ನು ಒಂದು ಕಡೆ ಬರೆಯುತ್ತಿದ್ದರು. ಕೈಲಾಸಂ ಮೆಟ್ಟಲೇರಿದರು.

ಇನ್ನೆರಡು ಮೆಟ್ಟಲಿರುವಾಗಲೇ ಗಾಂಧೀಜಿ ಒಂದು ಸಲ ತಲೆ ಎತ್ತಿ ಎಂದಿನಂತೆ ಸ್ವಾಗತವನ್ನು ಮೌನವಾಗಿ ಸೂಚಿಸಿ ತಲೆ ಬಗ್ಗಿಸಿದ್ದರು. ಆಗಿನ ಅವರ ಮುಖಭಾವದಲ್ಲಿ ಏನು ಕಂಡರೋ ಕೈಲಾಸಂ! ಥಟ್ಟನೆ ಹಿಂತಿರುಗಿ ದಡದಡನೆ ಮೆಟ್ಟಲಿಳಿದು ಬಂದು ಹೊರಬಾಗಿಲು ದಾಟಿ ಹೊರ ಅಂಗಳದಲ್ಲಿ ಒಂದು ದೂರದ ಮೂಲೆಯ ಕಡೆ ನಿಂತು ಕಣ್ಣಲ್ಲೆರಡು ಹನಿಹನಿಸುತ್ತ ನಿಂತರು. "ಜಗತ್ತಿನ ಜನತೆಯ ನೋವನ್ನು ಮೈವೆತ್ತು ಅದಕ್ಕೆ ಪರಿಹಾರ ಅರಸುತ್ತಿರುವ ಈ ಜಗದರಸನ ಮುಂದೆ ಈ ಜೊಳ್ಳು ವ್ಯಕ್ತಿ ರಚಿಸಿದ ಜಡ ನಾಟಕ ವಾಚಿಸಿ ಅವರ ಅಮೂಲ್ಯ ಕಾಲ ವ್ಯರ್ಥಮಾಡಲೇ ನಾನು?" ಎಂದರು. ಕರೆದೊಯ್ದವರ ಬಲವಂತಕ್ಕೆ ಮಹದೇವ ದೇಸಾಯಿ, ಗಂಗಾಧರರಾವ್ ದೇಶಪಾಂಡೆ, ಪ್ರೊ. ಮಲ್ಕಾನಿ, ದೇವದಾಸ್ ಗಾಂಧಿ, ಸಿ. ರಾಜಗೋಪಾಲಾಚಾರಿ ಇವರೆದುರಿಗೆ ಓದಿದ ಮಾಘಸ್ನಾನ ಮಾಡಿದರು.

ಅಂದಿನ ದಿನಗಳಲ್ಲಿ ಡಾ|| (ಸರ್) ರಾಧಾಕೃಷ್ಣನ್ ಇವರ ತಂದೆಯವರನ್ನು ನೋಡಲು ಬರುತ್ತಿದ್ದರು. ಒಮ್ಮೆ ಕೈಲಾಸಂ ಅವರಿಗೆ ಭೆಟ್ಟಿಯಾಗಿ ಅವರನ್ನೂ ಒಂದು ಕಡೆ ಕೂರಿಸಿ "ಪರ್ಪಸ್" ಸುಲಾಯಿಸಿದರು ಅವರಿಗೆ. ಅನಂತರ ಈಗ ಕೀರ್ತಿಶೇಷ ಡಾ|| (ಸರ್) ಸಿ. ಆರ್. ರೆಡ್ಡಿಯವರಿಗೂ ಸುಲಾವಣೆ ಆಯಿತು. ಅದಾದ ೨೦ ವರ್ಷಗಳಿಗೆ ರೆಡ್ಡಿಯವರು 'ಪರ್ಪಸ್' ಮತ್ತು 'ಕರ್ಣ' ಎರಡಕ್ಕೂ ಬೇರೆ ಬೇರೆಯಾಗಿ "ಪರಿಚಯ" ಬರೆದುಕೊಟ್ಟರು ಅಕ್ಕರೆಯಿಂದ. ಇದಕ್ಕಾಗಿ ಕೈಲಾಸಂರನ್ನು ಸ್ವಂತ ಊರಾದ ಚಿತ್ತೂರಿಗೇ ಕರೆಸಿಕೊಂಡಿದ್ದರು. ಆ ಮುನ್ನುಡಿಯಲ್ಲೊಂದು ಮಾತ್ರ ಇನ್ನೂ ಉಳಿದಿದೆ.

೧೯೩೧ರ ಸುಮಾರಿಗೆ ಇಂಗ್ಲೆಂಡ್ ರಿಟರ್ನ್ಡ್ (ಇವರೂ with thanks ಅಲ್ಲ) ಪ್ರೊ. ಆರ್. ವಿ. ಜಾಗೀರ್‌ದಾರ್, ಎಂ.ಎ. (ಲಂಡನ್) (ಈಗ ಆದ್ಯ ರಂಗಾಚಾರ್ಯ; ಕಾವ್ಯನಾಮ–ಶ್ರೀರಂಗ), ಇವರ ಭೇಟಿಯಾಯಿತು. ಭೆಟ್ಟಿಯಾದ ಕೆಲವು ಗಳಿಗೆಗಳಲ್ಲೇ ಜನ್ಮಜನ್ಮಾಂತರದಿಂದ ಪರಸ್ಪರ ಬಾಂಧವ್ಯವಿದ್ದವರಂತೆ ಮಾತುಕತೆಗಳಲ್ಲಿ ತೊಡಗಿದರು. ಆನಂತರ ಪ್ರಸಿದ್ಧ ದಾರ್ಶನಿಕ ಕೀರ್ತಿಶೇಷ ಪಂಡಿತ ತಾರಾನಾಥರಾಯರ ಪ್ರೇಮಾಯತನದಲ್ಲಿ, ಇವರ ಮೈತ್ರಿಯ ಬೆಸುಗೆಯಾಗಿ ಕೈಲಾಸಂರ ಪ್ರತಿಭೆಯ ಪ್ರಚೋದನೆಯು ಮತ್ತಷ್ಟಾಯಿತು. ಆ ಸವಿ ನೆನಪುಗಳನ್ನು ಇನ್ನೂ ಮೆಲಕು ಹಾಕುತ್ತ, ಕೈಲಾಸಂ ಬಗ್ಗೆ ಇನ್ನೂ ಮೈತ್ರಿ

ವಿಶ್ವಾಸಗಳನ್ನಿಟ್ಟಿರುವ ಕೇವಲ ಕೆಲವೇ ಗಣ್ಯವ್ಯಕ್ತಿಗಳಲ್ಲಿ 'ಶ್ರೀರಂಗ'ರೂ ಒಬ್ಬರು. ಅವರ ವಿಶ್ವಾಸದ ಕರೆಯೇ ಮೊದಲಾಗಿ ನನ್ನಂಥ ಅಲ್ಪಜ್ಞನೊಬ್ಬನನ್ನು ಈ 'ಪರ್ಷಸ್' ನಾಟಕವನ್ನು ಕನ್ನಡಿಸುವಂತೆ ಮಾಡಿದ್ದು. ಇದನ್ನು ತಿದ್ದಿ ಅಚ್ಚು ಹಾಕಿಸಲೇಬೇಕೆಂಬ ಒತ್ತಾಯ ಅವರದೇ. ಇದರಲ್ಲಿನ ಕೆಟ್ಟ ಕನ್ನಡ, ತಪ್ಪುಗಳು, ಪೂರ್ಣ ನನ್ನವು. ಒಪ್ಪುಗಳು ಅವರವು.

"ಪರ್ಷಸ್"ನ ಉತ್ತಮ ಭಾಷಾಂತರಗಳೆರಡು, ಹಸ್ತಪ್ರತಿಗಳಲ್ಲಿವೆ. ಒಂದು ಮಂಗಳೂರಿನ ಶ್ರೀಯುತ ಉಲ್ಲಾಳ ಮಂಗೇಶರಾಯರದು; ಇನ್ನೊಂದು ದಿವಂಗತ ಶ್ರೀ ಕಂದಾಡೆ ಕೃಷ್ಣಯ್ಯಂಗಾರ್ಯರದು. ಎರಡೂ ಕೈಲಾಸಂ ಕಿವಿಗೆ ಬಿದ್ದಿತ್ತು – ಆಗಬಹುದೆಂದಿದ್ದರು. ಏಕೋ ಏನೋ ಅವು ಅಚ್ಚಾಗಲಿಲ್ಲ. ಕಂದಾಡೆಯವರದು ಅಚ್ಚಾಗಿದೆ, ಹೊರಬಿದ್ದಿಲ್ಲ. ಶ್ರೀ ತಿರುಮಲೆ ತಾತಾಚಾರ್ಯ ಶರ್ಮರ ಪುತ್ರ ಚಿ॥ ಶ್ರೀರಂಗ ಇದನ್ನು ಇಷ್ಟರಲ್ಲೇ ಹೊರತರಲಿದ್ದಾರೆ. ಅದು ಗ್ರಾಂಥಿಕ ಭಾಷೆಯಲ್ಲಿ ಕಂಗೊಳಿಸುತ್ತಿದೆ.

ಕೈಲಾಸಂ ನಿಧನವಾಗಿ ಇಂದಿಗೆ ಹತ್ತು ವರ್ಷವಾಯಿತು. ನವೆಂಬರ್ ೨೩-೨೪ಕ್ಕೆ ಅವರ ಹತ್ತನೆಯ ತಿಥಿ. ಅಷ್ಟರೊಳಗೆ ಈ ೬-೭ ವರ್ಷಗಳ ಉತ್ತರ ಭಾರತ ಯಾತ್ರೆಯಲ್ಲಿ ಅಲ್ಲಲ್ಲಿ ಸುಹೃದಯರನ್ನು ಕೂಡಿಸಿ ವಾಚನ ಕೊಟ್ಟುದರಿಂದಾಗಿ, "ಪರ್ಷಸ್" ಮರಾಠಿಯಲ್ಲಿ ಶ್ರೀ ಕೆ. ನಾರಾಯಣ ಕಾಳೆ ಯವರಿಂದ ಅನುವಾದಿತವಾಗಿ ಪುಸ್ತಕ ರೂಪದಲ್ಲಿ ಬಂದಿದೆ. ಬಂಗಾಳಿಯಲ್ಲಿ ಶ್ರೀ ರಮಣಾಶ್ರಮದ ಧರ್ಮದರ್ಶಿಗಳಲ್ಲೊಬ್ಬರಾದ ಶ್ರೀ ಅರವಿಂದ ಬೋಸರಿಂದ ಅನುವಾದಿತವಾಗಿ ಅಚ್ಚಿಗೆ ಸಿದ್ಧವಾಗಿದೆ.

ಈಗ ಆಲ್ ಇಂಡಿಯಾ ರೇಡಿಯೋ ಡೈರೆಕ್ಟರ್ ಜನರಲ್ ಶ್ರೀಯುತ ಜಗದೀಶಚಂದ್ರ ಮಾಥೂರ್ ಅವರ ಕೃಪೆಯಿಂದ ಈ ಸಲ ೬ನೆಯ ತಾರೀಖು ಸೆಪ್ಟೆಂಬರ್ ಅಂದು, ಅಖಿಲ ಭಾರತ ರೇಡಿಯೋ ವಿವಿಧ ಶಾಖೆಗಳಿಂದ ೧೪ ಭಾಷೆಗಳಲ್ಲೂ ಅನುವಾದವಾಗಿ 'ರಾಷ್ಟ್ರೀಯ ನಾಟಕ'ವಾಗಿ ರಾತ್ರೆ ೯-೩೦ ರಿಂದ ೧೧ ರವರೆಗೆ ಪ್ರಸಾರವಾಗಲಿದೆ. ಅದಕ್ಕಾಗಿ ಬೇಗನೆ ಕನ್ನಡಿಸಬೇಕಾಗಿ ಬಂದು, ನಾನೇ ಇದನ್ನೊಪ್ಪಿಕೊಂಡುದಕ್ಕೆ ಇದು ಎರಡನೆಯ ಕಾರಣ.

ಎಲ್ಲಕ್ಕಿಂತ ಹೆಚ್ಚಾಗಿ ಕೈಲಾಸಂ "old man of the sea"ಯಂತೆ ನನ್ನ ಹೆಗಲ ಮೇಲೇರಿ ಈ ಕೆಲಸಗಳೆಲ್ಲ ಮಾಡಿಸಿಕೊಳ್ಳುತ್ತಿದ್ದಾನೇಕೋ? ಕಾರಣ

ಹೇಳಲಾರದವನಾಗಿದ್ದೇನೆ—ಹಾಗೆ ಪ್ರಚೋದಿತನಾಗಿ ಈ ಕೆಲಸವನ್ನೂ ಇನ್ನಷ್ಟನ್ನೂ ಮಾಡಿದ್ದೇನೆ, ಮಾಡುತ್ತಲಿದ್ದೇನೆ—ಇನ್ನೂ ಮಾಡುತ್ತೇನೆ.

ಹೀಗೆ ನಾನು ಮಾಡುತ್ತಿರುವುದು ಅನೇಕರಿಗೆ,–ನನ್ನ ಹಿತಚಿಂತಕರಿಗೇ–ಹಿತವಿಲ್ಲ. ಗೊತ್ತು ನನಗದು! ಆದರೆ ಅದರ ಪರಿಹಾರವೆಂದರೆ, ಕೈಲಾಸಂ ನನ್ನ ಹೆಗಲಿಳಿದು ಅವರಿಗಿಂತ ಪ್ರತಿಭಾಶಾಲಿಗಳು ನನ್ನ ಹೆಗಲೇರಿದಾಗ. ಯಾರಾದರೂ ಆ ಕೆಲಸ ಮಾಡಲಿ! ಸಿದ್ಧವಾಗಿರುವೆ, ಆಗ, ಕೈಲಾಸಂ ಕೈಬಿಡಲು ...ಅದುವರೆಗೆ 'ಕೈ' ಅನ್ನುತ್ತಿದ್ದಂತೆ, "Please bear with me"!

ಕೈಲಾಸಂ 'ಕೀಚಕ'ವನ್ನು ಕೈಲಾಸಂ ಪ್ರೇಮಿ ಶ್ರೀ ಜಿ. ಪಿ. ರಾಜರತ್ನಂ ಅಕ್ಕರೆಯಿಂದ ಅನುವಾದಿಸಿ ಕನ್ನಡದಲ್ಲಿ ಅನರ್ಘ್ಯ ರತ್ನವೊಂದನ್ನಿತ್ತರು ಕನ್ನಡಿಗರಿಗೆ. ಈ 'ಪರ್ಪಸ್' ಕೂಡ ಅವರಿಂದಲೇ ಅನುವಾದವಾಗಿದ್ದಿದ್ದರೆ? ಇಂತಹ ರತ್ನ ಬೇರೊಂದಿಲ್ಲ ಎನ್ನುತ್ತಿದ್ದರು ಜನ. ಕೀರ್ತಿವೆತ್ತ ಶ್ರೀ ದತ್ತರಾಯ ಬೇಂದ್ರೆಯವರೂ ಅನುವಾದ ಮಾಡುವೆನೆಂದಿದ್ದಾರೆ. ಎರಡರಲ್ಲಿ ಯಾವುದು ಬಂದರೂ ರತ್ನವೇ! ಒಂದು ಪದ್ಯದಲ್ಲಿರುತ್ತದೆ, ಇನ್ನೊಂದು ಹಳಗನ್ನಡ ವಚನದಲ್ಲಿರಬಹುದು. ಇಬ್ಬರೂ ಕೈಲಾಸಂ ನಿಲುವನ್ನು ಕಂಡವರು. ನಾನು ಕೊರೆದ ಈ 'ಏಕಲವ್ಯ'ವನ್ನು ಅಚ್ಚಿನಲ್ಲಿ ನೋಡಿ ರೋಷವೆದ್ದಾದರೂ ಈ ಇಬ್ಬರ 'ಕನ್ನಡ ಏಕಲವ್ಯ'ಗಳು ಬರಲಿ, ಎಂದು ಉದ್ಧಟತನದಿಂದ, ತುಂಟತನದಿಂದ, ಇದನ್ನು ಮುದ್ರಿಸುವ ಸಾಹಸ ಮಾಡಿದ್ದೇನೆ. ಇದು ಕೊನೆಯ ಕಾರಣ. ಇದನ್ನೋದುವವರಿಗೆ ಆಗುವ ವೇದನೆಗಾಗಿ ಕ್ಷಮೆ ಕೋರುತ್ತೇನೆ.

c/o ಪ್ರಜಾವಾಣಿ,
ಬೆಂಗಳೂರು-೧, ಬಿ. ಎಸ್. ರಾಮರಾವ್
೧–೯–೧೯೫೬

ಕೃತಜ್ಞತೆ

'ಏಕಲವ್ಯ'ದ ಈ ಎರಡನೆಯ ಆವೃತ್ತಿ, ಮೊದಲದರಲ್ಲಿದ್ದ ತಪ್ಪುಗಳು ಕೆಲವನ್ನು ಒಳಗೊಂಡೇ ಹೊರಬೀಳುತ್ತಿರುವುದು ಅಕ್ಷಮ್ಯವೇ ಸರಿ. ಆದರೆ ಯೋಗ್ಯ ಅನುವಾದಕರ ಕೈ ಬಿಡುವಿಲ್ಲವಾಗಿ ಇದು ಹೀಗೆಯೇ ಬರುತ್ತಿದೆ. ಮುಂದಿನ ಮುದ್ರಣ ಉತ್ತಮ ಅನುವಾದವಾಗಿ ಪರಿಣಮಿಸಬಹುದೆಂಬ ಆಸೆ ಇದೆ.

ಈ ಎರಡನೆಯ ಆವೃತ್ತಿಗೆ ನೆರವಾದವರು ಸ್ಮರಣೀಯರು. ಕೈಲಾಸಂ ಕೃತಿಗಳು ಹೊಸ ಹೊದಿಕೆ ಹೊತ್ತು ಬರುವುದಕ್ಕೆ ಕಾರಣರಾದ ಅನೇಕ ಮಹನೀಯರು, ಸಂಸ್ಥೆಗಳು, ಇವರ ಹೆಸರನ್ನು ಹಿಂದಿನ ಕೃತಿಗಳಲ್ಲಿ ಸ್ಮರಿಸಿದ್ದಾಗಿದೆ, ಕೃತಜ್ಞತಾಪೂರ್ವಕ–

ಈಚಿನ ಸಾಲಿನಲ್ಲಿ, ಕರ್ಣ, ತಾಳೀಕಟ್ಟೋಕೂಲೀನೇ, ನಮ್ಮ ಬ್ರಾಹ್ಮಣಿಕೆ ಗಳಿಗೆ ನೆರವಾದವರು: ಮಾಗಡಿ ರಸ್ತೆ ಕೆಂಪಾಪುರದ ಕೆ. ರಾಮಸ್ವಾಮಿ ೨೦ ರೂಪಾಯಿ; ಅಲ್ಲಿನ ಶಂಕರ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್‌ನ ಪ್ರಿನ್ಸಿಪಲ್ ಎಂ. ಕೃಷ್ಣ ೪೦ ರೂಪಾಯಿ; ಚಾಮರಾಜಪೇಟೆಯ ಮಾಧವಕೃಷ್ಣಯ್ಯ ಗರ್ಲ್ಸ್ ಹೈಸ್ಕೂಲಿನವರು, ಬಸವನಗುಡಿ ನಾರ್ತ್ ರೋಡಿನ ಮಹಾರಾಷ್ಟ್ರ ಮಹಿಳಾ ಮಂಡಲದ ಹೈಸ್ಕೂಲು ಇಬ್ಬರೂ ತಲಾ ೬೦ ರೂಪಾಯಿ; ಇದೇ ಹೈಸ್ಕೂಲಿನ ಉಪಾಧ್ಯಾಯಿನಿಯರು ೨೫ ರೂಪಾಯಿ; ಬೆಂಗಳೂರು ರಾಜಾಜಿನಗರದ ಸರ್ವೋದಯ ಹೈಸ್ಕೂಲಿನವರು ಮಾನ್ಯ ಶ್ರೀ ಕೆ. ದೇವಯ್ಯನವರ ಅಧ್ಯಕ್ಷತೆಯಲ್ಲಿ ವಾಚನ ಏರ್ಪಡಿಸಿ ಕೊಟ್ಟ ೪೦ ರೂಪಾಯಿ; ಶೃಂಗೇರಿಯ ಕಾಲೇಜಿನ ಪ್ರಿನ್ಸಿಪಲ್ ರಾಮಕೃಷ್ಣರಾವ್ ಮತ್ತು ಅಲ್ಲಿನ ಪೋಸ್ಟ್‌ಮಾಸ್ಟರ್ ನರಸಿಂಹಮೂರ್ತಿ ಇವರಿಬ್ಬರಿಂದ ಬಂದದ್ದು ೩೮ ರೂಪಾಯಿ; ಚಿತ್ರ ನಿರ್ಮಾಪಕ ಪಟ್ಟಾಭಿರಾಮ ರೆಡ್ಡಿ ಅವರ 'ಸಂಸ್ಕಾರ' ಚಿತ್ರದಲ್ಲಿ ಕೇವಲ ಕೆಲವು ಕ್ಷಣದ ಪಾತ್ರವನ್ನು ನಾನು ವಹಿಸಿದ್ದಕ್ಕಾಗಿ ಬಂದ ೧೧೬ ರೂಪಾಯಿ; ಮತ್ತೆ ಮೈಕೋ ಸಂಸ್ಥೆಯ ಪರ್ಸೊನೆಲ್ ಮ್ಯಾನೇಜರ್ ಗೋಪಿನಾಥ್‌ರಿಂದ ಮೈಕೋ ಫೈನ್ ಆರ್ಟ್ಸ್ ಸೊಸೈಟಿ ಪರವಾಗಿ ೧೦೦ ರೂಪಾಯಿ ಮತ್ತು ಕೊನೆಯದಾಗಿ ಬಸವನಗುಡಿಯ

'ಕುರಸೋಲ್' ಔಷಧಿ ನಿರ್ಮಾಪಕರಾದ ದಿ ಇಂಟರ್‌ನ್ಯಾಷನಲ್ ಎಂಡ್ ಬಯಲಾಜಿಕಲ್ ಇನ್‌ಸ್ಟಿಟ್ಯೂಟ್‌ನ ಮ್ಯಾನೇಜಿಂಗ್ ಡೈರೆಕ್ಟರ್ ವೈ. ಎಂ. ನರಸಿಂಹಮೂರ್ತಿ ಅವರು ತಮ್ಮ ಸಂಸ್ಥೆಯ ಪರವಾಗಿ ದಾನವಾಗಿ ಕೊಟ್ಟ ೧೦೦೦ ರೂಪಾಯಿ, ಮತ್ತಿತರ ಮಿತ್ರರು, ಕೈಲಾಸಂ ಅಭಿಮಾನಿಗಳು ಕೊಡ ಮಾಡಿದ ಈ ಮೊತ್ತದಿಂದ ಮೇಲೆ ಸೂಚಿಸಿದ ಮೂರು ಪುಸ್ತಕಗಳ ಭಾಗಶಃ ಮುದ್ರಣ ಮುಂತಾದುದರ ಖರ್ಚು ಮತ್ತು ಉಳಿದ ಸೂಳೆ, ಹುತ್ತದಲ್ಲಿ ಹುತ್ತ ಮುಂತಾದ ಇನ್ನೂ ೩-೪ ಕೃತಿಗಳ ಮುದ್ರಣ ಪೂರೈಸಲು ಆಗುವ ಖರ್ಚಿನ ಸ್ವಲ್ಪಪಾಲು ಅಳವಡುತ್ತದೆ. ಆಯಾ ದಾನಿಗಳು ಕೃತಜ್ಞಾರ್ಹರು. ಉಳಿದ ಹೊತ್ತಿಗೆಗಳನ್ನು ಇದೇ ನವೆಂಬರ್ ೨೪ರ ಒಳಗೆ ಹೊರತರಬಹುದೆಂಬ ಭರವಸೆಯೂ ಇದರಿಂದ ಮೂಡಿದೆ–ಅಲ್ಲಿಗೆ ಕೈಲಾಸಂ ಎಲ್ಲ ಕೃತಿಗಳ ಪುನರ್ ಮುದ್ರಣ ಕಾರ್ಯ ಮುಗಿಯುವ ಘಟ್ಟ ಬರುತ್ತದೆ.

ಈ ಪುಸ್ತಕಗಳನ್ನು ಗೋಖಲೆ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್, ದಿ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಹನುಮಂತನಗರದ ಮಹಿಳಾ ಕಾರ್ಮಿಕರ ಸಂಘ, ಬಳೇಪೇಟೆಯ ಗೀತಾ ಪಬ್ಲಿಕೇಷನ್ಸ್, ಮೈಸೂರಿನ ಗೀತಾ ಬುಕ್ ಹೌಸ್ ಸಂಸ್ಥೆಗಳು ಮಾತ್ರ ಮಾರುತ್ತವೆ. ಬಂದ ಹಣದಲ್ಲಿ ಕೈಲಾಸಂ ಹೆಸರಿನಲ್ಲಿ ಒಂದು 'ಫಂಡ್' ಅನ್ನು ಅವರವರೇ ರೂಢಿಸಿಕೊಂಡು ಅವರವರಿಗೆ ತೋಚಿದ ಯೋಗ್ಯರೀತಿಯಲ್ಲಿ ಅದರ ವಿನಿಯೋಗ ಮಾಡುತ್ತಾರೆ.

ಈ ಸಂಸ್ಥೆಗಳಿಗೆ ಒಂದಿಟ್ಟು ಸಾವಿರ ರೂಪಾಯಿನಷ್ಟು ಅಚ್ಚಾದ ಪುಸ್ತಕಗಳನ್ನು ಉಚಿತವಾಗಿ ಅಂದರೆ "Gift" ಆಗಿ ಕೊಟ್ಟುಬಿಟ್ಟಿದ್ದೇನೆ. ಅವರು ಮಾರಿ ಬಂದ ಹಣದ ಮೇಲೆ ನನಗೆ ಯಾವ ಹಕ್ಕೂ ಇಲ್ಲ. ಆ ಹಣವೆಲ್ಲ ಅವರವೇ. ಅಚ್ಚುಮಾಡಿದ ಕೈ ಕೃತಿಗಳನ್ನು ಈ ಸಂಸ್ಥೆಗಳಿಗೂ ಶಾಲಾ ಕಾಲೇಜು ಸಂಘಗಳಿಗೂ 'gift' ಆಗಿ ಹಂಚುವುದಷ್ಟೇ ನನ್ನ ಕೆಲಸ. ಈ ಕೆಲಸ ಸಮರ್ಪಕವಾಗಿ ನೆರವೇರಲು ನನಗೆ ನೆರವು ನೀಡುತ್ತಿರುವ ಸಾರ್ವಜನಿಕ ಸಹೃದಯರ ಕ್ಷೇಮ ಕೋರಿಕೆಯೇ ನನ್ನ ಪ್ರಾರ್ಥನೆ.

ಬೆಂಗಳೂರು-೧೧,
೧–೧೧–೧೯೭೯

ಬಿ. ಎಸ್. ರಾಮರಾವ್

ಅನುಬಂಧ ವಿಭಾಗದ ಮೊದಲಲ್ಲಿ ಅಚ್ಚಾಗಿರುವ ಕೈಲಾಸಂ ಇಂಗ್ಲಿಷ್ ನಾಟಕಗಳ ವಿಮರ್ಶೆಯು ಧಾರವಾಡದಲ್ಲಿನ 'ಸಂಕ್ರಮಣ' ಪತ್ರಿಕೆಯಲ್ಲಿ ಪ್ರಕಟವಾದುದು. ಧಾರವಾಡದ ಆಲ್ ಇಂಡಿಯಾ ರೇಡಿಯೋ ಟ್ರ್ಯಾನ್ಸ್‌ಮಿಷ್ಟ ಅಧಿಕಾರಿ ಶ್ರೀ ಶ್ರೀನಿವಾಸ ಕುಲಕರ್ಣಿಯವರು 'ಸಂಕ್ರಮಣ'ದ ಸಂಪಾದಕ ಶ್ರೀ ಸಿದ್ಧಲಿಂಗಪಟ್ಟಣ ಶೆಟ್ಟಿಯವರಿಗೂ, ಲೇಖಕಕರ್ತೃ ಡಾ॥ ಜಿ.ಎಸ್.ಆಮೂರ್ ಅವರಿಗೂ ಪತ್ರ ಬರೆದು ಇದನ್ನು ತರಿಸಿಕೊಟ್ಟರು.

ಡಾ॥ ಆಮೂರ್, ಎಂ.ಎ., ಪಿಎಚ್.ಡಿ. ಅವರು ಔರಂಗಾಬಾದಿನಲ್ಲಿ ಮರಾಠವಾಡ ಯೂನಿವರ್ಸಿಟಿಯ 'ರೀಡರ್ ಇನ್ ಇಂಗ್ಲಿಷ್' ಆಗಿದ್ದಾರೆ.

"ನನ್ನ ಲೇಖನ 'ಏಕಲವ್ಯ'ದೊಡನೆ ಪುನರ್ಮುದ್ರಿತವಾಗುತ್ತಿರುವುದು ನನಗೆ ಸಂತೋಷವನ್ನುಂಟುಮಾಡಿದೆ. ಕೈಲಾಸಂ ನಾಟಕಗಳ ಪುನರ್ವಿಮರ್ಶೆ ಇಂದು ಅತ್ಯಗತ್ಯವಾಗಿ ನಡೆಯಬೇಕಾದ ಕಾರ್ಯಗಳಲ್ಲೊಂದು. ಈ ದಿಕ್ಕಿನಲ್ಲಿ ನನ್ನ ಲೇಖನ ಒಂದು ಹೆಜ್ಜೆ ಮಾತ್ರ" ಎಂದು ನನಗೆ ಸೌಜನ್ಯಪೂರ್ವಕ ಪತ್ರ ಬರೆದು ಪ್ರಕಟಿಸಲು ಅನುಮತಿ ಇತ್ತರು.

'ಸಂಕ್ರಮಣ'ದ ಸಂಪಾದಕ ಶ್ರೀ ಸಿದ್ಧಲಿಂಗಪಟ್ಟಣ ಶೆಟ್ಟಿಯವರು, ಡಾ॥ ಆಮೂರ್‌ರವರಿಗೆ ಪತ್ರ ಬರೆಯಲು ಸೂಚಿಸಿ "ಸಂಕ್ರಮಣದಲ್ಲಿ ಪ್ರಕಟವಾದ ಡಾ॥ ಜಿ. ಎಸ್. ಆಮೂರ ಅವರ 'ಕೈಲಾಸಂ' ಬಗೆಗಿನ ಲೇಖನವನ್ನು ನಿಮ್ಮ ಸಂಕಲನ–ಗ್ರಂಥದಲ್ಲಿ ಪ್ರಕಟಿಸಬಹುದು" ಎಂದು ತಮ್ಮ ಸೌಜನ್ಯಸೂಚಕ ಪತ್ರದಲ್ಲಿ ಒಪ್ಪಿಗೆಯಿತ್ತರು.

ಈ ಮೂವರು ಮಹನೀಯರಿಗೂ ಕೃತಜ್ಞತಾಪೂರ್ವಕ ವಂದನೆ ಸಲ್ಲಬೇಕಾದುದು.

ಹೊಸ ಹೊದಿಕೆ ಹೊತ್ತು ಹೊರಬಂ[...]

ಕೈಲಾಸಂ ಹೊತ್ತಿಗೆಗಳು

ಟೊಳ್ಳುಗಟ್ಟಿ (ಭಾಗ ೧) ★ ವೈದ್ಯನ ವ್ಯಾಧಿ ★
ಪೋಲೀ ಕಿಟ್ಟೀ ★ ಬಂಡವಾಳವಿಲ್ಲದ ಬಡಾಯಿ ★
ಅಮ್ಮಾವ್ರ ಗಂಡ ★ ಸತ್ತವನ ಸಂತಾಪ ★ ಅನುಕೂಲಕ್ಕೊಬ್ಬ[...]
ತಾವರೆಕೆರೆ ★ ಸೀಕರ್ಣೆ ಸಾವಿತ್ರಿ ★ ತಾಳೀಕಟ್ಟೋಕ್ಕೂಲೀನೇ
ನಮ್ ಬ್ರಾಹ್ಮಣಿಕೆ ★ ಏಕಲವ್ಯ ('ಪರ್ಪಸ್'ನ ಕನ್ನಡ ಅನುವಾದ)
ಇಂಗ್ಲಿಷಿನಲ್ಲಿ: ಪರ್ಪಸ್ ★ ಲಿಟಲ್ ಲೇಸ್ ಎಂಡ್ ಪ್ಲೇಸ್ ★ ಕ[...]

★ ★ ★

ಜಿ. ಪಿ. ರಾಜರತ್ನಂ ಅವರ

★ ಕೈಲಾಸಂ ನೆನಪು ಮತ್ತು ಕೈಲಾಸ ಕಥನ
★ ಏಕಲವ್ಯ (ಕೈಲಾಸಂ ಅವರ 'ಪರ್ಪಸ್' ನಾಟಕದ ಸಾರವಿಸ್ತಾರ)

★ ★ ★

D.K.V. HIGH SCHOOL ... LIBRARY ... S. Kanara

ಬೆಂಗಳೂರಿನಲ್ಲಿ:

★ ಗೀತಾ ಏಜೆನ್ಸೀಸ್, ಬಳೇಪೇಟೆ

★ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ
ನರಸಿಂಹರಾಜಾ ಕಾಲೋನಿ

★ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್
ಬಿ. ಪಿ. ವಾಡಿಯಾ ರಸ್ತೆ, ಬಸವನಗುಡಿ

★ ಮಹಿಳಾ ಕಾರ್ಮಿಕರ ಕೋ-ಆಪರೇಟಿವ್ ಸೊಸೈಟಿ
ಹನುಮಂತನಗರ

ಮೈಸೂರಿನಲ್ಲಿ:

★ ಗೀತಾ ಬುಕ್ ಹೌಸ್, ನ್ಯೂ ಸ್ಟ್ಯಾಚೂ ಸರ್ಕಲ್

ಈ ಸಂಸ್ಥೆಗಳಿಂದ ಮೇಲಿನ ಕೃತಿಗಳನ್ನು ಬೆಲೆಗೆ ಪಡೆಯಬಹುದು.